# ಕರ್ನಾಟಕ ಸರ್ಕಾರದ ನಡುವಳಿಗಳು

**ವಿಷಯ:** 2022-23ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 141 ರ ಘೋಷಣೆಯಂತೆ ""ಬಾಲ್ಯವಿವಾಹ ತಡೆಗಟ್ಟುವ ಉದ್ದೇಶದಿಂದ ಕೊಪ್ಪಳ ಜಿಲ್ಲೆಯಲ್ಲಿ ಜಾರಿಗೆ ತಂದ "ಸ್ಫೂರ್ತಿ" ಯೋಜನೆಯನ್ನು ಬಾಗಲಕೋಟೆ, ವಿಜಯಪುರ, ರಾಯಚೂರು, ಬೆಳಗಾವಿ ಮತ್ತು ಕಲಬುರಗಿ ಈ 5 ಜಿಲ್ಲೆಗಳ 11 ತಾಲ್ಲೂಕುಗಳಲ್ಲಿ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.

**ಓದಲಾಗಿದೆ:**
1. 2022-23ನೇ ಸಾಲಿನ ಆಯವ್ಯಯ ಘೋಷಣೆ ಕಂಡಿಕೆ-141
2. ಸರ್ಕಾರದ ಆದೇಶ ಸಂಖ್ಯೆ: ಮಮಇ 95 ಮಮಅ 2022, ದಿನಾಂಕ: 30-04-2022.
3. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಇವರ ಏಕ ಕಡತ ಸಂಖ್ಯೆ: WCD/CW/CMPC/15/2022-WCD-CW-WOMEN AND CHILD DEVELOPMENT.

*******

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ(1)ರಂತೆ 2022-23ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 141 ರಲ್ಲಿ "ಬಾಲ್ಯ ವಿವಾಹವನ್ನು ತಡೆಗಟ್ಟುವ ಉದ್ದೇಶದಿಂದ ಕೊಪ್ಪಳ ಜಿಲ್ಲೆಯಲ್ಲಿ ಯಶಸ್ವಿಯಾಗಿ ಅನುಷ್ಠಾನಗೊಳಿಸಿರುವ "ಸ್ಫೂರ್ತಿ" ಯೋಜನೆಯನ್ನು ವಿಸ್ತರಿಸಲಾಗುವುದು "ಎಂದು ಘೋಷಣೆ ಮಾಡಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ(2)ರ ಆದೇಶದಲ್ಲಿ 2022-23ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 141 ರಲ್ಲಿ ಘೋಷಿಸಿರುವಂತೆ "ಬಾಲ್ಯ ವಿವಾಹವನ್ನು ತಡೆಗಟ್ಟುವ ಉದ್ದೇಶದಿಂದ ಕೊಪ್ಪಳ ಜಿಲ್ಲೆಯಲ್ಲಿ ಯಶಸ್ವಿಯಾಗಿ ಅನುಷ್ಠಾನಗೊಳಿಸಿರುವ "ಸ್ಫೂರ್ತಿ" ಯೋಜನೆಯನ್ನು ವಿಸ್ತರಿಸಲು" ಆಡಳಿತಾತ್ಮಕ ಅನುಮೋದನೆ ನೀಡಿದೆ ಹಾಗೂ ಈ ಯೋಜನೆಗೆ ಸಂಬಂಧಿಸಿದ ರೂಪುರೇಷೆ ಹಾಗೂ ಮಾರ್ಗಸೂಚಿಗಳನ್ನು ಪ್ರತ್ಯೇಕವಾಗಿ ಹೊರಡಿಸಲಾಗುವುದು. ಇದಕ್ಕೆ ತಗಲುವ ವೆಚ್ಚವನ್ನು 2022-23ನೇ ಆಯವ್ಯಯದ ಮಿತಿಗೊಳಪಟ್ಟು ಲೆಕ್ಕ ಶೀರ್ಷಿಕೆ-2235-02-103-0-72-133 ರಡಿ ಒದಗಿಸಿರುವ ರೂ.1250.00 ಲಕ್ಷಗಳ ಅನುದಾನದಲ್ಲಿ ಭರಿಸತಕ್ಕದ್ದು ಎಂದು ತಿಳಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ(3)ರ ಏಕ ಕಡತದಲ್ಲಿ ಬಾಲ್ಯವಿವಾಹ ತಡೆಗಟ್ಟುವ ಉದ್ದೇಶದಿಂದ ಕೊಪ್ಪಳ ಜಿಲ್ಲೆಯಲ್ಲಿ ಜಾರಿಗೆ ತಂದ "ಸ್ಫೂರ್ತಿ" ಯೋಜನೆಯನ್ನು ಬಾಗಲಕೋಟೆ, ವಿಜಯಪುರ, ರಾಯಚೂರು, ಬೆಳಗಾವಿ ಮತ್ತು ಕಲಬುರ್ಗಿ ಜಿಲ್ಲೆಗಳ 11 ತಾಲ್ಲೂಕುಗಳಲ್ಲಿ 1 ವರ್ಷದ ಅವಧಿಗೆ ರೂ. 12.51 ಕೋಟಿಗಳಲ್ಲಿ ಅನುಷ್ಠಾನಗೊಳಿಸಲು. ಮೊದಲನೇ ವರ್ಷ ಯಶಸ್ವಿ ಅನುಷ್ಠಾನದ ಮೇಲೆ, ಆರ್ಥಿಕ ಇಲಾಖೆಯ ಅನುಮೋದನೆಯೊಂದಿಗೆ ಮುಂದಿನ ಎರಡು ವರ್ಷಗಳ ಅವಧಿಗೆ ಮುಂದುವರೆಸಲು ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಮಮಇ 95 ಮಮಅ 2022, ಬೆಂಗಳೂರು,**
**ದಿನಾಂಕ: 24-01-2023**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2022-23ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 141 ರಲ್ಲಿ ಘೋಷಿಸಿರುವಂತೆ "ಬಾಲ್ಯವಿವಾಹ ತಡೆಗಟ್ಟುವ ಉದ್ದೇಶದಿಂದ ಕೊಪ್ಪಳ ಜಿಲ್ಲೆಯಲ್ಲಿ ಜಾರಿಗೆ ತಂದ "ಸ್ಫೂರ್ತಿ" ಯೋಜನೆಯನ್ನು ಬಾಗಲಕೋಟೆ, ವಿಜಯಪುರ, ರಾಯಚೂರು, ಬೆಳಗಾವಿ ಮತ್ತು ಕಲಬುರಗಿ ಈ 5 ಜಿಲ್ಲೆಗಳ 11 ತಾಲ್ಲೂಕುಗಳಲ್ಲಿ ರೂ. 12.51 ಕೋಟಿಗಳ ಮೊತ್ತದಲ್ಲಿ ಒಂದು ವರ್ಷದ ಅವಧಿಗೆ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಿದೆ.

2..

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ/209/ವೆಚ್ಚ-10/2022, ದಿನಾಂಕ:21.12.2022 ಹಾಗೂ ಯೋಜನೆ ಇಲಾಖೆಯ ಟಿಪ್ಪಣಿ ಸಂಖ್ಯೆ: ಪಿಡಿಎಸ್ 71 ಐಎಂಎಂ 2022, ದಿನಾಂಕ:30-12-2022ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

N.S. Khatavkar
24/01/2023

**(ನಿರ್ಮಲಾ ಎಸ್. ಖಟಾವ್‌ಕರ್)**
ಸರ್ಕಾರದ ಅಧೀನ ಕಾರ್ಯದರ್ಶಿ-1
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಇಲಾಖೆ

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು(ಎ&ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ: 5329, ಬೆಂಗಳೂರು- 560 001
2. ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ,ಬೆಂಗಳೂರು.
5. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
6. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.
7. ನಿರ್ದೇಶಕರು / ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
8. ಎಲ್ಲಾ ಜಿಲ್ಲೆಯ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿಗಳು, .
9. ಎಲ್ಲಾ ಜಿಲ್ಲೆಯ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.
10. ಎಲ್ಲಾ ಶಿಶು ಅಭಿವೃದ್ಧಿ ಯೋಜನಾಧಿಕರಿಗಳು , ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
11. ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತರನ ಮತ್ತು ಹಿರಿಯ ನಾಗರಿಕೆ ಸಬಲೀಕರಣ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
12. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ , ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ,
13. ಸರ್ಕಾರದ ಜಂಟಿ ಕಾರ್ಯದರ್ಶಿ, ಸಚಿವ ಸಂಪುಟ ಶಾಖೆ, ವಿಧಾನಸೌಧ, ಬೆಂಗಳೂರು (ಪ್ರಕರಣ ಸಂಖ್ಯೆ:ಸಿ/2023)
14. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-10), ವಿಧಾನಸೌಧ, ಬೆಂಗಳೂರು
15. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು

(ಕ್ರಮ ಸಂಖ್ಯೆ:8 ,9 ಮತ್ತು 10 ನಿರ್ದೇಶಕರ ಮುಖಾಂತರ)



Generated from eOffice by muniraju, WCD-CW-FDA(MR)(I/C), FIRST DIVISION ASSISTANT, WOMEN AND CHILD DEVELOPMENT on 01/09/2023 04:24 PM

# ಕರ್ನಾಟಕ ಸರ್ಕಾರದ ನಡುವಳಿಗಳು

**ವಿಷಯ:** 2022-23ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 141 ರ ಘೋಷಣೆಯಂತೆ ""ಬಾಲ್ಯವಿವಾಹ ತಡೆಗಟ್ಟುವ ಉದ್ದೇಶದಿಂದ "ಸ್ಫೂರ್ತಿ- ಹದಿಹರೆಯದ ಹೆಣ್ಣುಮಕ್ಕಳಿಗೆ ಜೀವನ ಕೌಶಲ್ಯ ಆಧಾರಿತ ಕಾರ್ಯಕ್ರಮದ ಅನುಷ್ಠಾನಕ್ಕಾಗಿ " ರೂ. 1250.00 ಲಕ್ಷಗಳ ಕ್ರಿಯಾಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.

**ಓದಲಾಗಿದೆ:**
1. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಏಕಕಡತ ಸಂಖ್ಯೆ: WCD/CW/CMPC/21/2022-WCD-CW-WOMEN AND CHILD DEVELOPMENT
2. ಯೋಜನಾ ಇಲಾಖೆಯ ಆದೇಶ ಸಂಖ್ಯೆ: ಪಿಡಿಎಸ್ 60 ಎಸ್‌ಡಿಪಿ 2022 (ಭಾಗ-1), ದಿನಾಂಕ: 03.02.2023

*******

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ(1)ರ ನಿರ್ದೇಶನಾಲಯದ ಏಕ ಕಡತದಲ್ಲಿ, 2022-223 ನೇ ಸಾಲಿನ ವಿಶೇಷ ಅಭಿವೃದ್ಧಿ ಯೋಜನೆಯಡಿ 12 ರಿಂದ 18 ವರ್ಷಗಳ ವಯೋಮಾನದ ಹದಿಹರೆಯದ ಹೆಣ್ಣುಮಕ್ಕಳಿಗೆ ಸ್ಫೂರ್ತಿ ಯೋಜನೆಯಡಿ ಬಾಲ್ಯವಿವಾಹಗಳನ್ನು ತಡೆಗಟ್ಟುವುದು, 12 ರಿಂದ 18 ವರ್ಷದ ಶಾಲೆ ಬಿಡುವ ಹೆಣ್ಣು ಮಕ್ಕಳ ಪ್ರಮಾಣವನ್ನು ತಗ್ಗಿಸುವುದು, ಹದಿಹರೆಯದ ಹೆಣ್ಣು ಮಕ್ಕಳ ಪೌಷ್ಟಿಕಾಂಶ ಪ್ರಮಾಣ ಹೆಚ್ಚು ಮಾಡಿ ಅವರ ಆರೋಗ್ಯವನ್ನು ಸದೃಢಗೊಳಿಸುವುದು, ಪೋಷಕರು ಮತ್ತು ಮಕ್ಕಳ ನಡುವಿನ ಬಾಂಧವ್ಯ ಸುಧಾರಣೆ ಹಾಗೂ ಕುಟುಂಬಗಳ ಸಮೀಕ್ಷೆ, ಹದಿಹರೆಯದ ಹೆಣ್ಣುಮಕ್ಕಳ ಎಣಿಕೆ (enumeration) ಮತ್ತು ಪೋಷಕರ ಗುಂಪು ರಚನೆ, ಹದಿಹರೆಯದ ಮಕ್ಕಳ ಮತ್ತು ಪೋಷಕರ ಸಭೆ, ಜೀವನ ಕೌಶಲ್ಯ ಶಿಕ್ಷಣ (Life Skill Education), ನಾಯಕತ್ವ ಮತ್ತು ಸಂವಹನ ಕೌಶಲ್ಯ, ಪೌಷ್ಟಿಕತೆ ವೃದ್ಧಿಸುವ ಕಾರ್ಯತಂತ್ರ, ಕಲಿಕಾ ಪ್ರವಾಸ, ಕ್ಷೇತ್ರ ಭೇಟಿ, ಬೋದನೆ / ತರಬೇತಿ ( Tution), ಕ್ರೀಡಾಕೂಟ ಅಂತರ ಕ್ರಿಯಾತ್ಮಕ ಆಪ್ತ ರಂಗಭೂಮಿ, ಮಕ್ಕಳ ಗ್ರಾಮಸಭೆ ಇನ್ನಿತರೆ ಕಾರ್ಯಕ್ರಮಗಳ ಮೂಲಕ ಸ್ಫೂರ್ತಿ ಯೋಜನೆಯನ್ನು ಕೆ.ಹೆಚ್.ಪಿ.ಟಿ. ಸಂಸ್ಥೆಯ ಮೂಲಕ ಸ್ಫೂರ್ತಿ ಯೋಜನೆಯನ್ನು ಅನುಷ್ಠಾನಗೊಳಿಸಲು ರಾಜ್ಯದ ಜಿಲ್ಲೆಗಳಾದ ಬೆಳಗಾವಿ, ಬಾಗಲಕೋಟೆ, ವಿಜಯಪುರ, ಕಲ್ಬುರ್ಗಿ ಮತ್ತು ರಾಯಚೂರು ಜಿಲ್ಲೆಗಳ 11 ತಾಲ್ಲೂಕುಗಳಾದ (ಸವದತ್ತಿ, ಗೋಕಾಕ, ಹುಕ್ಕೇರಿ, ಹುನಗುಂದ, ಮುದ್ದೇಬಿಹಾಳ, ಇಂಡಿ, ಚಿಂಚೋಳಿ, ಚಿತ್ತಾಪುರ ಜೇವರ್ಗಿ, ದೇವದುರ್ಗ ಮತ್ತು ಲಿಂಗಸುಗೂರು) ಗಳಲ್ಲಿ ಸ್ಫೂರ್ತಿ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದ್ದು, ಸುಮಾರು 50000 ಫಲಾನುಭವಿಗಳಿಗೆ ಸ್ಫೂರ್ತಿ – ಹದಿಹರೆಯದ ಹೆಣ್ಣುಮಕ್ಕಳಿಗೆ ಜೀವನ ಕೌಶಲ್ಯ ಆಧಾರಿತ ಕಾರ್ಯಕ್ರಮದ ಲೆಕ್ಕ ಶೀರ್ಷಿಕೆ 2235-02-103-0-72-133 ರಡಿ ರೂ. 1250.00 ಲಕ್ಷಗಳ ಕ್ರಿಯಾಯೋಜನೆ ಸಿದ್ದಪಡಿಸಿ ಪ್ರಸ್ತಾವನೆಯನ್ನು ಅನುಮೋದನೆಗೆ ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (2) ರ ಯೋಜನಾ ಇಲಾಖೆಯ ಆದೇಶದಲ್ಲಿ, 2022-23 ನೇ ಸಾಲಿನ ವಿಶೇಷ ಅಭಿವೃದ್ಧಿ ಯೋಜನೆಯಡಿ ಮಹಿಳಾ ಮತ್ತು ಮಕ್ಕಳ ಮಕ್ಕಳ ಅಭಿವೃದ್ಧಿ ಇಲಾಖೆಯ ಸ್ಫೂರ್ತಿ - ಹದಿಹರೆಯದ ಹೆಣ್ಣುಮಕ್ಕಳಿಗೆ ಜೀವನ ಕೌಶಲ್ಯ ಆಧಾರಿತ ಕಾರ್ಯಕ್ರಮದ ಲೆಕ್ಕ ಶೀರ್ಷಿಕೆ 2235-02-103-0-72-133 ರಡಿ ರೂ. 1250.00 ಲಕ್ಷಗಳ ಕ್ರಿಯಾಯೋಜನೆಗೆ ಕೆಲವೊಂದು ಷರತ್ತಿಗೊಳಪಟ್ಟು ಅನುಮೋದನೆ ನೀಡಿ ಆದೇಶಿಸಲಾಗಿದೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

## ಸರ್ಕಾರದ ಆದೇಶ ಸಂಖ್ಯೆ: ಮಮಇ 95 ಮಮಅ 2022, ಬೆಂಗಳೂರು, ದಿನಾಂಕ: 04-02-2023

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, 2022-23 ನೇ ಸಾಲಿನ ವಿಶೇಷ ಅಭಿವೃದ್ಧಿ ಯೋಜನೆಯಡಿ ಮಹಿಳಾ ಮತ್ತು ಮಕ್ಕಳ ಮಕ್ಕಳ ಅಭಿವೃದ್ಧಿ ಇಲಾಖೆಯ ಸ್ಫೂರ್ತಿ - ಹದಿಹರೆಯದ ಹೆಣ್ಣು ಮಕ್ಕಳಿಗೆ ಜೀವನ ಕೌಶಲ್ಯ ಆಧಾರಿತ ಕಾರ್ಯಕ್ರಮದ ಲೆಕ್ಕ ಶೀರ್ಷಿಕೆ 2235-02-103-0-72-133 ರಡಿ ರೂ. 1250.00 ಲಕ್ಷಗಳ (ಒಂದು ಸಾವಿರದ ಇನ್ನೂರ ಐವತ್ತು ಲಕ್ಷಗಳು ಮಾತ್ರ)

..2



Generated from eOffice by muniraju, WCD-CW-FDA(MR)(I/C), FIRST DIVISION ASSISTANT, WOMEN AND CHILD DEVELOPMENT on 01/09/2023 04:38 PM

ಕ್ರಿಯಾಯೋಜನೆಗೆ ಅನುಬಂಧದಲ್ಲಿರುವಂತೆ ಈ ಕೆಳಕಂಡ ಷರತ್ತಿಗೊಳಪಟ್ಟು ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಿದೆ.

1. ಈ ಕ್ರಿಯಾ ಯೋಜನೆಯಲ್ಲಿ ಅನುಮೋದನೆಯಾದ ಕಾಮಗಾರಿಗಳಿಗೆ ಅಂದಾಜು ತಯಾರಿಸಿ, ಸಕ್ಷಮ ಪ್ರಾಧಿಕಾರಗಳಿಂದ ತಾಂತ್ರಿಕ ಮತ್ತು ಆಡಳಿತಾತ್ಮಕ ಅನುಮೋದನೆ ಪಡೆದು ಅನುಷ್ಠಾನಗೊಳಿಸುವುದು.
2. ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ/38/ಉಕಾ(ಆ&ಸಂ)/2022, ದಿನಾಂಕ: 13-12-2022ರಂತೆ ಕ್ರಮವಹಿಸುವುದು. (ಪ್ರತಿ ಲಗತ್ತಿಸಿದೆ)
3. ಸದರಿ ಕಾಮಗಾರಿಗಳನ್ನು ಮಹತ್ವಾಕಾಂಕ್ಷಿ ತಾಲ್ಲೂಕುಗಳಲ್ಲಿ ಕೈಗೊಳ್ಳತಕ್ಕದ್ದು.
4. ಕಾಮಗಾರಿಗಳನ್ನು ಕೆಟಿಪಿಪಿ ಕಾಯ್ದೆ 1999 ನಿಯಮ 2000 ರನ್ವಯ ಟೆಂಡರ್ ಕರೆದು ಅನುಷ್ಠಾನಗೊಳಿಸುವುದು.
5. ಅನುಮೋದನೆಯಾದ ಕಾಮಗಾರಿಗಳ ಬದಲಾವಣೆಗೆ ಅವಕಾಶವಿರುವುದಿಲ್ಲ.
6. ಕ್ರಿಯಾ ಯೋಜನೆಗೆ ಅನುಮೋದನೆ ನೀಡಿರುವ ಅಂದಾಜು ಮಿತಿಯಲ್ಲಿಯೇ (ಟೆಂಡರ್ ಪ್ರೀಮೀಯಂ ಸೇರಿ) ಅನುಷ್ಠಾನಗೊಳಿಸುವುದು.
7. ಕಾಮಗಾರಿಗಳ ಪ್ರಗತಿ ವರದಿಯನ್ನು ನಿಯಮಿತವಾಗಿ ಪ್ರತಿ ಮಾಹೆ 15ನೇ ತಾರೀಖಿನೊಳಗೆ ಯೋಜನಾ ಇಲಾಖೆಗೆ ಸಲ್ಲಿಸುವುದು.
8. ಈ ಆದೇಶವು ಸರ್ಕಾರವು ಆಯಾ ಸಂದರ್ಭದಲ್ಲಿ ಹೊರಡಿಸುವ ಆದೇಶ ಮತ್ತು ಸುತ್ತೋಲೆಗೆ ಒಳಪಟ್ಟಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,
N.S. Khatawkar 04/02/2023
**(ನಿರ್ಮಲಾ ಎಸ್. ಖಟಾವ್‌ಕರ್)**
ಸರ್ಕಾರದ ಅಧೀನ ಕಾರ್ಯದರ್ಶಿ-1
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಇಲಾಖೆ

**<u>ಇವರಿಗೆ:</u>**

1. ಪ್ರಧಾನ ಮಹಾಲೇಖಪಾಲರು(ಎ&ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ: 5329, ಬೆಂಗಳೂರು- 560 001
2. ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
5. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
6. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.
7. ನಿರ್ದೇಶಕರು / ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
8. ನಿರ್ದೇಶಕರು, ಪ್ರದೇಶಾಭಿವೃದ್ಧಿ ಮಂಡಳಿ ವಿಭಾಗ ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ, , ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
9. ಎಲ್ಲಾ ಜಿಲ್ಲೆಯ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿಗಳು, .
10. ಸಂಬಂಧಿಸಿದ ಜಿಲ್ಲೆಯ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.
11. ಸಂಬಂಧಿಸಿದ ಶಿಶು ಅಭಿವೃದ್ಧಿ ಯೋಜನಾಧಿಕರಿಗಳು , ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
12. ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃಧ್ಧಿ ಹಾಗೂ ವಿಕಲಚೇತರನ ಮತ್ತು ಹಿರಿಯ ನಾಗರಿಕೆ ಸಬಲೀಕರಣ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
13. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ , ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ,
14. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-10), ವಿಧಾನಸೌಧ, ಬೆಂಗಳೂರು
15. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು

(ಕ್ರಮ ಸಂಖ್ಯೆ: 9, 10 ಮತ್ತು 11ನಿರ್ದೇಶಕರ ಮುಖಾಂತರ)



Generated from eOffice by muniraju, WCD-CW-FDA(MR)(I/C), FIRST DIVISION ASSISTANT, WOMEN AND CHILD DEVELOPMENT on 01/09/2023 04:38 PM

## ಅನುಬಂಧ

**2022-23ನೇ ಸಾಲಿನಲ್ಲಿ ವಿಶೇಷ ಅಭಿವೃದ್ಧಿ ಯೋಜನೆಯಡಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಕಾಮಗಾರಿ/ಫಲಾನುಭವಿಗಳ ವಿವರ ಕೆಳಗಿನಂತಿದೆ.**

### ತಃಖ್ತೆ-1

| ಸ್ಫೂರ್ತಿ-ಹದಿಹರೆಯದ ಹೆಣ್ಣು ಮಕ್ಕಳಿಗೆ ಜೀವನ ಕೌಶಲ್ಯ ಆಧಾರಿತ ಕಾರ್ಯಕ್ರಮ ಲೆಕ್ಕಶೀರ್ಷಿಕೆ:2235-02-103-0-72 | | | |
|---|---|---|---|
| ವಿಭಾಗ | ತಾಲ್ಲೂಕು ದುಸ್ಥಿತಿ ಸೂಚ್ಯಾಂಕ | ಸಂಪನ್ಮೂಲ ಹಂಚಿಕೆ % | ಆಯವ್ಯಯ ಹಂಚಿಕೆ |
| ಕಲಬುರ್ಗಿ | 8.34 | 40% | 500.00 |
| ಬೆಳಗಾವಿ | 4.12 | 20% | 250.00 |
| ಬೆಂಗಳೂರು | 5.04 | 25% | 312.50 |
| ಮೈಸೂರು | 2.76 | 15% | 187.50 |
| ಒಟ್ಟು | 20.26 | 100% | 1,250.00 |

### ತಃಖ್ತೆ-2

**ಜಿಲ್ಲೆವಾರು ಮತ್ತು ತಾಲ್ಲೂಕುವಾರು ದುಸ್ಥಿತಿ ಸೂಚ್ಯಾಂಕದ ಪ್ರಕಾರ ಅನುದಾನ ಹಂಚಿಕೆ**

| ವಿಭಾಗ | ಜಿಲ್ಲೆಗಳು | ಕ್ರ.ಸಂ. | ತಾಲ್ಲೂಕು ವರ್ಗ | ತಾಲ್ಲೂಕು | ತಾಲ್ಲೂಕು ದುಸ್ಥಿತಿ ಸೂಚ್ಯಾಂಕ | ಸಿಡಿಐ ಪ್ರಕಾರ ಸೀಮಿತವಾದ ಬಜೆಟ್ | ಕೇ.ಪು.ಯೋ-ರಾಜ್ಯದ ಪಾಲು-ಪೋಷಣ ಅಭಿಯಾನ(ರಾಷ್ಟ್ರೀಯ ಪೌಷ್ಟಿಕಾಂಶ ಅಭಿಯಾನ) | |
|---|---|---|---|---|---|---|---|---|
| | | | | | | | ಅನುದಾನ | ಫಲಾನುಭವಿಗಳು |
| 1 | 2 | 3 | 4 | 5 | 6 | 7 | 8 | 9 |
| ಕಲಬುರ್ಗಿ | ಬಳ್ಳಾರಿ | 1 | ಅತ್ಯಂತ ಹಿಂದುಳಿದ | ಸಂಡೂರು | 0.25 | 14.99 | 0.00 | 0 |
| | | 2 | ಅತ್ಯಂತ ಹಿಂದುಳಿದ | ಕೂಡ್ಲಗಿ | 0.26 | 15.59 | 0.00 | 0 |
| | | 3 | ಅತೀ ಹಿಂದುಳಿದ | ಸಿರಗುಪ್ಪ | 0.14 | 8.39 | 0.00 | 0 |
| | | 4 | ಅತೀ ಹಿಂದುಳಿದ | ಹೆಚ್.ಬಿ.ಹಳ್ಳಿ | 0.16 | 9.59 | 0.00 | 0 |
| | | 5 | ಅತೀ ಹಿಂದುಳಿದ | ಹಡಗಲಿ | 0.19 | 11.39 | 0.00 | 0 |
| | | 6 | ಅತ್ಯಂತ ಹಿಂದುಳಿದ | ಹರಪನಹಳ್ಳಿ | 0.28 | 16.79 | 0.00 | 0 |
| | ಬಳ್ಳಾರಿ ಜಿಲ್ಲೆಯ ಒಟ್ಟು | | | | 1.28 | 76.74 | 0.00 | 0 |
| | ಬೀದರ್ | 7 | ಅತ್ಯಂತ ಹಿಂದುಳಿದ | ಬಾಲ್ಕಿ | 0.26 | 15.59 | 0.00 | 0 |
| | | 8 | ಅತ್ಯಂತ ಹಿಂದುಳಿದ | ಹುಮ್ನಾಬಾದ್ | 0.27 | 16.19 | 0.00 | 0 |
| | | 9 | ಅತ್ಯಂತ ಹಿಂದುಳಿದ | ಬಸವಕಲ್ಯಾಣ | 0.31 | 18.59 | 0.00 | 0 |
| | | 10 | ಅತ್ಯಂತ ಹಿಂದುಳಿದ | ಔರಾದ್ | 0.35 | 20.98 | 0.00 | 0 |
| | ಬೀದರ್ ಜಿಲ್ಲೆಯ ಒಟ್ಟು | | | | 1.19 | 71.34 | 0.00 | 0 |
| | ಯಾದಗೀರ್ | 11 | ಅತ್ಯಂತ ಹಿಂದುಳಿದ | ಶಾಹಪೂರ | 0.38 | 22.78 | 0.00 | 0 |
| | | 12 | ಅತ್ಯಂತ ಹಿಂದುಳಿದ | ಸುರಪೂರ | 0.30 | 17.99 | 0.00 | 0 |
| | | 13 | ಅತ್ಯಂತ ಹಿಂದುಳಿದ | ಯಾದಗಿರಿ | 0.33 | 19.78 | 0.00 | 0 |
| | ಯಾದಗೀರಿ ಜಿಲ್ಲೆಯ ಒಟ್ಟು | | | | 1.01 | 60.55 | 0.00 | 0 |



Generated from eOffice by muniraju, WCD-CW-FDA(MR)(I/C), FIRST DIVISION ASSISTANT, WOMEN AND CHILD DEVELOPMENT on 01/09/2023 04:38 PM

## ಜಿಲ್ಲೆವಾರು ಮತ್ತು ತಾಲ್ಲೂಕುವಾರು ದುಸ್ಥಿತಿ ಸೂಚ್ಯಾಂಕದ ಪ್ರಕಾರ ಅನುದಾನ ಹಂಚಿಕೆ

| ವಿಭಾಗ | ಜಿಲ್ಲೆಗಳು | ಕ್ರ ಸಂ. | ತಾಲ್ಲೂಕು ವರ್ಗ | ತಾಲ್ಲೂಕು | ತಾಲ್ಲೂಕು ದುಸ್ಥಿತಿ ಸೂಚ್ಯಾಂಕ | ಸಿಡಿಐ ಪ್ರಕಾರ ಸೀಮಿತವಾದ ಬಜೆಟ್ | ಕೇ.ಪು.ಯೋ-ರಾಜ್ಯದ ಪಾಲು-ಪೋಷಣ ಅಭಿಯಾನ(ರಾಷ್ಟ್ರೀಯ ಪೌಷ್ಟಿಕಾಂಶ ಅಭಿಯಾನ) | |
|---|---|---|---|---|---|---|---|---|
| | | | | | | | ಅನುದಾನ | ಫಲಾನುಭವಿಗಳು |
| 1 | 2 | 3 | 4 | 5 | 6 | 7 | 8 | 9 |
| | ಕಲಬುರ್ಗಿ | 14 | ಅತ್ಯಂತ ಹಿಂದುಳಿದ | ಸೇಡಂ | 0,28 | 16.79 | 0.00 | 0 |
| | | 15 | ಅತ್ಯಂತ ಹಿಂದುಳಿದ | ಚಿತ್ತಾಪುರ | 0.35 | 20.98 | 113.64 | 4545 |
| | | 16 | ಅತ್ಯಂತ ಹಿಂದುಳಿದ | ಅಫಜಲ್ ಪುರ | 0.38 | 22.78 | 0.00 | 0 |
| | | 17 | ಅತ್ಯಂತ ಹಿಂದುಳಿದ | ಆಳಂದ | 0.39 | 23.38 | 0.00 | 0 |
| | | 18 | ಅತ್ಯಂತ ಹಿಂದುಳಿದ | ಚಿಂಚೋಳಿ | 0.43 | 25.78 | 113.64 | 4545 |
| | | 19 | ಅತ್ಯಂತ ಹಿಂದುಳಿದ | ಜೇವರ್ಗಿ | 0.43 | 25.78 | 113.64 | 4545 |
| | | 20 | ಹಿಂದುಳಿದ | ಕಲಬುರ್ಗಿ | 0.11 | 6.59 | 0.00 | 0 |
| | ಕಲಬುರ್ಗಿ ಜಿಲ್ಲೆಯ ಒಟ್ಟು | | | | 2,37 | 142.09 | 340.92 | 13635 |
| | ರಾಯಚೂರು | 21 | ಅತ್ಯಂತ ಹಿಂದುಳಿದ | ಸಿಂಧನೂರು | 0.22 | 13.19 | 0.00 | 0 |
| | | 22 | ಅತ್ಯಂತ ಹಿಂದುಳಿದ | ಮಾನ್ವಿ | 0.31 | 18.59 | 0.00 | 0 |
| | | 23 | ಅತ್ಯಂತ ಹಿಂದುಳಿದ | ಲಿಂಗಸೂರು | 0.37 | 22.18 | 113.64 | 4545 |
| | | 24 | ಅತ್ಯಂತ ಹಿಂದುಳಿದ | ದೇವದುರ್ಗ | 0.47 | 28.18 | 113.64 | 4545 |
| | | 25 | ಅತೀ ಹಿಂದುಳಿದ | ರಾಯಚೂರು | 0.13 | 7.79 | 0.00 | 0 |
| | ರಾಯಚೂರು ಜಿಲ್ಲೆಯ ಒಟ್ಟು | | | | 1.50 | 89.93 | 227.28 | 9090 |
| | ಕೊಪ್ಪಳ | 26 | ಅತ್ಯಂತ ಹಿಂದುಳಿದ | ಕುಷ್ಟಗಿ | 0.36 | 21.58 | 0.00 | 0 |
| | | 27 | ಅತ್ಯಂತ ಹಿಂದುಳಿದ | ಯಲಬುರ್ಗಾ | 0.37 | 22.18 | 0.00 | 0 |
| | | 28 | ಅತೀ ಹಿಂದುಳಿದ | ಕೊಪ್ಪಳ | 0.19 | 11.39 | 0.00 | 0 |
| | | 29 | ಹಿಂದುಳಿದ | ಗಂಗಾವತಿ | 0.07 | 4.20 | 0.00 | 0 |
| | ಕೊಪ್ಪಳ ಜಿಲ್ಲೆಯ ಒಟ್ಟು | | | | 0.99 | 59.35 | 0.00 | 0 |
| ಕಲಬುರ್ಗಿ ವಿಭಾಗದ ಒಟ್ಟು | | | | | 8,34 | 500.00 | 568.20 | 22725 |
| ಬೆಳಗಾವಿ | ಬೆಳಗಾವಿ | 30 | ಅತೀ ಹಿಂದುಳಿದ | ಅಥಣಿ | 0.12 | 7.28 | 0.00 | 0 |
| | | 31 | ಅತೀ ಹಿಂದುಳಿದ | ಗೋಕಾಕ್ | 0.14 | 8.50 | 113.64 | 4550 |
| | | 32 | ಅತೀ ಹಿಂದುಳಿದ | ಸವದತ್ತಿ | 0.14 | 8.50 | 113.64 | 4545 |
| | | 33 | ಹಿಂದುಳಿದ | ರಾಯ್ ಬಾಗ್ | 0.03 | 1.82 | 0.00 | 0 |
| | | 34 | ಹಿಂದುಳಿದ | ಬೈಲಹೊಂಗಲ | 0.05 | 3.03 | 0.00 | 0 |
| | | 35 | ಹಿಂದುಳಿದ | ರಾಮದುರ್ಗ | 0.10 | 6.07 | 0.00 | 0 |
| | | 36 | ಹಿಂದುಳಿದ | ಹುಕ್ಕೇರಿ | 0.11 | 6.67 | 113.64 | 4545 |
| | ಬೆಳಗಾವಿ ಜಿಲ್ಲೆಯ ಒಟ್ಟು | | | | 0.69 | 41.87 | 340.92 | 13640 |
| | ವಿಜಯಪುರ | 37 | ಅತ್ಯಂತ ಹಿಂದುಳಿದ | ಮುದ್ದೇಬಿಹಾಳ್ | 0.31 | 18.81 | 113.64 | 4545 |
| | | 38 | ಅತ್ಯಂತ ಹಿಂದುಳಿದ | ಬಸವನ ಬಾಗೇವಾಡಿ | 0.31 | 18.81 | 0.00 | 0 |
| | | 39 | ಅತ್ಯಂತ ಹಿಂದುಳಿದ | ಇಂಡಿ | 0.34 | 20.63 | 113.64 | 4545 |
| | | 40 | ಅತ್ಯಂತ ಹಿಂದುಳಿದ | ಸಿಂದಗಿ | 0.36 | 21.84 | 0.00 | 0 |
| | | 41 | ಹಿಂದುಳಿದ | ವಿಜಯಪುರ | 0.08 | 4.85 | 0.00 | 0 |
| | ವಿಜಯಪುರ ಜಿಲ್ಲೆಯ ಒಟ್ಟು | | | | 1.40 | 84.95 | 227.28 | 9090 |
| | ಬಾಗಲಕೋಟ್ | 42 | ಅತ್ಯಂತ ಹಿಂದುಳಿದ | ಬಿಳಗಿ | 0.23 | 13.96 | 0.00 | 0 |

Generated from eOffice by muniraju, WCD-CW-FDA(MR)(I/C), FIRST DIVISION ASSISTANT, WOMEN AND CHILD DEVELOPMENT on 01/09/2023 04:38 PM

## ಜಿಲ್ಲೆವಾರು ಮತ್ತು ತಾಲ್ಲೂಕುವಾರು ದುಸ್ಥಿತಿ ಸೂಚ್ಯಾಂಕದ ಪ್ರಕಾರ ಅನುದಾನ ಹಂಚಿಕೆ

| ವಿಭಾಗ | ಜಿಲ್ಲೆಗಳು | ಕ್ರ ಸಂ. | ತಾಲ್ಲೂಕು ವರ್ಗ | ತಾಲ್ಲೂಕು | ತಾಲ್ಲೂಕು ದುಸ್ಥಿತಿ ಸೂಚ್ಯಾಂಕ | ಸಿಡಿಐ ಪ್ರಕಾರ ಸೀಮಿತವಾದ ಬಜೆಟ್ | ಕೇ.ಪು.ಯೋ-ರಾಜ್ಯದ ಪಾಲು-ಪೋಷಣ ಅಭಿಯಾನ(ರಾಷ್ಟ್ರೀಯ ಪೌಷ್ಟಿಕಾಂಶ ಅಭಿಯಾನ) | |
|---|---|---|---|---|---|---|---|---|
| | | | | | | | ಅನುದಾನ | ಫಲಾನುಭವಿಗಳು |
| 1 | 2 | 3 | 4 | 5 | 6 | 7 | 8 | 9 |
| | | 43 | ಅತೀ ಹಿಂದುಳಿದ | ಹುನಗುಂದ | 0.15 | 9.10 | 113.60 | 4545 |
| | | 44 | ಅತೀ ಹಿಂದುಳಿದ | ಬಾದಮಿ | 0.18 | 10.92 | 0.00 | 0 |
| | ಬಾಗಲಕೋಟೆ ಜಿಲ್ಲೆಯ ಒಟ್ಟು | | | | 0.56 | 33.98 | 113.60 | 4545 |
| | ಧಾರವಾಡ | 45 | ಅತೀ ಹಿಂದುಳಿದ | ಕಲ್ ಘಟಗಿ | 0.16 | 9.71 | 0.00 | 0 |
| | | 46 | ಹಿಂದುಳಿದ | ನವಲಗುಂದ | 0.01 | 0.61 | 0.00 | 0 |
| | | 47 | ಹಿಂದುಳಿದ | ಕುಂದಗೋಳ | 0.05 | 3.03 | 0.00 | 0 |
| | ಧಾರವಾಡ ಜಿಲ್ಲೆಯ ಒಟ್ಟು | | | | 0.22 | 13.35 | 0.00 | 0 |
| | ಗದಗ | 48 | ಅತೀ ಹಿಂದುಳಿದ | ಮುಂಡರಗಿ | 0.12 | 7.28 | 0.00 | 0 |
| | | 48 | ಹಿಂದುಳಿದ | ರೋಣ | 0.08 | 4.85 | 0.00 | 0 |
| | | 50 | ಹಿಂದುಳಿದ | ಶಿರಹಟ್ಟಿ | 0.11 | 6.67 | 0.00 | 0 |
| | ಗದಗ ಜಿಲ್ಲೆಯ ಒಟ್ಟು | | | | 0.31 | 18.81 | 0.00 | 0 |
| | ಹಾವೇರಿ | 51 | ಅತೀ ಹಿಂದುಳಿದ | ಸವಣೂರು | 0.13 | 7.89 | 0.00 | 0 |
| | | 52 | ಅತೀ ಹಿಂದುಳಿದ | ಶಿಗ್ಗಾಂವ್ | 0.16 | 9.71 | 0.00 | 0 |
| | | 53 | ಅತೀ ಹಿಂದುಳಿದ | ಹಿರೇಕೆರೂರು | 0.12 | 7.28 | 0.00 | 0 |
| | | 54 | ಹಿಂದುಳಿದ | ಹಾವೇರಿ | 0.01 | 0.61 | 0.00 | 0 |
| | | 55 | ಹಿಂದುಳಿದ | ಬ್ಯಾಡಗಿ | 0.03 | 1.82 | 0.00 | 0 |
| | | 56 | ಹಿಂದುಳಿದ | ಹಾನಗಲ್ | 0.08 | 4.85 | 0.00 | 0 |
| | ಹಾವೇರಿ ಜಿಲ್ಲೆಯ ಒಟ್ಟು | | | | 0.53 | 32.16 | 0.00 | 0 |
| | ಉತ್ತರ ಕನ್ನಡ | 57 | ಅತೀ ಹಿಂದುಳಿದ | ಸೂಪ (ಜೋಯಿಡ) | 0.13 | 7.89 | 0.00 | 0 |
| | | 58 | ಅತೀ ಹಿಂದುಳಿದ | ಭಟ್ಕಳ | 0.18 | 10.92 | 0.00 | 0 |
| | | 59 | ಹಿಂದುಳಿದ | ಅಂಕೋಲಾ | 0.02 | 1.21 | 0.00 | 0 |
| | | 60 | ಹಿಂದುಳಿದ | ಸಿದ್ದಾಪುರ | 0.08 | 4.85 | 0.00 | 0 |
| | ಉತ್ತರ ಕನ್ನಡ ಜಿಲ್ಲೆಯ ಒಟ್ಟು | | | | 0.41 | 24.88 | 0.00 | 0 |
| ಬೆಳಗಾವಿ ವಿಭಾಗದ ಒಟ್ಟು | | | | | 4.12 | 250.00 | 681.80 | 27275 |
| ಬೆಂಗಳೂರು | ರಾಮನಗರ | 61 | ಅತ್ಯಂತ ಹಿಂದುಳಿದ | ಕನಕಪುರ | 0.26 | 16.12 | 0.00 | 0 |
| | | 62 | ಅತ್ಯಂತ ಹಿಂದುಳಿದ | ಮಾಗಡಿ | 0.21 | 13.02 | 0.00 | 0 |
| | | 63 | ಹಿಂದುಳಿದ | ಚನ್ನಪಟ್ಟಣ | 0.05 | 3.10 | 0.00 | 0 |
| | ರಾಮನಗರ ಜಿಲ್ಲೆಯ ಒಟ್ಟು | | | | 0.52 | 32.24 | 0.00 | 0 |
| | ಬೆಂಗಳೂರು ಗ್ರಾಮಾಂತರ | 64 | ಹಿಂದುಳಿದ | ಹೊಸಕೋಟೆ | 0.03 | 1.86 | 0.00 | 0 |
| | ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಒಟ್ಟು | | | | 0.03 | 1.86 | 0.00 | 0 |
| | ಬೆಂಗಳುರು ನಗರ | 65 | ಹಿಂದುಳಿದ | ಅನೇಕಲ್ | 0.10 | 6.20 | 0.00 | 0 |
| | ಬೆಂಗಳೂರು ನಗರ ಜಿಲ್ಲೆಯ ಒಟ್ಟು | | | | 0.10 | 6.20 | 0.00 | 0 |
| | ಚಿತ್ರದುರ್ಗ | 66 | ಅತ್ಯಂತ ಹಿಂದುಳಿದ | ಹೊಸದುರ್ಗ | 0.22 | 13.64 | 0.00 | 0 |



Generated from eOffice by muniraju, WCD-CW-FDA(MR)(I/C), FIRST DIVISION ASSISTANT, WOMEN AND CHILD DEVELOPMENT on 01/09/2023 04:38 PM

## ಜಿಲ್ಲೆವಾರು ಮತ್ತು ತಾಲ್ಲೂಕುವಾರು ದುಸ್ಥಿತಿ ಸೂಚ್ಯಾಂಕದ ಪ್ರಕಾರ ಅನುದಾನ ಹಂಚಿಕೆ

| ವಿಭಾಗ | ಜಿಲ್ಲೆಗಳು | ಕ್ರ ಸಂ. | ತಾಲ್ಲೂಕು ವರ್ಗ | ತಾಲ್ಲೂಕು | ತಾಲ್ಲೂಕು ದುಸ್ಥಿತಿ ಸೂಚ್ಯಾಂಕ | ಸಿಡಿಐ ಪ್ರಕಾರ ಸೀಮಿತವಾದ ಬಜೆಟ್ | ಕೇ.ಪು.ಯೋ-ರಾಜ್ಯದ ಪಾಲು-ಪೋಷಣ ಅಭಿಯಾನ(ರಾಷ್ಟ್ರೀಯ ಪೌಷ್ಟಿಕಾಂಶ ಅಭಿಯಾನ) | |
|---|---|---|---|---|---|---|---|---|
| | | | | | | | ಅನುದಾನ | ಫಲಾನುಭವಿಗಳು |
| 1 | 2 | 3 | 4 | 5 | 6 | 7 | 8 | 9 |
| | | 67 | ಅತೀ ಹಿಂದುಳಿದ | ಹಿರಿಯೂರು | 0.13 | 8.06 | 0.00 | 0 |
| | | 68 | ಅತೀ ಹಿಂದುಳಿದ | ಮೊಳಕಾಲ್ಮೂರು | 0.16 | 9.92 | 0.00 | 0 |
| | | 69 | ಅತೀ ಹಿಂದುಳಿದ | ಹೊಳಲ್ಕೆರೆ | 0.16 | 9.92 | 0.00 | 0 |
| | | 70 | ಅತೀ ಹಿಂದುಳಿದ | ಚಳ್ಳಕೆರೆ | 0.19 | 11.78 | 0.00 | 0 |
| | ಚಿತ್ರದುರ್ಗ ಜಿಲ್ಲೆಯ ಒಟ್ಟು | | | | 0.86 | 53.32 | 0.00 | 0 |
| | ದಾವಣಗೆರೆ | 71 | ಅತ್ಯಂತ ಹಿಂದುಳಿದ | ಚನ್ನಗಿರಿ | 0.22 | 13.64 | 0.00 | 0 |
| | | 72 | ಅತೀ ಹಿಂದುಳಿದ | ಹೊನ್ನಾಳಿ | 0.14 | 8.68 | 0.00 | 0 |
| | | 73 | ಅತೀ ಹಿಂದುಳಿದ | ಜಗಳೂರು | 0.20 | 12.40 | 0.00 | 0 |
| | ದಾವಣಗೆರೆ ಜಿಲ್ಲೆಯ ಒಟ್ಟು | | | | 0.56 | 34.72 | 0.00 | 0 |
| | ಕೋಲಾರ | 74 | ಅತೀ ಹಿಂದುಳಿದ | ಮುಳಬಾಗಿಲು | 0.12 | 7.44 | 0.00 | 0 |
| | | 75 | ಹಿಂದುಳಿದ | ಶ್ರೀನಿವಾಸಪುರ | 0.02 | 1.24 | 0.00 | 0 |
| | | 76 | ಹಿಂದುಳಿದ | ಮಾಲೂರು | 0.07 | 4.34 | 0.00 | 0 |
| | | 77 | ಹಿಂದುಳಿದ | ಬಂಗಾರಪೇಟೆ | 0.04 | 2.48 | 0.00 | 0 |
| | ಕೋಲಾರ ಜಿಲ್ಲೆಯ ಒಟ್ಟು | | | | 0.25 | 15.50 | 0.00 | 0 |
| | ಚಿಕ್ಕಬಳ್ಳಾಪುರ | 78 | ಅತ್ಯಂತ ಹಿಂದುಳಿದ | ಬಾಗೇಪಲ್ಲಿ | 0.24 | 14.88 | 0.00 | 0 |
| | | 79 | ಅತೀ ಹಿಂದುಳಿದ | ಗುಡಿಬಂಡೆ | 0.16 | 9.92 | 0.00 | 0 |
| | | 80 | ಅತೀ ಹಿಂದುಳಿದ | ಗೌರಿಬಿದನೂರು | 0.17 | 10.54 | 0.00 | 0 |
| | | 81 | ಹಿಂದುಳಿದ | ಚಿಂತಾಮಣಿ | 0.03 | 1.86 | 0.00 | 0 |
| | | 82 | ಹಿಂದುಳಿದ | ಸಿದ್ಲಘಟ್ಟ | 0.09 | 5.58 | 0.00 | 0 |
| | ಚಿಕ್ಕಬಳ್ಳಾಪುರ ಜಿಲ್ಲೆಯ ಒಟ್ಟು | | | | 0.69 | 42.78 | 0.00 | 0 |
| | ಶಿವಮೊಗ್ಗ | 83 | ಅತೀ ಹಿಂದುಳಿದ | ಸೊರಬ | 0.18 | 11.16 | 0.00 | 0 |
| | | 84 | ಹಿಂದುಳಿದ | ಶಿಕಾರಿಪುರ | 0.08 | 4.96 | 0.00 | 0 |
| | ಶಿವಮೊಗ್ಗ ಜಿಲ್ಲೆಯ ಒಟ್ಟು | | | | 0.26 | 16.12 | 0.00 | 0 |
| | ತುಮಕೂರು | 85 | ಅತ್ಯಂತ ಹಿಂದುಳಿದ | ಕುಣಿಗಲ್ | 0.21 | 13.02 | 0.00 | 0 |
| | | 86 | ಅತ್ಯಂತ ಹಿಂದುಳಿದ | ಮಧುಗಿರಿ | 0.26 | 16.12 | 0.00 | 0 |
| | | 87 | ಅತ್ಯಂತ ಹಿಂದುಳಿದ | ಗುಬ್ಬಿ | 0.27 | 16.74 | 0.00 | 0 |
| | | 88 | ಅತ್ಯಂತ ಹಿಂದುಳಿದ | ಸಿರಾ | 0.27 | 16.74 | 0.00 | 0 |
| | | 89 | ಅತ್ಯಂತ ಹಿಂದುಳಿದ | ಪಾವಗಡ | 0.28 | 17.36 | 0.00 | 0 |
| | | 90 | ಅತೀ ಹಿಂದುಳಿದ | ತುರುವೇಕೆರೆ | 0.14 | 8.68 | 0.00 | 0 |
| | | 91 | ಅತೀ ಹಿಂದುಳಿದ | ಕೊರಟಗೆರೆ | 0.17 | 10.54 | 0.00 | 0 |
| | | 92 | ಅತೀ ಹಿಂದುಳಿದ | ಚಿಕ್ಕನಾಯಕನಹಳ್ಳಿ | 0.17 | 10.54 | 0.00 | 0 |
| | ತುಮಕೂರು ಜಿಲ್ಲೆಯ ಒಟ್ಟು | | | | 1.77 | 109.75 | 0.00 | 0 |
| ಬೆಂಗಳೂರು ವಿಭಾಗದ ಒಟ್ಟು | | | | | 5.04 | 312.50 | 0.00 | 0 |
| ಮೈಸೂರು | ಚಿಕ್ಕಮಗಳೂರು | 93 | ಅತೀ ಹಿಂದುಳಿದ | ಕಡೂರು | 0.19 | 12.91 | 0.00 | 0 |
| | | 94 | ಹಿಂದುಳಿದ | ತರಿಕೆರೆ | 0.11 | 7.47 | 0.00 | 0 |



Generated from eOffice by muniraju, WCD-CW-FDA(MR)(I/C), FIRST DIVISION ASSISTANT, WOMEN AND CHILD DEVELOPMENT on 01/09/2023 04:38 PM

## ಜಿಲ್ಲೆವಾರು ಮತ್ತು ತಾಲ್ಲೂಕುವಾರು ದುಸ್ಥಿತಿ ಸೂಚ್ಯಾಂಕದ ಪ್ರಕಾರ ಅನುದಾನ ಹಂಚಿಕೆ

| ವಿಭಾಗ | ಜಿಲ್ಲೆಗಳು | ಕ್ರ ಸಂ. | ತಾಲ್ಲೂಕು ವರ್ಗ | ತಾಲ್ಲೂಕು | ತಾಲ್ಲೂಕು ದುಸ್ಥಿತಿ ಸೂಚ್ಯಾಂಕ | ಸಿಡಿಐ ಪ್ರಕಾರ ಸೀಮಿತವಾದ ಬಜೆಟ್ | ಕೇ.ಪು.ಯೋ-ರಾಜ್ಯದ ಪಾಲು-ಪೋಷಣ ಅಭಿಯಾನ(ರಾಷ್ಟ್ರೀಯ ಪೌಷ್ಟಿಕಾಂಶ ಅಭಿಯಾನ) | |
|---|---|---|---|---|---|---|---|---|
| | | | | | | | ಅನುದಾನ | ಫಲಾನುಭವಿಗಳು |
| 1 | 2 | 3 | 4 | 5 | 6 | 7 | 8 | 9 |
| | ಚಿಕ್ಕಮಗಳೂರು ಜಿಲ್ಲೆಯ ಒಟ್ಟು | | | | 0.30 | 20.38 | 0.00 | 0 |
| | ಹಾಸನ | 95 | ಅತೀ ಹಿಂದುಳಿದ | ಅರಕಲಗೂಡು | 0.16 | 10.87 | 0.00 | 0 |
| | | 96 | ಹಿಂದುಳಿದ | ಹೊಳೆನರಸೀಪುರ | 0.03 | 2.04 | 0.00 | 0 |
| | | 97 | ಹಿಂದುಳಿದ | ಬೇಲೂರು | 0.06 | 4.08 | 0.00 | 0 |
| | | 98 | ಹಿಂದುಳಿದ | ಚೆನ್ನರಾಯಪಟ್ಟಣ | 0.08 | 5.43 | 0.00 | 0 |
| | | 99 | ಹಿಂದುಳಿದ | ಅರಸೀಕೆರೆ | 0.09 | 6.11 | 0.00 | 0 |
| | ಹಾಸನ ಜಿಲ್ಲೆಯ ಒಟ್ಟು | | | | 0.42 | 28.53 | 0.00 | 0 |
| | ಮಂಡ್ಯ | 100 | ಅತೀ ಹಿಂದುಳಿದ | ಮಳವಳ್ಳಿ | 0.16 | 10.87 | 0.00 | 0 |
| | | 101 | ಅತೀ ಹಿಂದುಳಿದ | ನಾಗಮಂಗಲ | 0.17 | 11.55 | 0.00 | 0 |
| | | 102 | ಅತೀ ಹಿಂದುಳಿದ | ಕೃಷ್ಣರಾಜಪೇಟೆ | 0.20 | 13.59 | 0.00 | 0 |
| | | 103 | ಹಿಂದುಳಿದ | ಶ್ರೀರಂಗಪಟ್ಟಣ | 0.02 | 1.36 | 0.00 | 0 |
| | | 104 | ಹಿಂದುಳಿದ | ಮದ್ದೂರು | 0.05 | 3.40 | 0.00 | 0 |
| | | 105 | ಹಿಂದುಳಿದ | ಪಾಂಡವಪುರ | 0.06 | 4.08 | 0.00 | 0 |
| | ಮಂಡ್ಯ ಜಿಲ್ಲೆಯ ಒಟ್ಟು | | | | 0.66 | 44.84 | 0.00 | 0 |
| | ಮೈಸೂರು | 106 | ಅತ್ಯಂತ ಹಿಂದುಳಿದ | ಹೆಚ್.ಡಿ.ಕೋಟೆ | 0.28 | 19.02 | 0.00 | 0 |
| | | 107 | ಅತೀ ಹಿಂದುಳಿದ | ಹುಣಸೂರು | 0.12 | 8.15 | 0.00 | 0 |
| | | 108 | ಅತೀ ಹಿಂದುಳಿದ | ಟಿ.ನರಸೀಪುರ | 0.13 | 8.83 | 0.00 | 0 |
| | | 109 | ಅತೀ ಹಿಂದುಳಿದ | ನಂಜನಗೂಡು | 0.13 | 8.83 | 0.00 | 0 |
| | | 110 | ಹಿಂದುಳಿದ | ಪಿರಿಯಾಪಟ್ಟಣ | 0.03 | 2.04 | 0.00 | 0 |
| | | 111 | ಹಿಂದುಳಿದ | ಕೆ.ಆರ್.ನಗರ | 0.08 | 5.43 | 0.00 | 0 |
| | ಮೈಸೂರು ಜಿಲ್ಲೆಯ ಒಟ್ಟು | | | | 0.77 | 52.31 | 0.00 | 0 |
| | ಚಾಮರಾಜನಗರ | 112 | ಅತ್ಯಂತ ಹಿಂದುಳಿದ | ಚಾಮರಾಜನಗರ | 0.22 | 14.95 | 0.00 | 0 |
| | | 113 | ಅತೀ ಹಿಂದುಳಿದ | ಗುಂಡ್ಲುಪೇಟೆ | 0.19 | 12.91 | 0.00 | 0 |
| | | 114 | ಅತೀ ಹಿಂದುಳಿದ | ಕೊಳ್ಳೇಗಾಲ | 0.20 | 13.59 | 0.00 | 0 |
| | ಚಾಮರಾಜನಗರ ಜಿಲ್ಲೆಯ ಒಟ್ಟು | | | | 0.61 | 41.44 | 0.00 | 0 |
| ಮೈಸೂರು ವಿಭಾಗದ ಒಟ್ಟು | | | | | 2.76 | 187.50 | 0.00 | 0 |
| ಒಟ್ಟು ಮೊತ್ತ | | | | | 20.26 | 1250.00 | 1250.00 | 50000 |

N.S. Khatavkar

ಸರ್ಕಾರದ ಅಧೀನ ಕಾರ್ಯದರ್ಶಿ-1
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಹಾಗೂ ಹಿರಿಯ ನಾಗರಿಕರ
ಸಬಲೀಕರಣ ಇಲಾಖೆ



Generated from eOffice by muniraju, WCD-CW-FDA(MR)(I/C), FIRST DIVISION ASSISTANT, WOMEN AND CHILD DEVELOPMENT on 01/09/2023 04:38 PM



ಬಾಲ್ಯವಿವಾಹ ಮುಕ್ತದತ್ತ ಕರ್ನಾಟಕ ಬಾಲ್ಯವಿವಾಹ ನಿಷೇಧ ಕಾಯ್ದೆ-2006
ಮತ್ತು ಬಾಲ್ಯವಿವಾಹ ನಿಷೇಧ (ಕರ್ನಾಟಕ ತಿದ್ದುಪಡಿ) ಕಾಯ್ದೆ-2016ರ

**ಜಾರಿಗೊಳಿಸುವಿಕೆ ಮತ್ತು ಅನುಷ್ಠಾನದ**

# "ಕ್ರಮಬದ್ಧ ಕಾರ್ಯವಿಧಾನ"

**ಪ್ರಕ್ರಿಯೆಗಳು (ಎಸ್‌ಒಪಿ)**

## ಸಂದೇಶ

**ಬಾಲ್ಯ ವಿವಾಹ ನಿಷೇಧ**

**ಒಲೆ ಹತ್ತಿ ಉರಿದರೆ ನಿಲಬಹುದಲ್ಲದೆ,**
**ಧರೆ ಹತ್ತಿ ಉರಿದರೆ ನಿಲಬಾರದು.**
**ಏರಿ ನೀರುಂಬಡೆ, ಬೇಲಿ ಕೈಯ ಮೇವಡೆ,**
**ನಾರಿ ತನ್ನ ಮನೆಯಲ್ಲಿ ಕಳುವಡೆ,**
**ತಾಯ ಮೊಲೆವಾಲು ನಂಜಾಗಿ ಕೊಲುವಡೆ,**
**ಇನ್ನಾರಿಗೆ ದೂರುವೆ**
**ತಂದೆ ಕೂಡಲ ಸಂಗಮದೇವ**

ಸಾಮಾಜಿಕ ನ್ಯಾಯ ನೀಡಿಕೆ ಮಕ್ಕಳಿಂದಲೇ ಪ್ರಾರಂಭವಾಗಬೇಕು. ಎಳೆಯ ಸಸಿಗೆ ಸರಿಯಾಗಿ ಆರೈಕೆ ನೀಡಿ ಪೋಷಿಸದಿದ್ದರೆ, ಅದು ಬಲವಾದ ಹಾಗೂ ಉಪಯುಕ್ತ ವೃಕ್ಷವಾಗಿ ಬೆಳೆಯಲಾರದು, ಆದ್ದರಿಂದ ಸಾಮಾಜಿಕ ನ್ಯಾಯದ ಮಾನದಂಡದಲ್ಲಿ ಮಕ್ಕಳ ಅಭಿವೃದ್ಧಿಗೆ ಪ್ರಪ್ರಥಮ ಆದ್ಯತೆ ನೀಡಬೇಕು.

ಬಾಲ್ಯ ವಿವಾಹವು ಹಿಂದಿನ ಕಾಲದಿಂದಲೂ ನಡೆದು ಬಂದಿರುವ ಅನಿಷ್ಟ ಪದ್ಧತಿಯಾಗಿದ್ದು, ಈ ಶತಮಾನದಲ್ಲಿಯೂ ಮುಂದುವರೆದಿರುವುದು ತುಂಬಾ ಶೋಚನೀಯವಾಗಿರುತ್ತದೆ. ಇದು ಮಕ್ಕಳ ಹಕ್ಕುಗಳ ಉಲ್ಲಂಘನೆ ಹಾಗೂ ಉತ್ತಮ ಸಮಾಜದ ನಿರ್ಮಾಣಕ್ಕೆ ಧಕ್ಕೆ ಉಂಟು ಮಾಡುತ್ತದೆ. ಈ ಅಪಾಯಕಾರಿ ಪದ್ಧತಿಯು ಎಳೆ ತಾಯಂದಿರ ಮರಣ, ಶಿಶು ಮರಣ, ಅಪೌಷ್ಠಿಕತೆಯನ್ನುಂಟು ಮಾಡುವುದಲ್ಲದೆ ಮಕ್ಕಳ ಬೌದ್ಧಿಕ, ದೈಹಿಕ ಹಾಗೂ ಮಾನಸಿಕ ಸಾಮರ್ಥ್ಯಕ್ಕಿಂತಲೂ ಹೆಚ್ಚಿನ ಜವಾಬ್ದಾರಿಯನ್ನು ಹೊರುವಂತೆ ಮಾಡುತ್ತದೆ.

ಮೇಲಿನ ಬಸವಣ್ಣನವರ ವಚನವು ಅಂದಿಗೂ ಇಂದಿಗೂ ಪ್ರಸ್ತುತವಾಗಿದೆ. ತಂದೆತಾಯಿಗಳೇ ಮಕ್ಕಳ ಬಾಲ್ಯವನ್ನು ಕಸಿದು, ಬಾಲ್ಯ ವಿವಾಹವೆಂಬ ಕೂಪಕ್ಕೆ ತಳ್ಳಿದರೆ ಅವರನ್ನು ಕಾಪಾಡುವವರು ಯಾರು? ಅದಕ್ಕಾಗಿಯೇ ಸರ್ಕಾರ ಬಾಲ್ಯ ವಿವಾಹ ತಡೆಯಲು ಕಾನೂನಿನಡಿ ಶಿಕ್ಷೆಯನ್ನ ವಿಧಿಸಿದೆ. ಮಗಳನ್ನು ವಿದ್ಯಾವಂತಳಾಗಿ, ಪ್ರಬುದ್ಧಳಾಗಿ ಬೆಳೆಯಲು ಬಿಡೋಣ, ಬಾಲ್ಯ ವಿವಾಹವನ್ನ ತಡೆಯಲು ಕೈಗೊಳ್ಳಬೇಕಾದ ಕ್ರಮಗಳ ಕುರಿತು ಎಲ್ಲಾ ಬಾಲ್ಯ ವಿವಾಹ ನಿಷೇಧಾಧಿಕಾರಿಗಳಿಗೆ ಮಾರ್ಗಸೂಚಿಯಾಗಿ ಹೊರತಂದಿರುವ ಈ ಹೊತ್ತಿಗೆ ಉಪಯುಕ್ತವಾಗಿದ್ದು, ಇದರ ಮಾರ್ಗಸೂಚಿಯನ್ವಯ ಬಾಲ್ಯ ವಿವಾಹಗಳನ್ನು ತಡೆದು ಸಮಾಜದಿಂದ ಬಾಲ್ಯ ವಿವಾಹವೆಂಬ ಅನಿಷ್ಠ ಪದ್ಧತಿಯು ತೊಲಗಲಿ ಎಂದು ಹಾರೈಸುತ್ತೇನೆ.

**(ಶಶಿಕಲಾ ಅ. ಜೊಲ್ಲೆ)**
ಸಚಿವರು, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ
ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಇಲಾಖೆ, ಕರ್ನಾಟಕ ಸರ್ಕಾರ

# ಸಂದೇಶ

## ಬಾಲ್ಯ ವಿವಾಹ ನಿಷೇಧ

ಮನುಕುಲಕ್ಕೆ ಅತ್ಯುತ್ತಮ ಕೊಡುಗೆ ಮಕ್ಕಳು, ಅವರು ನಮ್ಮ ರಾಷ್ಟ್ರದ ಅತ್ಯಮೂಲ್ಯ ಆಸ್ತಿ ಅವರನ್ನು ಪಾಲಿಸಬೇಕು, ಪ್ರೀತಿಸಬೇಕು, ಸಂರಕ್ಷಿಸಬೇಕು. ರಾಷ್ಟ್ರದ ಪ್ರಗತಿಗೆ ಮಕ್ಕಳು ಸಮರ್ಥ ಮತ್ತು ಉಪಯುಕ್ತ ಮಾನವ ಸಂಪನ್ಮೂಲ ಸದೃಢ, ಬುದ್ಧಿವಂತ ಹಾಗೂ ಪ್ರತಿಭಾವಂತ ಮಕ್ಕಳು ಮಾತ್ರವೇ ದೇಶವನ್ನು ಸದೃಢಗೊಳಿಸಬಲ್ಲರು ಮತ್ತು ಎತ್ತರಕ್ಕೇರಿಸಬಲ್ಲರು ಎಂಬುದನ್ನು ನಾವು ನೆನಪಿಸಿಕೊಳ್ಳಬೇಕು. ಬಾಲ್ಯ ವಿವಾಹದಂತಹ ಅನಿಷ್ಟ ಪದ್ಧತಿಯಿಂದಾಗಿ ಮಕ್ಕಳ ಮೂಲಭೂತ ಸ್ವಾತಂತ್ರ್ಯವನ್ನು ಕಸಿದಂತಾಗುತ್ತದೆ. ದೈಹಿಕ, ಭಾವನಾತ್ಮಕ ಹಾಗೂ ಮಾನಸಿಕ ಪರಿಣಾಮಗಳು ಮತ್ತು ಬೆಳವಣಿಗೆಗೆ ಸಂಬಂಧಪಟ್ಟ ಇತರೆ ಸಮಸ್ಯೆಗಳ ಜೊತೆಗೆ ಅನೇಕ ಗಂಭೀರ ಮತ್ತು ಸರಿಪಡಿಸಲಾಗದಂತಹ ಪರಿಣಾಮಗಳನ್ನು ಬಾಲ್ಯ ವಿವಾಹ ಉಂಟು ಮಾಡುತ್ತದೆ.

ಬಾಲ್ಯ ವಿವಾಹವನ್ನು ತಡೆಯಲು ಬಾಲ್ಯ ವಿವಾಹ ನಿಷೇಧ ಕಾಯ್ದೆ 2006 ಜಾರಿಯಲ್ಲಿದೆ. ಬಾಲ್ಯ ವಿವಾಹ ಅನೂರ್ಜಿತ ಎಂದು ಕರ್ನಾಟಕ ರಾಜ್ಯದಲ್ಲಿ ತಿದ್ದುಪಡಿಯನ್ನು ತರಲಾಗಿದೆ. ಬಾಲ್ಯ ವಿವಾಹ ನಿಷೇಧದ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ನಿರ್ದೇಶನಾಲಯದಲ್ಲಿ ಪ್ರತ್ಯೇಕವಾಗಿ ಬಾಲ್ಯ ವಿವಾಹ ನಿಷೇಧ ಮತ್ತು ಉಸ್ತುವಾರಿ ಕೋಶ ಕಾರ್ಯ ನಿರ್ವಹಿಸುತ್ತಿದೆ ಆದಾಗ್ಯೂ ರಾಜ್ಯಾದ್ಯಂತ ಬಾಲ್ಯ ವಿವಾಹ ನಡೆಯುತ್ತಿರುವ ಬಗ್ಗೆ ವರದಿಯಾಗುತ್ತಿದೆ.

ಬಾಲ್ಯ ವಿವಾಹ ಒಂದು ಸಾಮಾಜಿಕ ಪಿಡುಗಾಗಿದ್ದು, ಇದನ್ನು ತಡೆಯುವಲ್ಲಿ ಪ್ರತಿಯೊಬ್ಬರು ಕೈಜೋಡಿಸಬೇಕಾಗಿದೆ. ಬಾಲ್ಯ ವಿವಾಹಕ್ಕೆ ಸಂಬಂಧಿಸಿದಂತೆ ಸರ್ಕಾರಿ, ಸರ್ಕಾರೇತರ, ಸ್ವಯಂ ಸೇವಾ ಸಂಸ್ಥೆಗಳು ಮತ್ತು ಸಾರ್ವಜನಿಕರ ಪಾತ್ರ ಮತ್ತು ಜವಾಬ್ದಾರಿಗಳ ಬಗ್ಗೆ ಮಾಹಿತಿಯನ್ನು ಒದಗಿಸಲು ಕ್ಷೇತ್ರ ಮಟ್ಟದಲ್ಲಿ ಅನುಭವ ಹೊಂದಿರುವಂತಹ ಪರಿಣಿತರಿಂದ ಈ ಕ್ರಮ ಬದ್ಧ ಕಾರ್ಯಕ್ರಮ ಮಾರ್ಗಸೂಚಿಯನ್ನು ತಯಾರಿಸಲಾಗಿದೆ. ತಮ್ಮ ಅತ್ಯುತ್ತಮ ಪರಿಶ್ರಮಕ್ಕಾಗಿ ಈ ತಂಡವನ್ನು ಅಭಿನಂದಿಸುತ್ತಾ ಬಾಲ್ಯ ವಿವಾಹವನ್ನು ತಡೆಯಲು ಮತ್ತು ಸಂಪೂರ್ಣವಾಗಿ ನಿಷೇಧಿಸಲು ಈ ಮಾರ್ಗಸೂಚಿಯು ಸಹಕಾರಿಯಾಗಲಿ ಎಂದು ಹಾರೈಸುತ್ತೇನೆ.

**(ರಾಕೇಶ್ ಸಿಂಗ್, ಭಾ.ಆ.ಸೇ)**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಇಲಾಖೆ, ಬೆಂಗಳೂರು

# ಸಂದೇಶ

## ಬಾಲ್ಯ ವಿವಾಹ ನಿಷೇಧ

ಈ ದೇಶದಲ್ಲಿರುವ ಪ್ರತಿಯೊಂದು ಮಗುವೂ– ಅದು ಯಾವುದೇ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯಿಂದ ಬಂದಿದ್ದರೂ ಪಾಲನೆ, ಸಂರಕ್ಷಣೆ, ಅಭಿವೃದ್ಧಿ ಮತ್ತು ಬಾಲ್ಯವನ್ನು ಅನುಭವಿಸುವ ಮತ್ತು ಪರಿಪೂರ್ಣ ಮತ್ತು ಸಂಪೂರ್ಣ ವ್ಯಕ್ತಿಯಾಗಿ ಬೆಳೆಯುವ ಹಕ್ಕನ್ನು ಹೊಂದಿರುತ್ತದೆ. ಈ ಹಕ್ಕುಗಳು ಭಾರತದ ಸಂವಿಧಾನದಲ್ಲಿ ಅಂತರ್ಗತವಾಗಿ ಸೇರ್ಪಡೆಯಾಗಿವೆ. ಈ ಹಿನ್ನೆಲೆಯಲ್ಲಿ ಬಾಲ್ಯ ವಿವಾಹವು ಉತ್ತಮ ಆರೋಗ್ಯ, ಪೌಷ್ಠಿಕ ಆಹಾರ, ಶಿಕ್ಷಣಕ್ಕಿರುವ ಹಕ್ಕುಗಳಿಂದ ಮಕ್ಕಳನ್ನು ವಂಚಿಸುತ್ತದಾದ್ದರಿಂದ, ಬಾಲ್ಯ ವಿವಾಹ ಭಾರತದ ಸಂವಿಧಾನದಲ್ಲಿ ನಿರೂಪಿತವಾಗಿರುವ ಈ ಹಕ್ಕುಗಳ ತೀವ್ರ ಉಲ್ಲಂಘನೆಯಾಗಿದೆ.

ಬಾಲ್ಯ ವಿವಾಹವನ್ನು ತಡೆಗಟ್ಟಲು ಕಾನೂನುಗಳು ಇದ್ದರೂ ಬಾಲ್ಯ ವಿವಾಹ ಮುಂದುವರೆದಿದ್ದು ಮಕ್ಕಳ ಸಹಜ ಬೆಳವಣಿಗೆಯನ್ನು ಮತ್ತು ಅಭಿವೃದ್ಧಿಯನ್ನು ಕುಂಠಿತಗೊಳಿಸುತ್ತಿರುವುದು ತನ್ಮೂಲಕ ಇಡೀ ರಾಷ್ಟ್ರದ ಬೆಳವಣಿಗೆ ಹಾಗೂ ಪ್ರಗತಿಯ ಮೇಲೆ ಪರಿಣಾಮ ಬೀರುತ್ತಿರುವುದು ವಿಪರ್ಯಾಸ. ಬಾಲ್ಯ ವಿವಾಹ ಮಕ್ಕಳ ಮೇಲೆ ಬೀರುವ ದುಷ್ಪರಿಣಾಮಗಳ ಬಗ್ಗೆ ಸಮುದಾಯದಲ್ಲಿ ಜಾಗೃತಿ ಮೂಡಿಸುವ ಮೂಲಕ ಮತ್ತು ಅವರಿಗೆ ಪರ್ಯಾಯ ಮಾರ್ಗಗಳನ್ನು ಸೂಚಿಸುವಂತ ಕಾರ್ಯಕ್ರಮಗಳನ್ನು ನಡೆಸುವ ಮತ್ತು ಕಾನೂನುಗಳ ಹೆಚ್ಚು ಪರಿಣಾಮಕಾರಿಯಾಗಿ ಜಾರಿಗೊಳಿಸುವಂತೆ ಒತ್ತಾಯ ಮಾಡುವ ಮೂಲಕ ಬಾಲ್ಯ ವಿವಾಹ ಪದ್ಧತಿಗೆ ಪ್ರೋತ್ಸಾಹ ನೀಡದಿರುವಂತೆ ಮಾಡಲು ಸರ್ಕಾರ ಮತ್ತು ಸ್ಥಳೀಯ ನಾಗರೀಕ ಸಮಾಜದ ಸಂಘಟನೆಗಳು ಹೆಚ್ಚಿನ ತೀವ್ರತೆಯಿಂದ ಕೆಲಸ ಮಾಡಬೇಕು.

ಬಾಲ್ಯ ವಿವಾಹವನ್ನು ತಡೆಯಲು ಬಾಲ್ಯವಿವಾಹ ನಿಷೇಧ ಕಾಯ್ದೆ 2006 ಹಾಗೂ ಕರ್ನಾಟಕ ರಾಜ್ಯ ತಿದ್ದುಪಡಿ ಕಾಯ್ದೆ 2018 ಜಾರಿಯಲ್ಲಿದೆ. ರಾಜ್ಯಾದ್ಯಂತ ವಿವಿಧ ಇಲಾಖೆಗಳಲ್ಲಿ, ವಿವಿಧ ಹಂತಗಳಲ್ಲಿ ಸೇವೆ ಸಲ್ಲಿಸುತ್ತಿರುವ ವಿವಿಧ ಇಲಾಖೆಗಳ ಸುಮಾರು 58000 ಅಧಿಕಾರಿಗಳನ್ನು ಬಾಲ್ಯ ವಿವಾಹ ನಿಷೇಧಾಧಿಕಾರಿಗಳು ಎಂದು ನೇಮಿಸಲಾಗಿದ್ದರೂ, ರಾಜ್ಯದ ಮೂಲೆ ಮೂಲೆಗಳಲ್ಲಿಯೂ ಬಾಲ್ಯ ವಿವಾಹ ನಡೆಯುತ್ತಿರುವುದು ಗಮನಿಸಲಾಗಿದೆ. ಬಾಲ್ಯ ವಿವಾಹದಂತಹ ಅನಿಷ್ಟ ಪದ್ಧತಿಯನ್ನು ನಿರ್ಮೂಲನೆಗೊಳಿಸಲು ಈ ನಿಟ್ಟಿನಲ್ಲಿ ತೊಡಗಿರುವ ಪ್ರತಿಯೊಬ್ಬರಿಗೂ ಮಾರ್ಗದರ್ಶನ ಒದಗಿಸಲು ಈ ಕ್ರಮಬದ್ಧ ಕಾರ್ಯವಿಧಾನ ಮಾರ್ಗಸೂಚಿಯನ್ನು ಸಿದ್ಧಪಡಿಸಿರುವ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯನ್ನು ಶ್ಲಾಘಿಸುತ್ತೇನೆ.

**(ವಂದಿತಾ ಶರ್ಮಾ, ಭಾ.ಆ.ಸೇ)**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು
ಹಾಗೂ ಅಭಿವೃದ್ಧಿ ಆಯುಕ್ತರು,
ಕರ್ನಾಟಕ ಸರ್ಕಾರ.

# ಸಂದೇಶ

## ಬಾಲ್ಯ ವಿವಾಹ ನಿಷೇಧ

ಬಾಲ್ಯ ವಿವಾಹ ಒಂದು ಸಾಮಾಜಿಕ ಪಿಡುಗಾಗಿದ್ದು, ಮಕ್ಕಳ ಮಾನವೀಯ ಹಕ್ಕುಗಳ ಉಲ್ಲಂಘನೆಯಾಗಿದ್ದು, ಅವರ ಬಾಲ್ಯವನ್ನು ಕಸಿದುಕೊಳ್ಳುವ, ಭವಿಷ್ಯವನ್ನು ಹಾಳುಗೆಡುವಂತಹ ಪದ್ಧತಿಯಾಗಿರುತ್ತದೆ. ಬಾಲ್ಯ ವಿವಾಹದ ಈ ಕೆಟ್ಟ ಪದ್ಧತಿಯನ್ನು ಸಂಪೂರ್ಣವಾಗಿ ತೊಡೆದುಹಾಕಬೇಕಾಗಿದೆ.

ಬಾಲ್ಯ ವಿವಾಹವನ್ನು ತಡೆಗಟ್ಟಲು ಸರ್ಕಾರ ಹಾಗೂ ಸಮಾಜ ಸಾಕಷ್ಟು ಪ್ರಯತ್ನಗಳನ್ನು ನಡೆಸಿದ್ದರೂ ಸಮಾಜದಲ್ಲಿ ಬಾಲ್ಯವಿವಾಹ ನಡೆಯುತ್ತಿರುವುದು ಗಮನಿಸಬಹುದಾಗಿದೆ. ಮಕ್ಕಳಲ್ಲಿ ದೈಹಿಕ, ಮಾನಸಿಕ ಹಾಗೂ ಭಾವನಾತ್ಮಕ ಬೆಳವಣಿಗೆ ಆಗುವುದಕ್ಕೆ ಮುಂಚೆ ಆಗುವ ಮದುವೆಯಿಂದ ಅವರ ಸಾಮಾನ್ಯ ಶೈಶವಾಧಿಕಾರವನ್ನು ಕಸಿದಂತಾಗುತ್ತದೆ ಅಲ್ಲದೆ ಅವರಿಗೆ ನ್ಯಾಯವಾಗಿ ದೊರೆಯಬೇಕಾದ ಮತ್ತು ಮೂಲಭೂತವಾಗಿರುವ ಮಾನವ ಹಕ್ಕುಗಳಿಂದ ಅವರನ್ನು ವಂಚಿತರನ್ನಾಗಿಸುತ್ತದೆ.

ಬಾಲ್ಯ ವಿವಾಹ ಅನೂರ್ಜಿತ ಎಂದು ಕರ್ನಾಟಕ ರಾಜ್ಯದಲ್ಲಿ ತಿದ್ದುಪಡಿ ತರಲಾಗಿದ್ದರೂ, ಈ ಬಗ್ಗೆ ಜನರಿಗೆ ಅರಿವಿದ್ದರೂ ಬಾಲ್ಯ ವಿವಾಹಗಳನ್ನು ನಡೆಸುವ ಪ್ರಯತ್ನಗಳು ಮುಂದುವರೆಯುತ್ತಲೇ ಇವೆ. ರಾಜ್ಯಾದ್ಯಂತ ಸುಮಾರು 58,000 ಅಧಿಕಾರಿಗಳನ್ನು ಬಾಲ್ಯ ವಿವಾಹ ನಿಷೇಧಾಧಿಕಾರಿಗಳು ಎಂದು ಗುರುತಿಸಲಾಗಿದೆ. ಬಾಲ್ಯ ವಿವಾಹ ಪ್ರಕರಣಗಳು ಕಂಡು ಬಂದಾಗ ಸ್ವಪ್ರೇರಣೆಯಿಂದ ಪ್ರತಿಯೊಂದು ಇಲಾಖೆಯು ಮುನ್ನುಗ್ಗಿ ಕ್ರಮ ಕೈಗೊಳ್ಳಬೇಕಾಗಿದೆ. ಈ ಹಿನ್ನೆಲೆಯಲ್ಲಿ ಕ್ಷೇತ್ರ ಮಟ್ಟದಲ್ಲಿ ಅನುಭವ ಹೊಂದಿರುವಂತಹ ಸ್ವಯಂ ಸೇವಾ ಸಂಸ್ಥೆಗಳು ಮತ್ತು ವಿವಿಧ ಇಲಾಖೆಗಳ ಅಧಿಕಾರಿಗಳನ್ನು ಒಳಗೊಂಡ ತಂಡದಿಂದ ಈ ಕ್ರಮ ಬದ್ಧ ಕಾರ್ಯಕ್ರಮ ಮಾರ್ಗಸೂಚಿಯನ್ನು ತಯಾರಿಸಲಾಗಿದ್ದು, ಬಾಲ್ಯ ವಿವಾಹ ಪ್ರಕರಣಗಳು ಕಂಡುಬಂದಾಗ ಪ್ರತಿಯೊಬ್ಬ ನಿಷೇಧಾಧಿಕಾರಿಗಳು ನಿರ್ವಹಿಸಬೇಕಾದ ಜವಾಬ್ದಾರಿ ಮತ್ತು ಪಾತ್ರದ ಬಗ್ಗೆ ಮಾಹಿತಿಯನ್ನು ಒಳಗೊಂಡಿದೆ. ಬಾಲ್ಯ ವಿವಾಹವನ್ನು ಸಂಪೂರ್ಣವಾಗಿ ತೊಡೆದುಹಾಕಲು/ತಡೆಯಲು ಈ ಕ್ರಮಬದ್ಧ ಕಾರ್ಯವಿಧಾನ ಮಾರ್ಗಸೂಚಿಯು ಎಲ್ಲಾ ನಿಷೇಧಾಧಿಕಾರಿಗಳಿಗೆ ಹಾಗೂ ಸಾರ್ವಜನಿಕರಿಗೆ ಒಂದು ಮಾರ್ಗದರ್ಶನವಾಗಲಿ ಎಂದು ಹಾರೈಸುತ್ತೇನೆ.

**(ಕೆ. ಎ. ದಯಾನಂದ, ಭಾ.ಆ.ಸೇ)**
ನಿರ್ದೇಶಕರು
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಬೆಂಗಳೂರು

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಬಾಲ್ಯ ವಿವಾಹ ನಿಷೇಧ ಕಾಯ್ದೆ-2006 ಬಾಲ್ಯ ವಿವಾಹ ನಿಷೇಧ (ಕರ್ನಾಟಕ ತಿದ್ದುಪಡಿ) ಕಾಯ್ದೆ-2016ರ ಜಾರಿಗೊಳಿಸುವಿಕೆ ಮತ್ತು ಅನುಷ್ಠಾನದ "ಕ್ರಮಬದ್ಧ ಕಾರ್ಯವಿಧಾನ ಪ್ರಕ್ರಿಯೆ"ಯನ್ನು ಅಂತಿಮಗೊಳಿಸುವ ಕುರಿತು.

21 JAN 2021

ಓದಲಾಗಿದೆ : 1. ಸರ್ಕಾರದ ಆದೇಶ ಸಂಖ್ಯೆ:ಮಮಇ 63 ಮಮಅ 2017 ದಿನಾಂಕ:06.01.2018

2. ನಿರ್ದೇಶಕರು, ಮಮಅ ಇಲಾಖೆ, ಇವರ ಏಕ ಕಡತ ಸಂಖ್ಯೆ:ಮಮಅಇ/ಬಾವಿನಿಕೋ/ಎಸ್.ಒ.ಪಿ/22/2017-18,ದಿನಾಂಕ: 19.02.2020

•••••

ಪ್ರಸ್ತಾವನೆ:

ಬಾಲ್ಯ ವಿವಾಹ ನಿಷೇಧ ಅನುಷ್ಠಾನ ಕಾರ್ಯಕ್ರಮದ ಕ್ರಮಬದ್ಧ ಕಾರ್ಯವಿಧಾನ ಪ್ರಕ್ರಿಯೆಯನ್ನು (Standard Operating Procedure) ತಯಾರಿಸಲು ಮೇಲೆ ಓದಲಾದ ಕ್ರಮ ಸಂಖ್ಯೆ(1)ರ ಆದೇಶದಲ್ಲಿ 14 ಸದಸ್ಯರನ್ನೊಳಗೊಂಡ ಸಮಿತಿಯನ್ನು ರಚಿಸಲಾಗಿರುತ್ತದೆ.

ಸದರಿ ಸಮಿತಿಯು ದಿನಾಂಕ: 01.02.2018 ರಲ್ಲಿ ಸಭೆ ಸೇರಿ ಚರ್ಚಿಸಿ ಕ್ರಮಬದ್ಧ ಕಾರ್ಯವಿಧಾನ ಪ್ರಕ್ರಿಯೆಯನ್ನು ರಚಿಸಿದೆ. ಈ ಕ್ರಮಬದ್ಧ ಕಾರ್ಯವಿಧಾನ ಪ್ರಕ್ರಿಯೆಯನ್ನು ಅಂತಿಮಗೊಳಿಸುವಿಕೆಗೆ ಸಂಬಂಧಿಸಿದಂತೆ ದಿನಾಂಕ;30.12.2019 ರಂದು ನಿರ್ದೇಶನಾಲಯದಲ್ಲಿ ಸಭೆ ಸೇರಿ ಸದರಿ ಕ್ರಮಬದ್ಧ ಕಾರ್ಯವಿಧಾನ ಪ್ರಕ್ರಿಯೆಯನ್ನು ಪರಿಷ್ಕರಿಸಲಾಗಿದ್ದು, ಇದಕ್ಕೆ ಸರ್ಕಾರದ ಅನುಮೋದನೆಯನ್ನು ಮೇಲೆ ಓದಲಾದ ಕ್ರಮ ಸಂಖ್ಯೆ(2)ರ ಏಕ ಕಡತದಲ್ಲಿ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಮಮಇ 44 ಮಮಅ 2020, ಬೆಂಗಳೂರು ದಿನಾಂಕ: 20.01.2021**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಬಾಲ್ಯ ವಿವಾಹ ನಿಷೇಧ ಕಾಯ್ದೆ-2006 ಬಾಲ್ಯ ವಿವಾಹ ನಿಷೇಧ (ಕರ್ನಾಟಕ ತಿದ್ದುಪಡಿ) ಕಾಯ್ದೆ-2016ರ ಜಾರಿಗೊಳಿಸುವಿಕೆ ಮತ್ತು ಅನುಷ್ಠಾನದ "ಕ್ರಮಬದ್ಧ ಕಾರ್ಯವಿಧಾನ ಪ್ರಕ್ರಿಯೆ" ಯನ್ನು (Standard Operative Procedure) ಅನುಬಂಧದಲ್ಲಿ ಇರುವಂತೆ ರಚಿಸಿ ತಕ್ಷಣದಿಂದ ಜಾರಿಗೆ ಬರುವಂತೆ ಆದೇಶಿಸಿದೆ.

ಸದರಿ "ಕ್ರಮಬದ್ಧ ಕಾರ್ಯಕ್ರಮ ಪ್ರಕ್ರಿಯೆ" (Standard Operative Procedure)ಯಲ್ಲಿ ತಿಳಿಸಿರುವಂತೆ ಸಂಬಂಧಪಟ್ಟ ಇತರ ಇಲಾಖೆಗಳು ಯೋಜನೆಯ ಅನುಷ್ಠಾನಕ್ಕಾಗಿ ಅಗತ್ಯಕ್ರಮ ಕೈಗೊಳ್ಳತಕ್ಕದ್ದು ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ನೋಡಲ್ ಇಲಾಖೆಯಾಗಿ ಕಾರ್ಯನಿರ್ವಹಿಸತಕ್ಕದ್ದು.

ಅಂತಿಮಗೊಳಿಸಲಾದ ಬಾಲ್ಯ ವಿವಾಹ ನಿಷೇಧ ಕಾಯ್ದೆ-2006 ಬಾಲ್ಯ ವಿವಾಹ ನಿಷೇಧ (ಕರ್ನಾಟಕ ತಿದ್ದುಪಡಿ) ಕಾಯ್ದೆ-2016ರ "ಕ್ರಮಬದ್ಧ ಕಾರ್ಯಕ್ರಮ ಪ್ರಕ್ರಿಯೆ" (Standard Operative Procedure) 2019ರ ಮುದ್ರಿತ ಪ್ರತಿಗಳನ್ನು ಮುದ್ರಣಾಲಯದಿಂದ ಪಡೆದು ಸಂಬಂಧಿಸಿದ ಎಲ್ಲಾ ಇಲಾಖೆಗಳಿಗೆ ಹಾಗೂ ಅನುಷ್ಠಾನ ಸಮಿತಿ ಸದಸ್ಯರುಗಳಿಗೆ ರವಾನಿಸಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಅಗತ್ಯ ಕ್ರಮ ವಹಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

Padmini S.N. 20/1/21
(ಪದ್ಮಿನಿ ಎಸ್ ಎನ್)

ಸರ್ಕಾರದ ಅಧೀನ ಕಾರ್ಯದರ್ಶಿ-1,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ.

# ಪರಿವಿಡಿ


| ಕ್ರ.ಸಂ | ವಿಷಯ | ಪು. ಸಂ |
|---|---|---|
| 1. | ಹಿನ್ನೆಲೆ. | 15 |
| 2. | ಉದ್ದೇಶಗಳು | 16 |
| 3. | ಈ ಕ್ರಮಬದ್ಧ ಕಾರ್ಯವಿಧಾನ ಪ್ರಕ್ರಿಯೆಗಳು ಯಾಕೆ ಬೇಕು? | 17 |
| 4. | ಬಾಲ್ಯವಿವಾಹವೆಂದರೇನು? | 17 |
| 5. | ಬಾಲ್ಯವಿವಾಹ ನಿಷೇಧ ಕಾಯ್ದೆ–2006 ಕೆಲವು ಪ್ರಮುಖ ಪರಿಚ್ಛೇದಗಳು. | 17-19 |
| 6. | ಬಾಲ್ಯವಿವಾಹ ನಿಷೇಧ (ಕರ್ನಾಟಕ ತಿದ್ದುಪಡಿ) ಕಾಯ್ದೆ–2016ರ ಕೆಲವು ಪ್ರಮುಖ ಅಂಶಗಳು. | 20-21 |
| 7. | ಬಾಲ್ಯ ವಿವಾಹ ನಿಷೇಧ ಅಧಿಕಾರಿಗಳು. | 21-23 |
| 8. | ಬಾಲ್ಯ ವಿವಾಹ ನಿಷೇಧ ಕಾಯ್ದೆ ಮತ್ತು ನಿಯಮಗಳ ಪ್ರಕಾರ ಬಾಲ್ಯ ವಿವಾಹ ನಿಷೇಧ ಅಧಿಕಾರಿಗಳ ಕರ್ತವ್ಯಗಳು. | 23-25 |
| 9. | ವಯಸ್ಸಿನ ಪುರಾವೆಯನ್ನು ಸಲ್ಲಿಸುವುದಕ್ಕಾಗಿ ಕಡ್ಡಾಯ ಪ್ರಮಾಣ ಪತ್ರಗಳು. | 25-26 |
| 10. | ಬಾಲ್ಯವಿವಾಹವನ್ನು ತಡೆಗಟ್ಟಲು ಮಾಡಬೇಕಾದ ಪ್ರಮುಖ ಅಗತ್ಯ ಕ್ರಮಗಳು. | 26-29 |
| 11. | ಸಹಕಾರ / ಸಮನ್ವಯತೆ / ಸಹಭಾಗಿತ್ವ | 29-30 |
| 12. | 'ಬಾಲ್ಯ ವಿವಾಹ'ದ ಗುರುತಿಸುವಿಕೆ ಮತ್ತು ಮಾಹಿತಿ ಪಡೆಯುವ ಕ್ರಮ. | 30-31 |
| 13. | ಬಾಲ್ಯವಿವಾಹದ ಬಗ್ಗೆ ಮಾಹಿತಿ/ ದೂರು ನೀಡುವವರು ನೀಡಬೇಕಾದ ವಿವರಗಳು | 31-32 |
| 14. | ರಾಜ್ಯದ ಯಾವುದೇ ಮೂಲೆಯಲ್ಲಿ ಬಾಲ್ಯವಿವಾಹ ನಡೆಯುತ್ತಿದೆ ಅಥವಾ ನಡೆದು ಹೋಗಿದೆ ಎಂದಾದಲ್ಲಿ ದೂರು ನೀಡಲು ಸಾರ್ವಜನಿಕರಿಗೆ ಇರಬೇಕಾದ ಅರಿವಿನ ವಿವರ. | 32-33 |
| 15. | ಗ್ರಾಮ ಪಂಚಾಯತಿ ಬಾಲ್ಯವಿವಾಹ ನಿರ್ಮೂಲನಾ ಕ್ರಿಯಾ ಯೋಜನೆಯಲ್ಲಿ ವರ್ಷದ ಪ್ರಾರಂಭದಲ್ಲಿ ತಂಡಗಳನ್ನು ಸಿದ್ಧಪಡಿಸಿರುವುದು. | 34 |
| 16. | ಬಾಲ್ಯ ವಿವಾಹಕ್ಕೆ ಸಿದ್ಧತೆ, ನಿಶ್ಚಿತಾರ್ಥ ಮಾಡುತ್ತಿದ್ದಾರೆ ಎಂಬ ಮಾಹಿತಿ/ ದೂರು ಬಂದಾಗ ಕೈಗೊಳ್ಳಬೇಕಾದ ಕ್ರಮಗಳು. | 35-37 |

| | | |
|---|---|---|
| 17. | ಬಾಲ್ಯವಿವಾಹದ ಹಿಂದಿನ ದಿನ ಅಥವಾ ಮದುವೆಯ ದಿನ ಶಾಸ್ತ್ರ ಮುಗಿಸುವ ಮುನ್ನ (ತಾಳಿ ಕಟ್ಟುವ) ಮಾಹಿತಿ / ದೂರು ಬಂದಾಗ ತಕ್ಷಣ ಕೈಗೊಳ್ಳಬೇಕಾದ ರಕ್ಷಣಾ ಕ್ರಮಗಳು. | 37-39 |
| 18. | ಬಾಲ್ಯವಿವಾಹ ನಡೆದ ಪ್ರಕರಣಗಳಲ್ಲಿ ಕೈಗೊಳ್ಳಬೇಕಾದ ಕ್ರಮಗಳು ಹಾಗೂ ರಕ್ಷಿಸಲ್ಪಟ್ಟ ಬಾಲಕಿ/ ಬಾಲಕರ ಪುನರ್ವಸತಿ ಕ್ರಮಗಳು | 39-40 |
| 19. | ಬಾಲ್ಯವಿವಾಹಕ್ಕೊಳಗಾದ ಬಾಲಕಿ/ಬಾಲಕರ ಗೌಪ್ಯತೆಯನ್ನು ಕಾಪಾಡುವ ಬಗ್ಗೆ. | 40-41 |
| 20. | ಸಾಮೂಹಿಕ ವಿವಾಹಗಳಲ್ಲಿ ಬಾಲ್ಯವಿವಾಹಗಳನ್ನು ತಡೆಗಟ್ಟುವ ಬಗ್ಗೆ. | 41 |
| 21. | ಬಾಲ್ಯವಿವಾಹ ನಿಷೇಧ ಅಧಿಕಾರಿಗಳು ಮರೆಯಬಾರದ ಕೆಲವು ಪ್ರಮುಖ ಅಂಶಗಳು. | 42 |
| 22. | ಬಾಲ್ಯವಿವಾಹ ಮತ್ತು ಇತರೆ ಕಾಯ್ದೆಗಳು. | 42 |
| 23. | ಕೊನೆ ಮಾತು. | 43 |
| 24. | ನಮೂನೆ 1 ಮತ್ತು 2 | 44-46 |

## I. ಹಿನ್ನೆಲೆ :

ಭಾರತ 1992 ಡಿಸೆಂಬರ್-11 ರಂದು ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆಗೆ (1989-ನವೆಂಬರ್-20) ಸಹಿ ಮಾಡಿದೆ. ಅದರಂತೆ 18 ವರ್ಷದೊಳಗಿನವರೆಲ್ಲರೂ ಮಕ್ಕಳು ಎಂದು ಹೇಳಿದರನ್ವಯ ಭಾರತ ತನ್ನ ಮಕ್ಕಳ ಪರವಾದ ಹಲವಾರು ಕಾಯ್ದೆಗಳನ್ನು ತಿದ್ದುಪಡಿ ಮಾಡಿ ಅನುಷ್ಠಾನಕ್ಕೆ ತಂದಿದೆ. ಅದರಂತೆ 1929ರಲ್ಲಿ ಇದ್ದ ಬಾಲ್ಯವಿವಾಹ ನಿಷೇಧ ಕಾಯ್ದೆಯನ್ನು ರದ್ದುಪಡಿಸಿ 2006ರಲ್ಲಿ "ಬಾಲ್ಯವಿವಾಹ ನಿಷೇಧ ಕಾಯ್ದೆ-2006" ರನ್ನು ಅನುಷ್ಠಾನಕ್ಕೆ ತರಲಾಯಿತು. ಈ ಕಾಯ್ದೆಗೆ 2007ರಲ್ಲಿ ಕೇಂದ್ರ ನಿಯಮವನ್ನು ರೂಪಿಸಲಾಯಿತು. 2008ರಲ್ಲಿ ರಾಜ್ಯ ಸರ್ಕಾರವು ಹೊರತಂದಿದ್ದ ನಿಯಮಾವಳಿಗಳನ್ನು ನಿರಸನಗೊಳಿಸಿ 2014ರಲ್ಲಿ ಕರ್ನಾಟಕ ರಾಜ್ಯವು ತನ್ನ ನಿಯಮಾವಳಿಯನ್ನು ಹೊರಡಿಸಿತು. 2016ರಲ್ಲಿ ಕರ್ನಾಟಕ ರಾಜ್ಯ ಸರ್ಕಾರವು ಕೇಂದ್ರದ ಕಾನೂನಿಗೆ ಕೆಲವು ತಿದ್ದುಪಡಿ ತಂದು ಬಾಲ್ಯವಿವಾಹ ನಿಷೇಧ (ಕರ್ನಾಟಕ ತಿದ್ದುಪಡಿ) ಕಾಯ್ದೆ 2016ನ್ನು ಹೊರಡಿಸಿದ್ದು, ಇದು 03-03-2018ರಿಂದ ಜಾರಿಗೆ ಬಂದಿದೆ. ಅದರಂತೆ ಎಲ್ಲ ಬಾಲ್ಯವಿವಾಹಗಳು ಪ್ರಾರಂಭದಿಂದಲೇ ಅನೂರ್ಜಿತ ಮತ್ತು ಎಲ್ಲಿಯಾದರೂ ಬಾಲ್ಯವಿವಾಹಗಳಾಗುವ ಬಗ್ಗೆ ಮಾಹಿತಿ ದೊರೆತ ಕೂಡಲೇ ಸಂಬಂಧಿತ ಅಧಿಕಾರಿಗಳು ಕ್ರಮಕೈಗೊಳ್ಳಲು ಮುಂದಾಗಲೇಬೇಕು.

**ರಾಷ್ಟ್ರೀಯ ಕೌಟುಂಬಿಕ ಆರೋಗ್ಯ ಸಮೀಕ್ಷೆ (ಎನ್.ಎಫ್.ಹೆಚ್.ಎಸ್.) 2015-16 ಪ್ರಕಾರ ಬಾಲ್ಯವಿವಾಹದ ಪ್ರಮಾಣ (ಬಾಲಕ -ಬಾಲಕಿ) 30.7% ಇದೆ. ಗ್ರಾಮೀಣ ಪ್ರದೇಶ 34.9%, ಪಟ್ಟಣ ಪ್ರದೇಶ 24.9%, (ಪಟ್ಟಣದ ಕೇವಲ 11 ಜಿಲ್ಲೆಗಳಲ್ಲಿ ದತ್ತಾಂಶ ಅಂಕಿ ಅಂಶ ಲಭ್ಯ) ಒಟ್ಟಾಗಿ ಹೆಣ್ಣು ಮಕ್ಕಳ ಬಾಲ್ಯವಿವಾಹ 21.4%. ಬಾಲಕರದ್ದು 9.3%.**

**2019-20ರ ಎನ್.ಎಫ್.ಹೆಚ್.ಎಸ್. ಪ್ರಕಾರ ಸದರಿ ಪ್ರಮಾಣವು 21.4% ಇದೆ.**

ಈ ಎಲ್ಲಾ ಅಂಕಿ-ಅಂಶಗಳನ್ನು ಗಮನಿಸಿದಾಗ ಬಾಲ್ಯವಿವಾಹವು ಅಭಿವೃದ್ಧಿಗೆ ಮಾರಕ ಸಮಸ್ಯೆ ಎಂಬುದು ಅರಿಯಬೇಕಾದ ಸತ್ಯ.

ಮಕ್ಕಳಿಗೆ ಉತ್ತಮ ಆರೋಗ್ಯ, ಪೌಷ್ಠಿಕಾಂಶ, ಪೋಷಣೆ, ಶಿಕ್ಷಣ, ವಸತಿ, ರಕ್ಷಣೆ, ಮನೋಸಾಮಾಜಿಕ ಬೆಂಬಲ, ನಿಂದನೆ ಮತ್ತು ಶೋಷಣೆ ಮುಕ್ತ ವಾತಾವರಣ ಕಲ್ಪಿಸುವುದು ಮಕ್ಕಳ ಹಕ್ಕುಗಳ ಪ್ರಮುಖ ತತ್ವವಾಗಿರುತ್ತದೆ. ಬಾಲ್ಯವಿವಾಹವು ಈ ಎಲ್ಲಾ ಹಕ್ಕುಗಳನ್ನು ಉಲ್ಲಂಘಿಸುವುದಲ್ಲದೆ ಮಕ್ಕಳು ಬಾಲ್ಯಾವಸ್ಥೆಯಿಂದ ವಂಚಿತರಾಗುವಂತೆ ಮಾಡುತ್ತದೆ.

ಮಕ್ಕಳ ಹಕ್ಕುಗಳ ಒಡಂಬಡಿಕೆಯ ಪರಿಚ್ಛೇದ 28ರ ಪ್ರಕಾರ "ಶಿಕ್ಷಣ" ಮಗುವಿನ ಮೂಲಭೂತ ಹಕ್ಕು. ಮಕ್ಕಳು ಕನಿಷ್ಠ 18 ವರ್ಷದ ತನಕ "ಶಿಕ್ಷಣ" ಅಥವಾ ತನ್ನ ಕಲಿಕೆಯ ಹಕ್ಕಿನ ಹಾದಿಯಲ್ಲಿ ಇರಬೇಕು. ಪ್ರಮುಖ ಪರಿಚ್ಛೇದ 34ರ ಪ್ರಕಾರ 18 ವರ್ಷ ತನಕ ಯಾವುದೇ ಮಗು ಲೈಂಗಿಕ ದೌರ್ಜನ್ಯ, ಹಿಂಸೆ ಹಾಗೂ ಕಿರುಕುಳದ ಅನುಭವಕ್ಕೆ ಒಳಗಾಗಬಾರದು ಎಂದು ಹೇಳಿದೆ. ಲೈಂಗಿಕ ಜ್ಞಾನ ಅರಿವು, ಮಾಹಿತಿ ಮತ್ತು ಶಿಕ್ಷಣಕ್ಕಷ್ಟೇ ಸೀಮಿತವಾಗಿರಬೇಕು. ಆದ್ದರಿಂದ 18 ವರ್ಷದೊಳಗಿನ ಹೆಣ್ಣು ಮಕ್ಕಳಿಗೆ ಮದುವೆ ಮಾಡಿದ್ದೆ ಆದಲ್ಲಿ, ಅವಳ ಶಿಕ್ಷಣ, ಕಲಿಕೆ, ಸ್ವಾತಂತ್ರ್ಯದ

ಹಕ್ಕಿಗೆ ಭಂಗವುಂಟಾಗಿ, ಲೈಂಗಿಕ ಶೋಷಣೆ ಅಥವಾ ದೌರ್ಜನ್ಯಕ್ಕೆ ಬಲಿಯಾಗಬೇಕಾಗುತ್ತದೆ. ಬಾಲ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ-2015 ಸೆಕ್ಷನ್ 75ರ ಉದ್ದೇಶಕ್ಕಾಗಿ ಕೇಂದ್ರ ಸರ್ಕಾರದ 2016ರ ಮಾದರಿ ನಿಯಮಗಳ 55ರ ಅಡಿ ಬಾಲ್ಯವಿವಾಹವು ಮಗುವಿನ ಮೇಲಿನ ಕ್ರೌರ್ಯವೆಂದು ಪರಿಗಣಿಸಿದೆ. ಆದ್ದರಿಂದ ಅಂತಹ ಕುಟುಂಬಗಳು ಸಮಗ್ರ ಅಭಿವೃದ್ಧಿಯ ಭಾಗವಾಗಲು ಸಾಧ್ಯವಾಗುವುದಿಲ್ಲ. ಬಾಲ್ಯವಿವಾಹಕ್ಕೆ ಗುರಿಯಾಗುತ್ತಿರುವ ಕುಟುಂಬಗಳಿಂದ ದೇಶದ ಅಭಿವೃದ್ಧಿ ಮತ್ತು ಮಾನವ ಅಭಿವೃದ್ಧಿಗೆ ತಡೆಯಾಗುತ್ತಿದೆ. ಅವರನ್ನು ಅಭಿವೃದ್ಧಿಯ ಮೆಟ್ಟಿಲು ಹತ್ತಿಸಲು ಕಷ್ಟ ಸಾಧ್ಯ. ಆದ್ದರಿಂದ "ಬಾಲ್ಯವಿವಾಹ" ನಿರ್ಮೂಲನೆ, ಮಕ್ಕಳ ಸಂರಕ್ಷಣೆ, ಮಕ್ಕಳ ಹಕ್ಕು ಮತ್ತು ಮಾನವ ಅಭಿವೃದ್ಧಿ ಹಿನ್ನೆಲೆಯಲ್ಲಿ ಅತ್ಯಂತ ಪ್ರಮುಖ ಮತ್ತು ಅನಿವಾರ್ಯ.

## II. ಉದ್ದೇಶಗಳು:

ಬಾಲ್ಯವಿವಾಹವನ್ನು ಸಂಪೂರ್ಣವಾಗಿ ನಿಲ್ಲಿಸಲು ಹಾಗೂ ಕಾನೂನು, ನಿಯಮಗಳ ಮತ್ತು ಯೋಜನೆಗಳ ಕ್ರಮಬದ್ಧ ಅನುಷ್ಠಾನಕ್ಕಾಗಿ ಕಾರ್ಯವಿಧಾನ ಪ್ರಕ್ರಿಯೆಯ ಈ ಕೈಪಿಡಿಯು ಕಾನೂನು ಅನುಷ್ಠಾನಗಾರ ಇಲಾಖೆಗಳು, ಅಧಿಕಾರಿಗಳು, ತಜ್ಞರು, ಸರ್ಕಾರೇತರ ಸಂಘ-ಸಂಸ್ಥೆಗಳು, ನಾಗರಿಕ ಸಂಸ್ಥೆಗಳು, ಸಮುದಾಯ ಹಾಗೂ ವಿವಿಧ ರೀತಿಯ ಕ್ರಮ ನಿರ್ವಹಿಸುವವರಿಗೆ ಒಂದು "ಕಾರ್ಯಾಸ್ತ್ರ"ವಾಗಿದ್ದು. ಈ ಕೆಳಗಿನ ಉದ್ದೇಶಗಳನ್ನು ಹೊಂದಿದೆ.

1

ಗ್ರಾಮ ಮಟ್ಟದಿಂದ ರಾಜ್ಯಮಟ್ಟದವರೆಗೆ "ಬಾಲ್ಯವಿವಾಹ"ಗಳನ್ನು ಸಂಪೂರ್ಣ ತಡೆಗಟ್ಟಲು ಸೂಕ್ತ ಪರಿಣಾಮಕಾರಿ ಕ್ರಿಯಾ ಯೋಜನೆಯನ್ನು ತಯಾರಿಸುವುದು.

2

ಬಾಲ್ಯವಿವಾಹಗಳನ್ನು ತಡೆಗಟ್ಟಲು ಕ್ರಮಬದ್ಧ ಪರಿಣಾಮಕಾರಿ ಶಿಕ್ಷಣ, ಜಾಗೃತಿ ಮೂಡಿಸಲು ಸೂಕ್ತ ವ್ಯವಸ್ಥೆ ಮತ್ತು ತಾಂತ್ರಿಕ ಕ್ರಮಗಳನ್ನು ಜಾರಿಮಾಡುವುದು.

3

ಬಾಲ್ಯವಿವಾಹಗಳನ್ನು ಗುರುತಿಸುವುದು, ಕಂಡುಬಂದರೆ ತಕ್ಷಣ ತಡೆಗಟ್ಟುವುದು, ಮಕ್ಕಳ ರಕ್ಷಣೆ, ತಪ್ಪಿತಸ್ಥರ ಮೇಲೆ ಕಾನೂನು ಕ್ರಮ ಹಾಗೂ ಮಕ್ಕಳ ಪುನರ್ವಸತಿ ಹಾಗೂ ಅನುಸರಣಾ ಕ್ರಮಗಳನ್ನು ಕೈಗೊಳ್ಳಲು "ಸೂಕ್ತ ಕಾರ್ಯವಿಧಾನ" ಗಳನ್ನು ತಯಾರು ಮಾಡಿ, ರಾಜ್ಯದಾದ್ಯಂತ ಪ್ರಚಾರ ಮಾಡಿ ಅನುಷ್ಠಾನಕ್ಕೆ ತರುವುದು.

## III. ಈ ಕ್ರಮಬದ್ಧ ಕಾರ್ಯವಿಧಾನ ಪ್ರಕ್ರಿಯೆಗಳು ಯಾಕೆ ಬೇಕು?

1. ಬಾಲ್ಯವಿವಾಹ ನಿಷೇಧ ಕಾಯ್ದೆ 2006 ಹಾಗೂ ಅದರ ನಿಯಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು.
2. "ಬಾಲ್ಯವಿವಾಹ"ಗಳನ್ನು ತಡೆಗಟ್ಟಲು ಇರುವ ಇತರ ಹಲವಾರು ಕಾನೂನು, ನೀತಿ, ನಿಯಮ, ಯೋಜನೆ, ಆದೇಶ, ಸುತ್ತೋಲೆ ಸೇವೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು.
3. ಬಾಲ್ಯವಿವಾಹ ತಡೆಗಟ್ಟಲು ಮತ್ತು ಬಾಲ್ಯವಿವಾಹ ನಿಷೇಧ ಕಾಯ್ದೆಯ ಅನುಷ್ಠಾನಕ್ಕಾಗಿ ಸಂಬಂಧಿಸಿದವರು, ಸಂಘಟಿತರಾಗಿ ಸಹಕಾರದಿಂದ ಕಾರ್ಯನಿರ್ವಹಿಸಲು.
4. ಮಕ್ಕಳ ಹಕ್ಕುಗಳನ್ನು ದೊರಕಿಸಿ ಕೊಡಲು, ಮುಂದೆ ಸ್ವತಂತ್ರ ಜೀವನ ನಡೆಸಲು ಸದೃಢವಾಗುವಂತೆ ಮಾಡಲು.
5. ಸಮುದಾಯ, ಸಂಘಟನೆಗಳು, ಜನಪ್ರತಿನಿಧಿಗಳು, ಪೋಷಕರು ಮತ್ತು ಮಕ್ಕಳು ಬಾಲ್ಯವಿವಾಹಗಳನ್ನು ತಡೆಗಟ್ಟಲು ಎಲ್ಲಾ ಸರ್ಕಾರಿ ಪಾಲುದಾರರೊಂದಿಗೆ ಜೊತೆಗೂಡಿ ರಾಜ್ಯವನ್ನು ಬಾಲ್ಯವಿವಾಹ ಮುಕ್ತ ಮಾಡುವ ಆಯಾಮಗಳನ್ನು ಈಡೇರಿಸಲು.
6. ಬಾಲ್ಯ ವಿವಾಹ ನಿಷೇಧ ಅಧಿಕಾರಿಗಳು ಬಾಲ್ಯವಿವಾಹ ನಡೆಯುವ ಬಗ್ಗೆ ಮಾಹಿತಿ ಸಿಕ್ಕಿದಾಗ, ನಡೆಯುತ್ತಿರುವಾಗ ಹಾಗೂ ನಡೆದ ಮೇಲೆ ಕೈಗೊಳ್ಳಬೇಕಾದ ಕ್ರಮ, ಮಕ್ಕಳ ರಕ್ಷಣೆ, ಪುನರ್ವಸತಿ, ಅನುಸರಣೆಯ ಬಗ್ಗೆ ವಹಿಸಬೇಕಾದ ಕ್ರಮಗಳ ಬಗ್ಗೆ ಅರಿತುಕೊಳ್ಳಲು.

## IV. ಬಾಲ್ಯವಿವಾಹವೆಂದರೇನು?


ಬಾಲ್ಯ ವಿವಾಹ ನಿಷೇಧ ಕಾಯ್ದೆ 2006ರ ಪ್ರಕಾರ 21 ವರ್ಷದೊಳಗಿನ ಗಂಡು ಹಾಗೂ 18 ವರ್ಷದೊಳಗಿನ ಹೆಣ್ಣಿನ ನಡುವೆ ನಡೆಯುವ ಮದುವೆ. ಅಥವಾ ಹೆಣ್ಣು ಅಥವಾ ಗಂಡಿನಲ್ಲಿ ಒಬ್ಬರ ವಯಸ್ಸು ನಿಗದಿತ ವಯಸ್ಸಿನೊಳಗಿದ್ದರೆ ಇಂಥವರ ನಡುವೆ ನಡೆಯುವ ಮದುವೆಯನ್ನು ಬಾಲ್ಯವಿವಾಹ ಎಂದು ಪರಿಗಣಿಸಲಾಗುವುದು. (ಸೆಕ್ಷನ್ 2.ಎ ಮತ್ತು 2.ಬಿ)

## V. ಬಾಲ್ಯವಿವಾಹ ನಿಷೇಧ ಕಾಯ್ದೆ-2006 ಕೆಲವು ಪ್ರಮುಖ ಪರಿಚ್ಛೇದಗಳು:

ಬಾಲ್ಯವಿವಾಹ ನಿಷೇಧ ಕಾಯ್ದೆ - 2006 (2007ರ ಕೇಂದ್ರ ಅಧಿನಿಯಮ ಸಂಖ್ಯೆ 6) (10 ಜನವರಿ 2007) ಇದನ್ನು ಭಾರತ ಗಣರಾಜ್ಯದ 57ನೇ ವರ್ಷದಲ್ಲಿ ಸಂಸತ್‌ನಲ್ಲಿ ಕಾಯ್ದೆಯಾಗಿ ರಚಿಸಲಾಗಿದೆ.

ಬಾಲ್ಯವಿವಾಹ ನಿಷೇಧಕಾಯ್ದೆ, 2006(ಕರ್ನಾಟಕ ತಿದ್ದುಪಡಿ ಕಾಯ್ದೆ 2016ರ)ರನ್ವಯ ಬಾಲ್ಯವಿವಾಹ ನಡೆಸಿದ ಈ ಕೆಳಗಿನವರು

**ಕನಿಷ್ಠ ಒಂದು ವರ್ಷಕ್ಕೆ ಕಡಿಮೆ ಇಲ್ಲದ ಮತ್ತು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಕಠಿಣ ಕಾರಾಗೃಹ ಶಿಕ್ಷೆ ಅಥವಾ ಒಂದು ಲಕ್ಷ ರೂಪಾಯಿ ದಂಡ ಅಥವಾ ಈ ಎರಡಕ್ಕೂ ಅರ್ಹರು.**




1. ಮಕ್ಕಳನ್ನು ಮದುವೆಯಾಗುವ ಯಾವುದೇ ವಯಸ್ಕರು (ಸೆಕ್ಷನ್–9)
2. ಬಾಲ್ಯವಿವಾಹ ಏರ್ಪಡಿಸಿದ/ನಿರ್ದೇಶಿಸಿದ/ನೆರವೇರಿಸಿದ/ಕುಮಕ್ಕು ನೀಡಿದ ಯಾವುದೇ ವ್ಯಕ್ತಿ. (ಸೆಕ್ಷನ್–10)
3. ಮಗುವಿನ ಹೊಣೆ ಹೊತ್ತವರು, ಹೆತ್ತವರು, ಅಥವಾ ಪೋಷಕರು\ಯಾವುದೇ ವ್ಯಕ್ತಿ ಕಾನೂನು ಬದ್ಧವಾಗಿಯೋ/ಬಾಹಿರವಾಗಿಯೋ ಮಗುವಿನ ಹೊಣೆ ಹೊಂದಿರುವ ಸಂಸ್ಥೆ ಅಥವಾ ಜನರ ಸಂಘಟನೆ, ನಿರ್ಲಕ್ಷತೆಯಿಂದ ಬಾಲ್ಯ ವಿವಾಹವನ್ನು ತಡೆಯಲು ವಿಫಲರಾದವರು, ಬಾಲ್ಯ ವಿವಾಹಕ್ಕೆ ಹಾಜರಾದವರು, ಭಾಗವಹಿಸಿದವರು, ಉತ್ತೇಜಿಸಿದವರು (ಸೆಕ್ಷನ್–11)
4. ಕಾಯ್ದೆಯಡಿ ನೀಡಿದ ತಡೆಯಾಜ್ಞೆಯನ್ನು ಉಲಂಘಿಸಿದ ವ್ಯಕ್ತಿ.(ಸೆಕ್ಷನ್–13(10)
5. ಈ ಕಾಯ್ದೆಯನ್ನು ಉಲ್ಲಂಘಿಸಿ ಮಾಡುವ ಮದುವೆಗೆ ತಡೆಯಾಜ್ಞೆಯನ್ನು ನ್ಯಾಯಾಲಯದಿಂದ ಹೊರಡಿಸಬಹುದು. (ಸೆಕ್ಷನ್ 13)

❖ **ಅಪರಾಧಗಳು ಸಂಜ್ಞೇಯ ಮತ್ತು ಜಾಮೀನು ರಹಿತ:**

ಈ ಕಾಯ್ದೆಯಡಿ ನಡೆದ ಅಪರಾಧಗಳು ಸಂಜ್ಞೇಯ ಮತ್ತು ಜಾಮೀನು ರಹಿತವಾಗಿರುತ್ತವೆ. (ಸೆಕ್ಷನ್ 15)

❖ **ಬಾಲ್ಯವಿವಾಹದಿಂದ ಜನಿಸಿದ ಮಗುವಿನ ಸ್ಥಾನಮಾನ:**

ಸೆಕ್ಷನ್ 3ರ ಅಡಿಯಲ್ಲಿ ಬಾಲ್ಯವಿವಾಹವನ್ನು ಅಸಿಂಧುವೆಂದು ಆದೇಶ ಹೊರಡಿಸಿದ್ದರೂ ಸಹ ಇಂತಹ ಬಾಲ್ಯವಿವಾಹಗಳಿಂದ ಈ ಕಾಯ್ದೆಯ ಪ್ರಾರಂಭಕ್ಕೆ ಮೊದಲು ಅಥವಾ ನಂತರ ಜನಿಸಿದ ಅಥವಾ ಗರ್ಭದಲ್ಲಿರುವ ಮಕ್ಕಳು ಎಲ್ಲಾ ಉದ್ದೇಶಕ್ಕೂ ಕಾನೂನುಬದ್ಧ ಮಕ್ಕಳೆಂದು ಪರಿಗಣಿಸಲಾಗುವುದು. (ಸೆಕ್ಷನ್–6) ಹಾಗೂ ಸೆಕ್ಷನ್ 5 (1)ರ ಪ್ರಕಾರ ಜಿಲ್ಲಾ ನ್ಯಾಯಾಲಯವು ಮಕ್ಕಳ ಅಭಿರಕ್ಷೆಗಾಗಿ ಸೂಕ್ತ ಆದೇಶವನ್ನು ಮಾಡತಕ್ಕದ್ದು.

❖ **ದೂರು ಸಲ್ಲಿಸಬಹುದಾದ ನ್ಯಾಯಾಲಯ:**

1. ಬಾಲಕಿ ಮದುವೆಯಾದ ಸ್ಥಳದಲ್ಲಿ.
2. ಬಾಲಕಿ ಮದುವೆಗೆ ಮೊದಲು ವಾಸವಾಗಿದ್ದ ಸ್ಥಳದಲ್ಲಿ.
3. ಆಪಾದಿತರು ವಾಸಿಸುವ ಸ್ಥಳದಲ್ಲಿ.
4. ಅರ್ಜಿಯನ್ನು ನ್ಯಾಯಾಲಯದಲ್ಲಿ ಸಲ್ಲಿಸುವ ಸಮಯದಲ್ಲಿ ವಾಸಿಸುತ್ತಿರುವ ಸ್ಥಳದಲ್ಲಿರುವ ಜಿಲ್ಲಾ ನ್ಯಾಯಾಲಯ

❖ **ಬಾಲ್ಯ ವಿವಾಹವನ್ನು ನಿಷೇಧಿಸಲು ತಡೆಯಾಜ್ಞೆ ನೀಡಲು ನ್ಯಾಯಾಲಯದ ಅಧಿಕಾರ.**

ಬಾಲ್ಯವಿವಾಹ ನಿಷೇಧ ಅಧಿಕಾರಿ ಯಾವುದಾದರೂ ವ್ಯಕ್ತಿಯ ಮೂಲಕ, ಸಂಸ್ಥೆಯ ಮೂಲಕ ಬಾಲ್ಯ ವಿವಾಹ ನಡೆಯುತ್ತಿರುವುದು ತಿಳಿದಾಗ ಮ್ಯಾಜಿಸ್ಟ್ರೇಟರು ಅಥವಾ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟರಿಗೆ ಈ ಕಾಯ್ದೆಯ ವಿರುದ್ಧವಾಗಿ ಬಾಲ್ಯ ವಿವಾಹ ನಡೆಯುತ್ತಿದೆ ಎಂದು ಮನವರಿಕೆಯಾದರೆ ಅಂತಹ ಬಾಲ್ಯ ವಿವಾಹವನ್ನು ತಡೆಗಟ್ಟಲು ಸಂಘಟನೆ/ವ್ಯಕ್ತಿಗೆ ತಡೆಯಾಜ್ಞೆಯನ್ನು ನೀಡತಕ್ಕದ್ದು. (ಸೆಕ್ಷನ್ 13.1)

❖ **ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.**

ಬಾಲ್ಯವಿವಾಹ ನಿಷೇಧ ಅಧಿಕಾರಿಯು ಉತ್ತಮ ಉದ್ದೇಶದಿಂದ ಮಾಡಿದ ಅಥವಾ ಈ ಕಾಯ್ದೆಯ ಅಥವಾ ಇದರಡಿಯ ಯಾವುದೇ ನಿಯಮ ಅಥವಾ ಆದೇಶದಡಿ ಯಾವುದೇ ಕ್ರಮಗಳನ್ನು ಕೈಗೊಳ್ಳುವ ನಿರ್ಧಾರ ಮಾಡಿದ್ದರೆ, ಅವರ ವಿರುದ್ಧ ಯಾವುದೇ ದಾವೆ, ಕಾನೂನು ಕ್ರಮ, ಅಥವಾ ಯಾವುದೇ ಕಾನೂನು ಪ್ರಕ್ರಿಯೆ ಹೂಡುವಂತಿಲ್ಲ. (ಸೆಕ್ಷನ್–18)

## IV. ಬಾಲ್ಯ ವಿವಾಹ ನಿಷೇಧ (ಕರ್ನಾಟಕ ತಿದ್ದುಪಡಿ) ಅಧಿನಿಯಮ-2016ರ ಪ್ರಮುಖ ಅಂಶಗಳು.

ಬಾಲ್ಯವಿವಾಹಗಳನ್ನು ತಡೆಗಟ್ಟುವ ಉದ್ದೇಶದಿಂದ ಕರ್ನಾಟಕ ಸರ್ಕಾರ 2016ರಲ್ಲಿ ಈ ಕಾಯಿದೆಗೆ ಪ್ರಮುಖವಾದ ತಿದ್ದುಪಡಿಗಳನ್ನು ತಂದಿದೆ. ಇಡೀ ರಾಷ್ಟ್ರದಲ್ಲೇ ಇದು ಅತ್ಯಂತ ಪ್ರಗತಿಪರ ಎಂದು ಸರ್ವೋಚ್ಚ ನ್ಯಾಯಲಯ ತನ್ನ ಅಕ್ಟೋಬರ್ 2017ರ ತೀರ್ಪೊಂದರಲ್ಲಿ ಉಲ್ಲೇಖಿಸಿದೆ.

1. ಈ ಕಾಯ್ದೆಯು ದಿನಾಂಕ 03.03.2018 ರಿಂದ ಕರ್ನಾಟಕದಲ್ಲಿ ಜಾರಿಗೆ ಬಂದಿರುತ್ತದೆ.
2. ಕರ್ನಾಟಕದಲ್ಲಿ ಈ ಅಧಿನಿಯಮ ಜಾರಿಗೆ ಬಂದ ದಿನಾಂಕದಿಂದ ಅಂದರೆ ದಿನಾಂಕ 03.03.2018 ರಿಂದ ನೆರವೇರಿಸಲಾದ ಪ್ರತಿಯೊಂದು ಬಾಲ್ಯ ವಿವಾಹವು ಪ್ರಾರಂಭದಿಂದಲೇ ಅನೂರ್ಜಿತವಾಗತಕ್ಕದ್ದು.
3. ಈ ಕಾಯ್ದೆಯ ಪ್ರಕಾರ "ಪ್ರತಿಯೊಬ್ಬ ಪೊಲೀಸ್ ಅಧಿಕಾರಿಯು ತನ್ನ ಅಧಿಕಾರ ವ್ಯಾಪ್ತಿಯಲ್ಲಿ ನಡೆದ ಅಪರಾಧದ ಸಂಜ್ಞೇಯತೆಯನ್ನು ಗಮನಿಸಿ ತಾನಾಗಿಯೇ ಕ್ರಮ ತೆಗೆದುಕೊಳ್ಳತಕ್ಕದ್ದು."(ಸು-ಮೋಟೋ)
4. ಈ ಕಾಯ್ದೆಯಡಿ ಮಹಿಳೆಯರೂ ಕೂಡ ಜೈಲು ಶಿಕ್ಷೆಗೆ ಅರ್ಹರಾಗಿರುತ್ತಾರೆ.
5. ಈ ತಿದ್ದುಪಡಿ ಪ್ರಕಾರ ಸೆಕ್ಷನ್ 9 ಮತ್ತು 13 ರ ಪ್ರಕಾರ ತಪ್ಪಿತಸ್ಥ ವಯಸ್ಕ ಪತಿ, ತಡೆಯಾಜ್ಞೆ ಉಲ್ಲಂಘಿಸಿದವರು ಕನಿಷ್ಟ ಒಂದು ವರ್ಷ ಆದರೆ ಎರಡು ವರ್ಷಗಳ ವರೆಗೆ ವಿಸ್ತರಿಸಬಹುದಾದ ಕಠಿಣ ಜೈಲು ಶಿಕ್ಷೆ ಅಥವಾ ಒಂದು ಲಕ್ಷ ರೂಪಾಯಿಗಳವರೆಗೆ ಜುಲ್ಮಾನೆ ಅಥವಾ ಅವರೆಡರಿಂದಲೂ ಶಿಕ್ಷೆಗೆ ಅರ್ಹರು.
6. ಈ ತಿದ್ದುಪಡಿ ಪ್ರಕಾರ ಸೆಕ್ಷನ್ 10 & 11ರ ಪ್ರಕಾರ ಬಾಲ್ಯವಿವಾಹ ನಡೆಸಿದ ಮತ್ತು ಉತ್ತೇಜಿಸಿದ ತಪ್ಪಿತಸ್ಥರು ಕನಿಷ್ಠ 1 ವರ್ಷದಿಂದ ಗರಿಷ್ಠ 2 ವರ್ಷಗಳವರೆಗೆ ವಿಸ್ತರಿಸಬಹುದಾದ ಜೈಲು ಶಿಕ್ಷೆ ಮತ್ತು 1 ಲಕ್ಷ ರೂ ವರೆಗೆ ವಿಸ್ತರಿಸಬಹುದಾದ ಜುಲ್ಮಾನೆಗೆ ಗುರಿಯಾಗುವರು.

❖ **ಸರ್ವೋಚ್ಛ ನ್ಯಾಯಾಲಯದ ತೀರ್ಪು ದಿನಾಂಕ 11-10-2017**

1. ಭಾರತೀಯ ದಂಡ ಸಂಹಿತೆಯ ಪರಿಚ್ಛೇದ 375 ಎಕ್ಸೆಪ್ಷನ್ (Exception) 2 ರ ಪ್ರಕಾರ ಇದುವರೆಗೆ ಪತಿಯು 15 ವರ್ಷದೊಳಗಿನ ಪತ್ನಿಯ ಜೊತೆಗೆ ಹೊಂದಿರುವ ಲೈಂಗಿಕ ಸಂಪರ್ಕವನ್ನು ಅತ್ಯಾಚಾರ ಎಂದು ಪರಿಗಣಿಸಲಾಗಿತ್ತು.

2. ದಿನಾಂಕ:11-10-2017ರ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಪ್ರಕಾರ ಈ ವಯಸ್ಸಿನ ಮಿತಿಯನ್ನು 18 ವರ್ಷಕ್ಕೆ ಹೆಚ್ಚಿಸಲಾಗಿದೆ ಹಾಗೂ ಇದಕ್ಕಾಗಿ ಪತಿಗೆ ಜೈಲು ಮತ್ತು ದಂಡದ ಶಿಕ್ಷೆ ಇರುತ್ತದೆ.
3. ಈ ತೀರ್ಪು ಆದ ದಿನಾಂಕದಿಂದ ಇದು ಜಾರಿಯಲ್ಲಿ ಬಂದಿದೆ.
4. ಆದ್ದರಿಂದ ಈ ತೀರ್ಪನ್ನು ಹಾಗೂ ಪೋಕ್ಸೋ ಕಾಯ್ದೆಯ ಸಂಬಂಧಿಸಿದ ಪರಿಚ್ಛೇದಗಳನ್ನೂ (3,7,ಮತ್ತು 16ರಡಿ) ಕೂಡ ಬಾಲ್ಯವಿವಾಹದ ಕುರಿತು ಪೊಲೀಸ್ ಠಾಣೆಯಲ್ಲಿ ಎಫ್.ಐ.ಆರ್. ದಾಖಲು ಮಾಡುವಾಗ ಉಪಯೋಗಿಸಬಹುದಾಗಿದೆ.

## VII. ಬಾಲ್ಯವಿವಾಹ ನಿಷೇಧ ಅಧಿಕಾರಿಗಳು:

❖ ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟಿಸುವ ಮೂಲಕ ರಾಜ್ಯ ಸರ್ಕಾರಗಳು ಆ ಪ್ರಕಟಣೆಯಲ್ಲಿ ನಿರ್ದಿಷ್ಟಪಡಿಸಿ ಇಡೀ ರಾಜ್ಯಕ್ಕೆ ಅಥವಾ ಅದು ಸೂಚಿಸುವ ನಿರ್ದಿಷ್ಟ ಪ್ರದೇಶಗಳಿಗೆ/ಭಾಗಗಳಿಗೆ ಅಧಿಕಾರಿ ಅಥವಾ ಅಧಿಕಾರಿಗಳನ್ನು ಬಾಲ್ಯವಿವಾಹ ನಿಷೇಧಾಧಿಕಾರಿಗಳನ್ನಾಗಿ ಗುರುತಿಸತಕ್ಕದ್ದು. ಅದರಂತೆ ರಾಜ್ಯ ಸರ್ಕಾರವು ವಿವಿಧ ಇಲಾಖೆಗಳ ವಿವಿಧ ಹಂತಗಳ ಅಧಿಕಾರಿ / ಸಿಬ್ಬಂದಿಗಳನ್ನು ಬಾಲ್ಯ ವಿವಾಹ ನಿಷೇಧಾಧಿಕಾರಿಗಳೆಂದು ಗುರುತಿಸಿದೆ. (ಸೆಕ್ಷನ್ -16 (1))

**ಬಾಲ್ಯವಿವಾಹ ನಿಷೇಧ ಅಧಿಕಾರಿಗಳ ಪಟ್ಟಿ.**

| | |
|---|---|
| ಶಾಲಾ ಮುಖ್ಯೋಪಾಧ್ಯಾಯರು, ಶಿಕ್ಷಣ ಇಲಾಖೆ | ಗ್ರಾಮ ವ್ಯಾಪ್ತಿ |
| ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | ಗ್ರಾಮ ಪಂಚಾಯಿತಿ ವ್ಯಾಪ್ತಿ |
| ಗ್ರಾಮ ಲೆಕ್ಕಿಗರು, ಕಂದಾಯ ಇಲಾಖೆ | ಸಾಜಾ ವ್ಯಾಪ್ತಿ (ಕಂದಾಯ ಗ್ರಾಮ) |
| ಕಂದಾಯ ನಿರೀಕ್ಷಕರು, ಕಂದಾಯ ಇಲಾಖೆ | ಕಂದಾಯ ಹೋಬಳಿ ವ್ಯಾಪ್ತಿ |
| ಪೊಲೀಸ್ ಸಬ್ ಇನ್‌ಸ್ಪೆಕ್ಟರ್, ಪೊಲೀಸ್ ಇಲಾಖೆ | ಠಾಣಾ ವ್ಯಾಪ್ತಿ |
| ಮೇಲ್ವಿಚಾರಕಿಯರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ | ಐ.ಸಿ.ಡಿ.ಎಸ್. ವಲಯ ವ್ಯಾಪ್ತಿ |
| ಶಾಲಾ ಮುಖ್ಯೋಪಾಧ್ಯಾಯರು, ಶಿಕ್ಷಣ ಇಲಾಖೆ<br>ಕಂದಾಯ ನಿರೀಕ್ಷಕರು, ಕಂದಾಯ ಇಲಾಖೆ<br>ಆರೋಗ್ಯ ನಿರೀಕ್ಷಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ | ಮಹಾನಗರ ಪಾಲಿಕೆ/ ನಗರಸಭೆ/ಪುರಸಭೆ/ ಪಟ್ಟಣ ಪಂಚಾಯಿತಿ ವ್ಯಾಪ್ತಿ |
| ಹಿರಿಯ ಕಾರ್ಮಿಕ ನಿರೀಕ್ಷಕರು/ಕಾರ್ಮಿಕ ನಿರೀಕ್ಷಕರು, ಕಾರ್ಮಿಕ ಇಲಾಖೆ | |
| ಪ್ರದೇಶ ವ್ಯಾಪ್ತಿಯ ಪೊಲೀಸ್ ಇನ್‌ಸ್ಪೆಕ್ಟರ್, ಪೊಲೀಸ್ ಇಲಾಖೆ<br>ಎಲ್ಲಾ ಕಂದಾಯ ಅಧಿಕಾರಿಗಳು, ಮಹಾನಗರ ಪಾಲಿಕೆ/ನಗರಸಭೆ/ ಪುರಸಭೆ/ಪಟ್ಟಣ ಪಂಚಾಯಿತಿ | |

| | |
|---|---|
| ತಹಶೀಲ್ದಾರರು | ತಾಲ್ಲೂಕು ವ್ಯಾಪ್ತಿ |
| ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | |
| ತಾಲ್ಲೂಕು ವೈದ್ಯಾಧಿಕಾರಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ | |
| ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿ, ಸಮಾಜ ಕಲ್ಯಾಣ ಇಲಾಖೆ<br>ಕಾರ್ಮಿಕ ನಿರೀಕ್ಷಕರು, ಕಾರ್ಮಿಕ ಇಲಾಖೆ | |
| ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ | |
| ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ | |
| ಸಂರಕ್ಷಣಾಧಿಕಾರಿಗಳು,(ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆ)<br>ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ | |
| ಸರ್ಕಲ್ ಇನ್‌ಸ್ಪೆಕ್ಟರ್, ಪೊಲೀಸ್ ಇಲಾಖೆ.<br>ವಿಸ್ತರಣಾಧಿಕಾರಿ, ಹಿಂದುಳಿದ ವರ್ಗಗಳ ಅಭಿವೃದ್ಧಿ ಇಲಾಖೆ | |
| ಜಿಲ್ಲಾಧಿಕಾರಿಗಳು,<br>ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು | ಜಿಲ್ಲಾ ವ್ಯಾಪ್ತಿ |
| ಹಿರಿಯ ಮಕ್ಕಳ ಕಲ್ಯಾಣಾಧಿಕಾರಿ, ಸ್ಪೆಷಲ್ ಜುವೆನೈಲ್ ಪೊಲೀಸ್ ಯೂನಿಟ್, ಒಳಾಡಳಿತ ಇಲಾಖೆ | |
| ಮುಖ್ಯ ಕಾರ್ಯ ನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯಿತಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | |
| ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ. | |
| ಜಿಲ್ಲಾ ಆರೋಗ್ಯಾಧಿಕಾರಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ | |
| ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ, ಸಮಾಜ ಕಲ್ಯಾಣ ಇಲಾಖೆ | |
| ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಅಭಿವೃದ್ಧಿ ಇಲಾಖೆ | |
| ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ | |
| ನಿರೂಪಣಾಧಿಕಾರಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ | |
| ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ, ಐಸಿಪಿಎಸ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ | |
| ಐಟಿಡಿಪಿ–ಪ್ರಾಜೆಕ್ಟ್ ಡೆವೆಲಪ್‌ಮೆಂಟ್ ಆಫೀಸರ್, ಟ್ರೈಬಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್ | |
| ಜಿಲ್ಲಾ ಕಾರ್ಮಿಕಾಧಿಕಾರಿಗಳು, ಕಾರ್ಮಿಕ ಇಲಾಖೆ | |

| | |
|---|---|
| ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ | ರಾಜ್ಯ ವ್ಯಾಪ್ತಿ |
| ಯೋಜನಾ ನಿರ್ದೇಶಕರು, ಐಸಿಪಿಎಸ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ | |
| ಡೈರೆಕ್ಟರ್ ಜನರಲ್ ಆಫ್ ಪೊಲೀಸ್ | |
| ಇನ್‌ಸ್ಪೆಕ್ಟರ್ ಜನರಲ್ ಆಫ್ ಪೊಲೀಸ್ (ತರಬೇತಿ), ಬೆಂಗಳೂರು | |
| ಸಂಬಂಧಿಸಿದ ರೇಂಜ್‌ನ ಐ.ಜಿ.ಪಿ. (I.G.P. of the Concerned Range) | |
| ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ | |
| ರಾಜ್ಯ ಯೋಜನಾ ನಿರ್ದೇಶಕರು, ಸರ್ವಶಿಕ್ಷಣ ಅಭಿಯಾನ | |
| ಸರ್ಕಾರದ ಕಾರ್ಯದರ್ಶಿಗಳು, ಕಂದಾಯ ಇಲಾಖೆ | |
| ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ | |
| ಆಯುಕ್ತರು, ಕಾರ್ಮಿಕ ಇಲಾಖೆ | |
| ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ | |
| ಆಯುಕ್ತರು, ಹಿಂದುಳಿದ ವರ್ಗಗಳ ಅಭಿವೃದ್ಧಿ ಇಲಾಖೆ | |
| ನಿರ್ದೇಶಕರು (ಪಂಚಾಯತ್ ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | |
| ನಿರ್ದೇಶಕರು, ಟ್ರೈಬಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್ | |

❖ ಬಾಲ್ಯವಿವಾಹ ನಿಷೇಧಾಧಿಕಾರಿಗಳನ್ನು ಭಾರತ ದಂಡ ಸಂಹಿತೆ (1860 ರ 45) ರ ಕಲಂ 21 ರ ಅರ್ಥ ವ್ಯಾಪ್ತಿಯೊಳಗೆ ಸಾರ್ವಜನಿಕ ಸೇವಕರೆಂದು ಭಾವಿಸತಕ್ಕದ್ದು. (ಸೆಕ್ಷನ್ 17)

## VIII. ಬಾಲ್ಯ ವಿವಾಹ ನಿಷೇಧ ಕಾಯ್ದೆ ಮತ್ತು ನಿಯಮಗಳ ಪ್ರಕಾರ ಬಾಲ್ಯವಿವಾಹ ನಿಷೇಧ ಅಧಿಕಾರಿಗಳ ಕರ್ತವ್ಯಗಳು

1. ಬಾಲ್ಯ ವಿವಾಹ ನಡೆಯುತ್ತಿರುವ ಬಗ್ಗೆ ಮಗುವನ್ನು ಒಳಗೊಂಡಂತೆ ಯಾವುದೇ ವ್ಯಕ್ತಿ/ಸ್ವಯಂ ಸೇವಾ ಸಂಸ್ಥೆಗಳು/ಮಾಧ್ಯಮಗಳು ಮಾಹಿತಿ/ದೂರು ನೀಡಿದಾಗ ಪರಿಗಣಿಸಿ ಕ್ರಮ ಕೈಗೊಳ್ಳುವುದು.

2. ಬಾಲ್ಯ ವಿವಾಹವನ್ನು ತಡೆಯಲು ಎಲ್ಲಾ ಸೂಕ್ತ ಕ್ರಮಗಳನ್ನು ಜರುಗಿಸುವುದು.

3. ಬಾಲ್ಯ ವಿವಾಹವನ್ನು ಜರುಗಿಸಿರುವ/ಜರುಗಿಸುವ ಬಗ್ಗೆ ಸಾಕ್ಷಿಗಳನ್ನು ಸಂಗ್ರಹಿಸುವುದು.

4. ಬಾಲ್ಯ ವಿವಾಹಗಳನ್ನು ಶಾಸ್ತ್ರೋಕ್ತವಾಗಿ ನೆರವೇರಿಸುವುದಕ್ಕೆ ಉತ್ತೇಜಿಸುವುದರಲ್ಲಿ, ಸಹಾಯ ಮಾಡುವುದರಲ್ಲಿ, ನೆರವು ನೀಡುವುದರಲ್ಲಿ ಅಥವಾ ಅನುಮತಿಸುವುದರಲ್ಲಿ ತೊಡಗಬಾರದೆಂದು ಪ್ರತ್ಯೇಕ ಪ್ರಕರಣಗಳಲ್ಲಿ ಅಥವಾ ಸ್ಥಳೀಯ ನಿವಾಸಿಗಳಿಗೆ ಸಾಮಾನ್ಯವಾಗಿ ಸಲಹೆ ನೀಡುವುದು.

5. ಬಾಲ್ಯ ವಿವಾಹದ ದುಷ್ಪರಿಣಾಮಗಳು ಹಾಗೂ ಕಾಯ್ದೆಯ ಬಗ್ಗೆ ಸಮುದಾಯದಲ್ಲಿ ಜಾಗೃತಿ ಮೂಡಿಸುವುದು.

6. ರಾಜ್ಯ ಸರ್ಕಾರವು ತಿಳಿಸುವ ನಿಯತಕಾಲಿಕ ಅಂಕಿ ಅಂಶಗಳನ್ನು ಮತ್ತು ವಿವರಗಳನ್ನು ಒದಗಿಸುವುದು.

7. ರಾಜ್ಯ ಸರ್ಕಾರವು ಆತನಿಗೆ ವಹಿಸಬಹುದಾದಂತಹ ಇತರ ಪ್ರಕಾರ್ಯಗಳನ್ನು ಮತ್ತು ಕರ್ತವ್ಯಗಳನ್ನು ನಿರ್ವಹಿಸುವುದು ಆತನ ಕರ್ತವ್ಯವಾಗಿರತಕ್ಕದ್ದು.

8. ಬಾಲ್ಯವಿವಾಹ ನಿಷೇಧ ಅಧಿಕಾರಿಯು, ಅಧಿನಿಯಮವನ್ನು ಜಾರಿಗೆ ತರುವುದಕ್ಕೆ ಸಂಬಂಧಿಸಿದಂತೆ ಮಗುವು ಅಥವಾ ಅರ್ಜಿದಾರನಿಗೆ ಸೂಕ್ತ ಕಾನೂನು ಸೇವೆ ಪಡೆಯಲು ಸಹಾಯ ಮಾಡಬೇಕು.

9. ಬಾಲ್ಯ ವಿವಾಹ ತಡೆದ ಅಥವಾ ಬಾಲ್ಯ ವಿವಾಹದಿಂದ ಬಾಧಿತವಾದ ಮಗುವಿಗೆ ಕಾನೂನುಗಳ ಮತ್ತು ಯೋಜನೆಗಳ ಬಗ್ಗೆ ಮಾಹಿತಿಯು ಸ್ಥಳೀಯ ಭಾಷೆಯಲ್ಲಿ ಸರ್ಕಾರಿ ಕಚೇರಿಗಳು ಮತ್ತು ಸಾರ್ವಜನಿಕ ಕಚೇರಿಗಳಲ್ಲಿ ಲಭ್ಯವಾಗುವಂತೆ ಮಾಡಲು ರಾಜ್ಯ, ಜಿಲ್ಲೆ ಮತ್ತು ತಾಲ್ಲೂಕು ಕಾನೂನು ಸೇವಾ ಪ್ರಾಧಿಕಾರಗಳ ಸಹಯೋಗದೊಂದಿಗೆ ಕಾರ್ಯನಿರ್ವಹಿಸತಕ್ಕದ್ದು.

10. ಬಾಲಕಿಯ ವಾಸಸ್ಥಳಕ್ಕೆ ಸಂಬಂಧಿಸಿದಂತೆ ಮಧ್ಯಂತರ ಆದೇಶಗಳನ್ನು ಪಡೆಯುವುದಕ್ಕಾಗಿ ತಾನಾಗಿಯೇ ಜಿಲ್ಲಾ ನ್ಯಾಯಾಲಯಕ್ಕೆ ಹೋಗಬಹುದು.

11. ಯಾವುದೇ ಮಗುವಿಗೆ ಪಾಲನೆ ಮತ್ತು ಸಂರಕ್ಷಣೆ ಅಗತ್ಯವಿದ್ದರೆ ಅಧಿಕಾರ ವ್ಯಾಪ್ತಿಯುಳ್ಳ ಮಕ್ಕಳ ಕಲ್ಯಾಣ ಸಮಿತಿಗೆ ಹಾಜರುಪಡಿಸುವುದು.

12. ಬಾಲ್ಯ ವಿವಾಹ ನಿಷೇಧದ ಕುರಿತು ಕೆಲಸ ಮಾಡುತ್ತಿರುವ ನೋಂದಣಿ ಹೊಂದಿದ ಸ್ವಯಂ ಸೇವಾ ಸಂಸ್ಥೆಯ ವಿವರಗಳನ್ನು ಸಂಗ್ರಹಿಸಿ ಇಟ್ಟುಕೊಳ್ಳತಕ್ಕದ್ದು.

13. ಬಾಲ್ಯವಿವಾಹ ನಿಷೇಧ ಅಧಿಕಾರಿಯು, ಬಾಲ್ಯವಿವಾಹ ನಡೆಯುವ ಸಂದರ್ಭದಲ್ಲಿ ಬಾಲ್ಯವಿವಾಹವನ್ನು ನಿಲ್ಲಿಸುವುದಕ್ಕೆ ಸಾಧ್ಯವಾದ ಎಲ್ಲಾ ನೆರವನ್ನು ನೀಡತಕ್ಕದ್ದು ಮತ್ತು ವ್ಯಕ್ತಿಗೆ ಅಥವಾ ಅರ್ಜಿದಾರನಿಗೆ ಪೊಲೀಸರ ಸಹಾಯವೇನಾದರೂ ಬೇಕಿದ್ದರೆ ಅದನ್ನು ದೊರಕಿಸಿ ಕೊಡುವುದು.

14. ಬಾಲ್ಯ ವಿವಾಹ ನಿಷೇಧದ ಕುರಿತು ಮಾಹಿತಿ ನೀಡಿದವರ ಮತ್ತು ಅಪ್ರಾಪ್ತ ಮಗುವಿನ ಗೌಪ್ಯತೆ ಕಾಯ್ದುಕೊಳ್ಳುವುದು.

15. ಬಾಲ್ಯವಿವಾಹ ನಿಷೇಧ ಅಧಿಕಾರಿಯ ನಿಲುವು ಮುಖ್ಯವಾಗಿ ಬಾಲ್ಯವಿವಾಹವನ್ನು ತಡೆಯುವುದೇ ಆಗಿರತಕ್ಕದ್ದು ಮತ್ತು ಅದು ಪರಿಹಾರಾತ್ಮಕವಾಗಿರತಕ್ಕದ್ದು, ಇತರೆ ಎಲ್ಲಾ ಕ್ರಮಗಳು ಮತ್ತು ನಿರ್ದೇಶನಗಳು ಪರಿಣಾಮಕಾರಿಯಲ್ಲವೆಂದು ಕಂಡುಬಂದರೆ ಅಥವಾ ನಿಗದಿಪಡಿಸಿದ ಸಮಯದೊಳಗೆ ಆದೇಶಗಳನ್ನು ಅಥವಾ ನಿರ್ದೇಶನಗಳನ್ನು ಪಾಲಿಸುವುದಕ್ಕೆ ಪಕ್ಷಕಾರರು ವಿಫಲರಾದರೆ ಮಾತ್ರ ಕಾನೂನು ಕ್ರಮಕ್ಕೆ ಶಿಫಾರಸ್ಸು ಮಾಡತಕ್ಕದ್ದು ಅಥವಾ ಅದರ ಮೊರೆಹೋಗತಕ್ಕದ್ದು.

16. ಬಾಲ್ಯವಿವಾಹಕ್ಕೊಳಗಾದ ಅಥವಾ ಬಾಲ್ಯ ವಿವಾಹ ಆಗದಂತೆ ತಪ್ಪಿಸಿ ಸಂರಕ್ಷಿಸಿದ ಮಕ್ಕಳ ಅನುಸರಣೆ ಮಾಡುವುದು, ಬಾಲ್ಯವಿವಾಹ ನಿಷೇಧ ಅಧಿಕಾರಿಯು ಬಾಲ್ಯವಿವಾಹಕ್ಕೊಳಗಾದ ಮಗುವಿಗೆ ಲಭ್ಯವಿರುವ ಶಿಕ್ಷಣ, ಆಶ್ರಯ, ಕಾನೂನು ಸಮಾಲೋಚನೆ, ಮನರಂಜನೆ, ವೃತ್ತಿ ತರಬೇತಿ ಸೇವೆಗಳು ಹಾಗೂ ಬೆಂಬಲ, ಇತ್ಯಾದಿ ಬಗ್ಗೆ ಮಾಹಿತಿ ನೀಡತಕ್ಕದ್ದು ಹಾಗೂ ಕರ್ನಾಟಕ ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ಸಂರಕ್ಷಣೆ) ನಿಯಮಗಳು, 2016ರ ಅಡಿಯಲ್ಲಿ ಆಜ್ಞಾಪಿಸಿರುವಂತೆ ಮಕ್ಕಳನ್ನು ಅವರ ಕುಟುಂಬಕ್ಕೆ ವಾಪಸ್ಸು ಕಳುಹಿಸತಕ್ಕದ್ದು ಮತ್ತು ಅಂತಹ ಮಗು ಈ ಸೌಲಭ್ಯಗಳನ್ನು ಪಡೆಯಲು ಸಾಧ್ಯವಾಗುವಂತೆ ನೋಡಿಕೊಳ್ಳತಕ್ಕದ್ದು ಮತ್ತು ಮೊದಲಿದ್ದ ಸ್ಥಿತಿಯನ್ನು ಒದಗಿಸಿಕೊಡತಕ್ಕದ್ದು.

17. ಈ ನಿಯಮಗಳ ಮೇರೆಗೆ ಬಾಲ್ಯವಿವಾಹಗಳನ್ನು ತಡೆಯುವುದಕ್ಕೆ ಸಂಬಂಧಿಸಿದಂತೆ ವಿವಿಧ ಇಲಾಖೆಗಳು ಮತ್ತು ಅವು ನಿರ್ವಹಿಸಬೇಕಾದ ಪಾತ್ರಗಳು ಬಾಲ್ಯವಿವಾಹ ನಿಷೇಧ (ಕರ್ನಾಟಕ) ನಿಯಮಾವಳಿಗಳು–2014ರ ಅನುಸೂಚಿ-1 ರಲ್ಲಿ ನಿರ್ದಿಷ್ಟ ಪಡಿಸಿದಂತೆ ಇರತಕ್ಕದ್ದು.

## IX. ವಯಸ್ಸಿನ ಪುರಾವೆಯನ್ನು ಸಲ್ಲಿಸುವುದಕ್ಕಾಗಿ ಕಡ್ಡಾಯ ಪ್ರಮಾಣ ಪತ್ರಗಳು

❖ ವಯಸ್ಸಿನ ರುಜುವಾತು ಪಡಿಸಲು ಹಾಜರುಪಡಿಸಬೇಕಾದ ದಾಖಲೆಗಳ ಆದ್ಯತಾ ಕ್ರಮವು ಈ ಕೆಳಗಿನಂತಿದೆ:–

1) ಜನನ ಮತ್ತು ಮರಣದ ನೋಂದಣಾಧಿಕಾರಿ/ಉಪ ನೋಂದಣಾಧಿಕಾರಿ ಕಛೇರಿಯಲ್ಲಿ ಪಡೆದ ಜನನ ಪ್ರಮಾಣ ಪತ್ರ.

2) ಜನನ ಪ್ರಮಾಣ ಪತ್ರ ಲಭ್ಯವಿಲ್ಲದಿದ್ದಾಗ ಶಾಲಾ ಪ್ರಮಾಣ ಪತ್ರ. (ಶಾಲಾ ಪ್ರವೇಶ ದಾಖಲಾತಿ ರಿಜಿಸ್ಟರನಲ್ಲಿ ಉದ್ಧೃತ ಭಾಗ/ವರ್ಗಾವಣೆ ಪ್ರಮಾಣ ಪತ್ರ/ ಎಸ್.ಎಸ್.ಎಲ್.ಸಿ. ಪ್ರಮಾಣ ಪತ್ರ)

3) ಕ್ರಮ ಸಂಖ್ಯೆ (1) ಮತ್ತು (2)ರಲ್ಲಿ ನಮೂದಿಸಿದ ವಯಸ್ಸಿನ ಪ್ರಮಾಣ ಪತ್ರ ಲಭ್ಯವಿಲ್ಲದಿದ್ದಾಗ ಮಾತ್ರವೇ ತಂದೆ/ತಾಯಿ/ವ್ಯಕ್ತಿಗಳು, ನಾನು/ನನ್ನ ಮಗ/ ಮಗಳನ್ನು ಶಾಲೆಗೆ ದಾಖಲಿಸಿರುವುದಿಲ್ಲ ಎಂಬ ಹೇಳಿಕೆ ಇರುವ ಅಫಿಡವಿಟ್‌ನೊಂದಿಗೆ ಸರ್ಕಾರಿ ಆಸ್ಪತ್ರೆಯ ವೈದ್ಯಾಧಿಕಾರಿಯಿಂದ ಪಡೆದ ವಯಸ್ಸಿನ ಪ್ರಮಾಣ ಪತ್ರವನ್ನು ನಮೂನೆ–2ರಂತೆ ಸಲ್ಲಿಸಬೇಕು.(ಪುಟ ಸಂಖ್ಯೆ–45)

- ಜಿಲ್ಲಾ ಆಸ್ಪತ್ರೆಯ ವೈದ್ಯಾಧಿಕಾರಿಯನ್ನು ಹೊರತುಪಡಿಸಿ ಯಾವುದೇ ಇತರ ವ್ಯಕ್ತಿ, ಅಧಿಕಾರಿಯಿಂದ ಪಡೆದ ದೃಢೀಕರಣ ತರಹದ ಇತರ ದಾಖಲೆಗಳನ್ನು ವಯಸ್ಸಿನ ರುಜುವಾತಾಗಿ ಸ್ವೀಕರಿಸತಕ್ಕದ್ದಲ್ಲ.
- ವಧು ಅಥವಾ ವರನ ತಂದೆ–ತಾಯಿ / ಪೋಷಕರು ವಯಸ್ಸಿನ ಪ್ರಮಾಣ ಪತ್ರಕ್ಕಾಗಿ ಸಲ್ಲಿಸುವ ಅರ್ಜಿಯು, ನಮೂನೆ–1ರಂತೆ ಇರತಕ್ಕದ್ದು. (ಪುಟ ಸಂಖ್ಯೆ–44)
- ಜನನ ಪ್ರಮಾಣ ಪತ್ರವು ಸುಳ್ಳು ಪ್ರಮಾಣ ಪತ್ರವಾಗಿದೆ ಎಂಬ ಸಂದೇಹ ಉಂಟಾದ ಸಂದರ್ಭದಲ್ಲಿ ಹೆಚ್ಚಿನ ಪರಿಶೀಲನೆಗಾಗಿ ಶಾಲಾ ಪ್ರಮಾಣ ಪತ್ರವನ್ನು ಪಡೆದುಕೊಳ್ಳತಕ್ಕದ್ದು.
- ಜನನ ಪ್ರಮಾಣ ಪತ್ರ ಮತ್ತು ಶಾಲಾ ಪ್ರಮಾಣ ಪತ್ರದ ಮಾಹಿತಿಯಲ್ಲಿ ವಿರೋಧಾಭಾಸಗಳು ಇದ್ದಾಗ, ಜನನ ದಿನಾಂಕ ಅಧಿಕೃತ ರಿಜಿಸ್ಟರ್‌ನಲ್ಲಿ ದಾಖಲಾಗಿದ್ದರೆ ಆ ಪ್ರಮಾಣ ಪತ್ರಕ್ಕೆ ಬದ್ಧರಾಗಬೇಕು.
- ಇವುಗಳನ್ನು ಹೊರತುಪಡಿಸಿ ಇನ್ನಾವುದೇ ದಾಖಲೆಗಳನ್ನು ಅಂದರೆ ಆಧಾರ್ ಕಾರ್ಡ್, ಮತದಾರರ ಗುರುತಿನ ಚೀಟಿ, ರೇಷನ್ ಕಾರ್ಡ್ ಇತ್ಯಾದಿಗಳನ್ನು ಪರಿಗಣಿಸಬಾರದು. ವಯಸ್ಸಿನ ಸುಳ್ಳು ದಾಖಲೆಗಳನ್ನು ಒದಗಿಸಿದಲ್ಲಿ ಅವರ ಮೇಲೆ ಕ್ರಮ ಕೈಗೊಳ್ಳಬೇಕು.

## X. ಬಾಲ್ಯವಿವಾಹವನ್ನು ತಡೆಗಟ್ಟಲು ಮಾಡಬೇಕಾದ ಪ್ರಮುಖ ಅಗತ್ಯ ಕ್ರಮಗಳು

1. ಶಿಕ್ಷಣ, ಅರಿವು ಮತ್ತು ಜಾಗೃತಿ ಕಾರ್ಯಕ್ರಮಗಳು.

- ರಾಜ್ಯ, ಜಿಲ್ಲೆ, ತಾಲ್ಲೂಕು ಮತ್ತು ಗ್ರಾಮ ಪಂಚಾಯತಿ ಹಾಗೂ ಪಟ್ಟಣ ಪ್ರದೇಶಗಳಿಗೆ ಪ್ರತ್ಯೇಕವಾದ ಶಿಕ್ಷಣ, ಅರಿವು ಮತ್ತು ಜಾಗೃತಿ ಕಾರ್ಯಕ್ರಮಗಳನ್ನು ಆಯಾ ಕ್ಷೇತ್ರ

ವ್ಯಾಪ್ತಿಗೆ 3 ತಿಂಗಳ 'ಕ್ರಿಯಾ ಯೋಜನೆ' ತಯಾರು ಮಾಡಿ ಅದನ್ನು ಸಮರ್ಪಕವಾಗಿ ಅನುಷ್ಠಾನಕ್ಕೆ ತರುವುದು.

- ಆಯಾ ರಾಜ್ಯ, ಜಿಲ್ಲೆ, ತಾಲ್ಲೂಕು ಮತ್ತು ಗ್ರಾಮ ಪಂಚಾಯತ್ ಮಟ್ಟದಲ್ಲಿ ಕಳೆದ 3 ವರ್ಷದಿಂದ ಹೆಚ್ಚು 'ಬಾಲ್ಯವಿವಾಹ' ನಡೆದ ಕ್ಷೇತ್ರಗಳಿಗೆ ವಿಶೇಷ ಒತ್ತು ನೀಡಿ ಅಲ್ಲಿ ಹೆಚ್ಚಿನ ಕ್ರಮಕ್ಕೆ ಮುಂದಾಗುವುದು (ಎನ್.ಎಫ್.ಹೆಚ್.ಎಸ್. 2019-20ರ ವರದಿಯ ಪ್ರಕಾರ ಹೆಚ್ಚಾಗಿ ಬಾಲ್ಯವಿವಾಹ ನಡೆಯುತ್ತಿರುವ ಜಿಲ್ಲೆಗಳಲ್ಲಿ ಹೆಚ್ಚಿನ ಕ್ರಮವಹಿಸುವುದು).
- 2006ರ ಕಾಯ್ದೆ ಮತ್ತು ಕರ್ನಾಟಕದ 2014ರ ನಿಯಮದಲ್ಲಿ ಸೂಚಿಸಿದ ಎಲ್ಲಾ ಬಾಲ್ಯವಿವಾಹ ನಿಷೇಧ ಅಧಿಕಾರಿಗಳು ಇತರ ಎಲ್ಲಾ ಸ್ಥಳೀಯ ಇಲಾಖೆಯ ಮತ್ತು ಅಧಿಕಾರಿಗಳೊಂದಿಗೆ ಮೇಲೆ ತಿಳಿಸಿದ ಅಂಶಗಳ ಜಾರಿಗೆ ಜೊತೆಗೂಡುವುದು.
- ಜಾಗೃತಿ ಕಾರ್ಯಕ್ರಮಗಳು ಅತ್ಯಂತ ದುರ್ಬಲ ವರ್ಗ, ಕೊಳಚೆ ಪ್ರದೇಶ, ಅಂಚಿನಲ್ಲಿರುವ ಪ್ರದೇಶ ಮುಂತಾದ ಸ್ಥಳಗಳಿಗೆ ಮುಟ್ಟುವಂತೆ ಖಾತ್ರಿಪಡಿಸುವುದು, ಬಾಲ್ಯವಿವಾಹ ನಿಷೇಧ ಅಧಿಕಾರಿಗಳ ಮತ್ತು ಆಯಾ ಕ್ಷೇತ್ರದ, ಆಯಾ ಇಲಾಖೆಗಳ ಕರ್ತವ್ಯ.
- ಜಾಗೃತಿ ಕಾರ್ಯಕ್ರಮಗಳಲ್ಲಿ ಕಾಯ್ದೆಯ ಪ್ರಮುಖ ಅಂಶಗಳು, ಶಿಕ್ಷೆಯ ಪ್ರಮಾಣಗಳಿಗೆ ಒತ್ತು ನೀಡುವುದರೊಂದಿಗೆ ಪ್ರಮುಖವಾಗಿ 'ಬಾಲ್ಯವಿವಾಹ'ವಾದರೆ ಬಾಲಕಿಗೆ, ಬಾಲಕನಿಗೆ ಮತ್ತು ಅವರ ಮುಂದಿನ ಭವಿಷ್ಯಕ್ಕೆ ಆಗುವ ದುಷ್ಪರಿಣಾಮದ ಬಗ್ಗೆ ಹೆಚ್ಚು ಮಾಹಿತಿ ಇರಬೇಕು.
- ಬಾಲ್ಯವಿವಾಹದಿಂದ ಪ್ರತಿ ಕುಟುಂಬಗಳು ಹೇಗೆ ಹಾಳಾಗುತ್ತಿವೆ ಅದರಿಂದ ಮಾನವ ಮತ್ತು ದೇಶದ ಅಭಿವೃದ್ಧಿಗೆ ಹೇಗೆ ಮಾರಕವಾಗುತ್ತಿದೆ ಎಂಬ ಅಂಶ ಸೇರ್ಪಡಿಸಿ ಕ್ರಿಯಾ ಯೋಜನೆಯಲ್ಲಿ ಸೇರಿಸತಕ್ಕದ್ದು.
- ಜಾಗೃತಿ ಕಾರ್ಯಕ್ರಮಗಳು ಅಧಿಕಾರಿ ವರ್ಗ, ಸಮುದಾಯ, ಸ್ವಯಂಸೇವಾ ಸಂಸ್ಥೆ, ನಾಗರಿಕ ಸಂಸ್ಥೆ, ಪೌರಕಾರ್ಮಿಕರುಗಳು, ಟ್ರೇಡ್ ಯೂನಿಯನ್‌ಗಳು, ಹಲವಾರು ನೌಕರರ ಸಂಘಗಳು, ವೃತ್ತಿ ಆಧಾರಿತ ಸಂಘಗಳು, ಬಾಲಕಿ/ಕಿಶೋರಿಯರ ಸಂಘ, ಧಾರ್ಮಿಕ ಸಂಘ ಸಂಸ್ಥೆಗಳು ಹಾಗೂ ಸರ್ಕಾರಿ ಇಲಾಖೆ ಹಾಗೂ ಸರ್ಕಾರೇತರ ಇಲಾಖೆಗಳ ನೌಕರರ ಸಂಘಗಳನ್ನು ಸೇರಿಸಿಕೊಂಡು, ಅವರನ್ನು ತಲುಪಿ ಅವರು ಅವರ ವ್ಯಾಪ್ತಿಯಲ್ಲಿ ಜಾಗೃತಿ ಅರಿವು ಕಾರ್ಯಕ್ರಮಗಳನ್ನು ಮುಂದುವರಿಸುವಂತೆ ಕ್ರಿಯಾ ಯೋಜನೆ ರೂಪಿಸಬೇಕು.
- ನವ ಮಾಧ್ಯಮಗಳು ಮತ್ತು ಅವುಗಳ ಪ್ರತಿನಿಧಿಗಳನ್ನು ಪ್ರಧಾನವಾಗಿ ಬಳಸಬೇಕು.
- ಜಾಗೃತಿಯಲ್ಲಿ ವಿವಿಧ ರೀತಿಯ ಕಾರ್ಯಕ್ರಮ ಹಮ್ಮಿಕೊಳ್ಳಬೇಕು. ಮುಖ್ಯವಾಗಿ ಟಿ.ವಿ.,

ರೇಡಿಯೋ, ಸ್ಥಳೀಯ ಟಿ.ವಿ. ಚಾನಲ್, ಧಾರ್ಮಿಕ ಸಂಸ್ಥೆಗಳ ಜಾತ್ರೆ ಸಮಾರಂಭ, ನಾಟಕ, ಚಿತ್ರಕಲೆ, ಬೀದಿನಾಟಕ, ಸ್ಟಿಕ್ಕರ್, ಪೋಸ್ಟರ್, ಹೋರ್ಡಿಂಗ್, ಕೈಪಿಡಿ, ಕರಪತ್ರ, ವಾಟ್ಸಪ್, ಫೇಸ್ ಬುಕ್, ಟ್ವಿಟ್ಟರ್, ರೀಲ್ಸ್ ಮತ್ತು ಕಿರು ವಿಡಿಯೋ ಮುಂತಾದವುಗಳು.

- ಜಿಲ್ಲಾ ಮಟ್ಟದಿಂದ ಗ್ರಾಮ ಮಟ್ಟದವರೆಗಿನ ಎಲ್ಲಾ ಸರ್ಕಾರಿ ಸಭೆಗಳಲ್ಲಿ ಹಾಗೂ ಮುಖ್ಯವಾಗಿ ಮಕ್ಕಳ ಹಾಗೂ ಮಹಿಳಾ ಗ್ರಾಮಸಭೆಗಳಲ್ಲಿ ಬಾಲ್ಯವಿವಾಹ ನಿಷೇಧ ಕಾಯ್ದೆ-2006 ಹಾಗೂ ತಿದ್ದುಪಡಿ ಕಾಯ್ದೆ 2016 ಅನುಷ್ಠಾನದ ಬಗ್ಗೆ ಚರ್ಚೆ, ಅವಲೋಕನ, ಕ್ರಮ ಮತ್ತು ಅನುಸರಣೆ ಮಾಡುವುದನ್ನು ಕಡ್ಡಾಯಗೊಳಿಸಬೇಕು.

ಈ ಜಾಗೃತಿ ಕಾರ್ಯಕ್ರಮಗಳನ್ನು ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಪಂಚಾಯತಿ ಮಟ್ಟದಲ್ಲಿ ಈ ಕೆಳಗಿನಂತೆ ಸಮಿತಿಗಳ ಮೂಲಕ ಮಾಡಬೇಕು.

| | |
|---|---|
| ಗ್ರಾಮ ಪಂಚಾಯತ್ ಮಟ್ಟ: ಮಹಿಳೆಯರ ಮತ್ತು ಮಕ್ಕಳ ರಕ್ಷಣೆಯ ಕಾವಲು ಸಮಿತಿ | ಗ್ರಾಮ ಪಂಚಾಯತ್ ಅಧ್ಯಕ್ಷರು, ಉಪಾಧ್ಯಕ್ಷರು, ಇಬ್ಬರು ಗ್ರಾಮ ಪಂಚಾಯತ್ ಸದಸ್ಯರು, ಗ್ರಾಮ ಪಂಚಾಯತ್ ವ್ಯಾಪ್ತಿಯ ಸರ್ಕಾರಿ ಶಾಲೆ ಮುಖ್ಯೋಪಾಧ್ಯಾಯರುಗಳು, ಗ್ರಾಮ ಲೆಕ್ಕಿಗರು, ಆಶಾ ಕಾರ್ಯಕರ್ತೆ, ಬೀಟ್ ಪೊಲೀಸ್ ಅಧಿಕಾರಿ, ಐಸಿಡಿಎಸ್ ಮೇಲ್ವಿಚಾರಕಿ, ಪಿಡಿಒಗಳು, ಅಂಗನವಾಡಿ ಕಾರ್ಯಕರ್ತೆಯರು ಮತ್ತು ಮೇಲ್ವಿಚಾರಕಿಯರು, ಮಕ್ಕಳ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಯ ಮಹಿಳಾ ಪ್ರತಿನಿಧಿ, ಸ್ತ್ರೀ ಶಕ್ತಿ ಸಂಘದ ಒಬ್ಬರು ಪ್ರತಿನಿಧಿ. |
| ತಾಲ್ಲೂಕು ಮಟ್ಟ ಬಾಲ್ಯ ವಿವಾಹಗಳನ್ನು ತಡೆಯುವ ಸಮನ್ವಯ ಮತ್ತು ಪರಿಶೀಲನಾ ಸಮಿತಿ | ತಹಶೀಲ್ದಾರರು, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು, ಕ್ಷೇತ್ರ ಶಿಕ್ಷಣಾಧಿಕಾರಿಗಳು, ತಾಲ್ಲೂಕು ವೈದ್ಯಾಧಿಕಾರಿಗಳು, ಸರ್ಕಲ್ ಪೊಲೀಸ್ ಇನ್ಸ್‌ಪೆಕ್ಟರ್, ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿ, ಪುರಸಭೆ/ಪಟ್ಟಣ ಪಂಚಾಯತಿಯ ಮುಖ್ಯ ಅಧಿಕಾರಿಗಳು, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಮಕ್ಕಳ ಕಲ್ಯಾಣ ಕ್ಷೇತ್ರದಲ್ಲಿ ಸಕ್ರಿಯವಾಗಿ ಕೆಲಸ ಮಾಡುತ್ತಿರುವ 1 ಸ್ವಯಂ ಸೇವಾ ಸಂಸ್ಥೆ |
| ಜಿಲ್ಲಾ ಮಟ್ಟ: ಬಾಲ್ಯ ವಿವಾಹಗಳನ್ನು ತಡೆಯುವ ಸಮನ್ವಯ ಮತ್ತು ಪರಿಶೀಲನಾ ಸಮಿತಿ | ಜಿಲ್ಲಾಧಿಕಾರಿಗಳು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕರು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳು, ಮಹಾನಗರ ಪಾಲಿಕೆ ಮತ್ತು ನಗರ ಸಭೆ ಆಯುಕ್ತರು, ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಮಕ್ಕಳ ಕಲ್ಯಾಣ ಕ್ಷೇತ್ರದಲ್ಲಿ ಸಕ್ರಿಯವಾಗಿ ಕೆಲಸ ಮಾಡುತ್ತಿರುವ 2 ಸ್ವಯಂ ಸೇವಾ ಸಂಸ್ಥೆಗಳು (ಚೈಲ್ಡ್ ಲೈನ್ ಸೇರಿದಂತೆ). |

| | |
|---|---|
| ರಾಜ್ಯ ಮಟ್ಟ: | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು, ಒಳಾಡಳಿತ ಇಲಾಖೆ, ಕಂದಾಯ ಇಲಾಖೆ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗಳ ಸರ್ಕಾರದ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ ಅಪರ ಮುಖ್ಯಕಾರ್ಯದರ್ಶಿ, ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಅಧ್ಯಕ್ಷರು, ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಸರ್ಕಾರದಿಂದ ನಾಮ ನಿರ್ದೇಶಿತರಾದ ಐದು ಪ್ರಮುಖ ಸೇವಾಸಂಸ್ಥೆಗಳು, |

ಗ್ರಾಮಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯಿದೆಗೆ 2015ರಲ್ಲಿ ಆಗಿರುವ ತಿದ್ದುಪಡಿಯಂತೆ ಎಲ್ಲ ಗ್ರಾಮಪಂಚಾಯತಿಗಳು ಕಡ್ಡಾಯವಾಗಿ ಜನವಸತಿ ಸಭೆ, ವಾರ್ಡ್ ಸಭೆ ಮತ್ತು ಗ್ರಾಮಸಭೆಗಳನ್ನು ನಡೆಸಬೇಕು [ಸೆಕ್ಷನ್ 3ಎಚ್(i)]. ಮಹಿಳೆಯರು, ಮಕ್ಕಳು ಮತ್ತು ಹಿಂದುಳಿದ ಜಾತಿ ವರ್ಗಗಳ ಸಮುದಾಯಗಳನ್ನು ಕುರಿತು ಪ್ರತ್ಯೇಕವಾದ ಸಭೆಗಳನ್ನು ವರ್ಷಕ್ಕೊಮ್ಮೆ ನಡೆಸಬೇಕು. ಇಲ್ಲಿ ಬಾಲ್ಯವಿವಾಹಗಳನ್ನು ಮತ್ತು ಲೈಂಗಿಕ ದೌರ್ಜನ್ಯಗಳನ್ನು ತಡೆಗಟ್ಟುವ ಕುರಿತು ಚರ್ಚೆ ನಡೆಸಬೇಕು.

## XI. ಸಹಕಾರ/ಸಮನ್ವಯತೆ/ಸಹಭಾಗಿತ್ವ:

1. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯೊಂದಿಗಿರುವ ಮಕ್ಕಳ ಕಲ್ಯಾಣ ಸಮಿತಿ/ಬಾಲ ನ್ಯಾಯ ಮಂಡಳಿ/ಮಕ್ಕಳ ವಿಶೇಷ ಪೊಲೀಸ್ ಘಟಕ/ ಮಕ್ಕಳ ಸಹಾಯವಾಣಿ, ಅರ್ಹಸಂಸ್ಥೆ, ಬಾಲ ಮಂದಿರಗಳು, ಈ ಬಗ್ಗೆ ಕೆಲಸ ಮಾಡುತ್ತಿರುವ ಸ್ವಯಂ ಸೇವಾ ಸಂಸ್ಥೆಗಳು, ಶಿಕ್ಷಣ ಇಲಾಖೆಯ ವಸತಿ ಶಾಲೆಗಳ ಸಂಪರ್ಕ, ವಿಳಾಸ, ದೂರವಾಣಿ ಸಂಖ್ಯೆ ಮಾಹಿತಿಯನ್ನು ಇಟ್ಟುಕೊಂಡು ಅವರ ಸಹಭಾಗಿತ್ವ ಪಡೆದುಕೊಳ್ಳುವುದು. ಅದರ ಸಾಕಷ್ಟು ಪ್ರತಿಗಳನ್ನು ತಯಾರಿಸಿ ಹಂಚುವುದು.
2. ವಿವಿಧ ಹಂತದ ವ್ಯವಸ್ಥೆಗಳು ಅನುಷ್ಠಾನದಲ್ಲಿ ಇರುವಂತೆ ಬಾಲ್ಯವಿವಾಹ ನಿಷೇಧಾಧಿಕಾರಿಗಳು, ತಹಶೀಲ್ದಾರರು ಮತ್ತು ಜಿಲ್ಲಾಧಿಕಾರಿಗಳ ಮೂಲಕ ಅನುಷ್ಠಾನಕ್ಕೆ ತಂದು ಕ್ರಿಯಾಶೀಲವಾಗಿ ನಿರಂತರ ಚಟುವಟಿಕೆಯಿಂದ, ಬದ್ಧತೆಯಿಂದ ಅಸ್ತಿತ್ವದಲ್ಲಿ ಇರುವಂತೆ ನೋಡುವುದು.

3. **ಜ್ಞಾನ/ಅಂಕಿಸಂಖ್ಯೆ/ಮಾಹಿತಿ ನಿರ್ವಹಣಾ ವ್ಯವಸ್ಥೆ:** ಬೇರೆ ಬೇರೆ ಪಾಲುದಾರ ಇಲಾಖೆಗಳಿಂದ/ವ್ಯಕ್ತಿಗಳಿಂದ ಬಾಲ್ಯವಿವಾಹಕ್ಕೆ ಸಂಬಂಧಿಸಿದ ಎಲ್ಲಾ ದೂರುಗಳು, ಮಾಹಿತಿಗಳು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಗೆ ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕಕ್ಕೆ ಬರಬೇಕು. ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಎಲ್ಲಾ ವರದಿ, ದೂರು ಮಾಹಿತಿಗಳನ್ನು ಕೂಲಂಕುಶವಾಗಿ ಪರಿಶೀಲಿಸಿ, ಸಮನ್ವಯಗೊಳಿಸಿ, ಕ್ರೋಢೀಕರಿಸಿ ಜಿಲ್ಲಾ ಉಪ ನಿರ್ದೇಶಕರಿಗೆ ಕಳುಹಿಸಬೇಕು. ಉಪ ನಿರ್ದೇಶಕರು ಪರಿಶೀಲಿಸಿ ರಾಜ್ಯ ಮಟ್ಟಕ್ಕೆ ಕಳುಹಿಸಬೇಕು.

4. ಎಲ್ಲಾ ಮಾಹಿತಿ, ಅಂಕಿಸಂಖ್ಯೆಗಳನ್ನು ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ಪರಿಶೀಲಿಸಿ ಸತ್ಯಾಸತ್ಯತೆಯನ್ನು ಖಚಿತಪಡಿಸಿದ ನಂತರ ದಾಖಲಿಸಬೇಕು ಮತ್ತು ಅದನ್ನು ಕ್ರೋಢೀಕರಿಸಿ, ವರದಿಗೆ / ಮಾಹಿತಿಗೆ ಸೇರ್ಪಡೆಯಾಗಬೇಕು.

5. ಎಲ್ಲಾ ಮಾಹಿತಿಗಳ ಅನುಸರಣೆ, ವಿವರಣೆ, ವಿಮರ್ಶೆ, ಪರಿಶೀಲನೆ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಹಾಗೂ ಜಿಲ್ಲೆಗಳ ಉಪನಿರ್ದೇಶಕರ ಹಂತದಲ್ಲಿ ಕಡ್ಡಾಯ.

## XII. ಬಾಲ್ಯವಿವಾಹ'ದ ಗುರುತಿಸುವಿಕೆ ಮತ್ತು ಮಾಹಿತಿ ಪಡೆಯುವ ಕ್ರಮ:

1. ಬಾಲ್ಯವಿವಾಹಕ್ಕೆ ಸಿದ್ಧತೆ, ವ್ಯವಸ್ಥೆ, ಮಾಹಿತಿಯನ್ನು ರಾಜ್ಯದ ಯಾವುದೇ ಪ್ರಜೆ ಯಾವುದೇ ಸಮಯದಲ್ಲಿ ನಿರ್ಭಯವಾಗಿ ವರದಿ/ಮಾಹಿತಿ/ದೂರನ್ನು ಬಾಲ್ಯವಿವಾಹ ನಿಷೇಧಾಧಿಕಾರಿಗಳಿಗೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕಕ್ಕೆ/ ಚೈಲ್ಡ್‌ಲೈನ್/ ಯಾವುದೇ ಇಲಾಖೆಗೆ ಅಥವಾ ಸ್ಥಳೀಯ ಪಂಚಾಯತಿಗೆ, ಗ್ರಾಮ ಲೆಕ್ಕಿಗರಿಗೆ, ನಗರ ಸಭೆ, ಪುರಸಭೆಗೆ ಆರೋಗ್ಯ ನಿರೀಕ್ಷಕರುಗಳಿಗೆ ನೀಡಬಹುದು.
2. ಮಾಹಿತಿ, ವರದಿ, ದೂರು ನೀಡಿದವರ ಹೆಸರು ವಿವರಗಳ ಗೌಪ್ಯತೆ ಕಾಪಾಡುವುದು ಎಲ್ಲರ ಜವಾಬ್ದಾರಿ ಹಾಗೂ ಬಹಿರಂಗಪಡಿಸಬಾರದು.
3. ರಕ್ಷಣೆಯ ಹಿತದೃಷ್ಟಿಯಿಂದ ಬಾಲ್ಯ ವಿವಾಹ ನಿಷೇಧಾಧಿಕಾರಿಗಳ ಸಹಾಯ ಪಡೆದುಕೊಳ್ಳುವುದು.
4. ಯಾವುದೇ ಮಗು/ವ್ಯಕ್ತಿ/ಸಂಸ್ಥೆ ಬಾಲ್ಯ ವಿವಾಹ ನಡೆಯುತ್ತಿರುವ ಬಗ್ಗೆ ಈ ಕೆಳಗಿನವರಿಗೆ ದೂರು/ಮಾಹಿತಿ ನೀಡಬಹುದು.

| |
|---|
| ಚೈಲ್ಡ್‌ಲೈನ್–1098 (ಮಕ್ಕಳ ಸಹಾಯವಾಣಿ 1098) |
| ಎಲ್ಲಾ ಸರ್ಕಾರಿ ಶಾಲಾ ಮುಖ್ಯೋಪಾಧ್ಯಾಯರು |
| ಸ್ಥಳೀಯ ಗ್ರಾಮ ಲೆಕ್ಕಿಗರು/ಕಂದಾಯ ನಿರೀಕ್ಷಕರು/ಹೋಬಳಿ ಕಂದಾಯ ನಿರೀಕ್ಷಕರು |

| |
|---|
| ನಗರ/ಪುರಸಭೆಯ ಆರೋಗ್ಯ ನಿರೀಕ್ಷಕರುಗಳು |
| ಪಿಡಿಒ / ಪಂಚಾಯತ್ ಅಭಿವೃದ್ಧಿ ಅಧಿಕಾರಿ/ಅಧ್ಯಕ್ಷರು/ಸದಸ್ಯರುಗಳು |
| ಯಾವುದೇ ಪೊಲೀಸ್ ಠಾಣೆ |
| ತಹಶೀಲ್ದಾರರು |
| ಇತರ (ಬಾಲ್ಯವಿವಾಹ ನಿಷೇಧಾಧಿಕಾರಿಗಳು) ಯಾವುದೇ ಅಧಿಕಾರಿ ಅಥವಾ ಇಲಾಖೆ |
| ಮಕ್ಕಳ ಕಲ್ಯಾಣ ಸಮಿತಿ |
| ಮಕ್ಕಳ ವಿಶೇಷ ಪೊಲೀಸ್ ಘಟಕ |
| ಅಂಗನವಾಡಿ ಕಾರ್ಯಕರ್ತೆಯರು, ಮೇಲ್ವಿಚಾರಕರು, ಆಶಾ ಕಾರ್ಯಕರ್ತೆಯರು ಆರೋಗ್ಯ ಕಾರ್ಯಕರ್ತರು, ಸ್ವಯಂ ಸೇವಾ ಸಂಸ್ಥೆಯ ಪ್ರತಿನಿಧಿಗಳು, ಸಾಕ್ಷರತಾ ಪ್ರೇರಕರು, ನ್ಯಾಯಬೆಲೆ ಅಂಗಡಿ ಅಧಿಕಾರಿ, ಗ್ರಾಮದ ಬೀಟ್ ಪೊಲೀಸ್ ಹಾಗೂ ಗ್ರಾಮಕ್ಕೆ ಭೇಟಿ ನೀಡುವ ಕೃಷಿ ಅಧಿಕಾರಿ |
| ಪಟ್ಟಣ ಪಂಚಾಯತಿ, ಪುರಸಭೆ, ನಗರಸಭೆಯ ಮುಖ್ಯಾಧಿಕಾರಿಗಳು, ಆರೋಗ್ಯ ನಿರೀಕ್ಷಕರು, ಆಯುಕ್ತರು, ಕಂದಾಯ ನಿರೀಕ್ಷಕರುಗಳು, ಕಾರ್ಮಿಕ ನಿರೀಕ್ಷಕರು, ನಗರಸಭೆ, ಪುರಸಭೆ, ಪಟ್ಟಣ ಪಂಚಾಯತಿಯ ಎಲ್ಲಾ ಜನ ಪ್ರತಿನಿಧಿಗಳು. |

## XIII. ಬಾಲ್ಯವಿವಾಹದ ಬಗ್ಗೆ ಮಾಹಿತಿ ಅಥವಾ ದೂರು ನೀಡುವವರು ಈ ಕೆಳಗಿನ ವಿವರಗಳನ್ನು ನೀಡಬೇಕು.

- ಬಾಲಕಿ ಮತ್ತು ಬಾಲಕನ ಹೆಸರು
- ಬಾಲಕ ಮತ್ತು ಬಾಲಕಿಯ ತಂದೆ–ತಾಯಿಯ ಹೆಸರು
- ವಿಳಾಸ ಹಾಗೂ ಲಭ್ಯವಿದ್ದಲ್ಲಿ ದೂರವಾಣಿ ಸಂಖ್ಯೆ.
- ಪೊಲೀಸ್ ಠಾಣೆ
- ಬಾಲಕ/ಬಾಲಕಿ ವಿದ್ಯಾಭ್ಯಾಸ ಮಾಡಿರುವ/ಮಾಡುತ್ತಿರುವ ವಿದ್ಯಾಸಂಸ್ಥೆ ಹೆಸರು (ಶಾಲಾ ದೃಢೀಕರಣ ಪತ್ರ ಪಡೆಯಲು)

- ವಿವಾಹ ಒಂದೇ ಜೋಡಿಯದೇ /ಸಾಮೂಹಿಕವೇ?
- ವಿವಾಹ ನಡೆಯುತ್ತಿರುವ/ನಡೆದಿರುವ/ನಡೆಯಬಹುದಾದ ಯಾವುದೇ ಸ್ಥಳ
- ಮದುವೆ ನಡೆಯುವ/ನಡೆದ ದಿನಾಂಕ.
- ಇಚ್ಛಿಸಿದಲ್ಲಿ ಹಾಗೂ ಒಪ್ಪಿದಲ್ಲಿ ದೂರುದಾರನ ದೂರವಾಣಿ ಹೆಸರು/ವಿಳಾಸ ಸಂಗ್ರಹಿಸುವುದು. (ಮುಂದಿನ ಅಗತ್ಯ ಕ್ರಮ ಕೈಗೊಳ್ಳಲು ಸಹಕಾರ ಮತ್ತು ಮಾಹಿತಿಗಾಗಿ ಮಾತ್ರ ಉಪಯೋಗಿಸುವುದು. ಬೇರೆ ಯಾರಿಗೂ ದೂರುದಾರರ ಮಾಹಿತಿ ನೀಡುವಂತಿಲ್ಲ. ದೂರು ಅಥವಾ ಮಾಹಿತಿ ನೀಡಿದವರ, ದೂರವಾಣಿ ಅಥವಾ ಯಾವುದೇ ವೈಯುಕ್ತಿಕ ದೂರವಾಣಿ ವಿಳಾಸಗಳನ್ನು ಬಲವಂತವಾಗಿ ಅಥವಾ ಒತ್ತಾಯಪೂರ್ವಕವಾಗಿ ಕೇಳಬಾರದು ಮತ್ತು ಪಡೆಯಬಾರದು ಹಾಗೂ ಯಾರಿಗೂ ನೀಡಬಾರದು)
- ಮದುವೆ ನಡೆಸಿದವರು ಮತ್ತು ಹಾಜರಿದ್ದವರ ಕೆಲವರ ಹೆಸರು, ಮದುವೆ ನಡೆದ/ ನಡೆಯುವ ಕುರಿತು ಸಾಕ್ಷಿ, ಆಹ್ವಾನ ಪತ್ರಿಕೆ, ಛಾಯಾಚಿತ್ರ.

## XIV. ರಾಜ್ಯದ ಯಾವುದೇ ಮೂಲೆಯಲ್ಲಿ ಬಾಲ್ಯವಿವಾಹ ನಡೆಯುತ್ತಿದೆ ಅಥವಾ ನಡೆದು ಹೋಗಿದೆ ಎಂದಾದಲ್ಲಿ ದೂರು ನೀಡಲು ಸಾರ್ವಜನಿಕರಿಗೆ ಇರಬೇಕಾದ ಅರಿವಿನ ವಿವರ.

1. ಕ್ರಮ ಸಂಖ್ಯೆ X. ರ (1) ರಲ್ಲಿ ಹೇಳಿದ ಅಗತ್ಯ ಶಿಕ್ಷಣ, ಅರಿವು ಜಾಗೃತಿ ಕ್ರಮ ಕಡ್ಡಾಯ.
2. ರಾಜ್ಯದ ಎಲ್ಲಾ ಅಂಗನವಾಡಿ, ಸರ್ಕಾರಿ/ಸರ್ಕಾರೇತರ/ಖಾಸಗಿ ಶಾಲೆಗಳಲ್ಲಿ ಗ್ರಾಮ ಪಂಚಾಯತಿಗಳಲ್ಲಿ, ಕೃಷಿ ಕೇಂದ್ರ, ಗ್ರಾಮ ಲೆಕ್ಕಿಗರ ಕಛೇರಿ ಬ್ಯಾಂಕ್‌ಗಳಲ್ಲಿ, ಹಾಲಿನ ಕೇಂದ್ರಗಳಲ್ಲಿ, ನಾಗರಿಕ ನ್ಯಾಯಬೆಲೆ ಅಂಗಡಿ, ದೇವಸ್ಥಾನ, ಮಠ, ಮಂದಿರ, ಚರ್ಚ್, ಮಸೀದಿ, ಕಲ್ಯಾಣ ಮಂಟಪ, ಮುಂತಾದ ಸ್ಥಳಗಳಲ್ಲಿ ಈ ಕೆಳಗಿನವರಿಗೆ ದೂರು/ಮಾಹಿತಿ ನೀಡಲು ಅವರ ದೂರವಾಣಿ ಸಂಖ್ಯೆಯನ್ನು ಪ್ರದರ್ಶಿಸಬೇಕು.

**ಮಕ್ಕಳ ಸಹಾಯವಾಣಿ 1098, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಜಿಲ್ಲಾ ಮಕ್ಕಳ ಪೊಲೀಸ್ ಘಟಕ, ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ, ತಹಶೀಲ್ದಾರರ ಕಛೇರಿ, ಜಿಲ್ಲಾಧಿಕಾರಿಗಳ ಕಛೇರಿ, ಬಾಲ್ಯವಿವಾಹ ನಿಷೇಧ ಮತ್ತು ಉಸ್ತುವಾರಿ ಕೋಶ : 080-22351098,**
**ಮಹಿಳಾ ಸಹಾಯವಾಣಿ ಸಂಖ್ಯೆ :181,**
**ಪೊಲೀಸ್ ಸಹಾಯವಾಣಿ 100 ಮತ್ತು 112.**



3. ಎಲ್ಲಾ ಸರ್ಕಾರಿ ಅನುದಾನ ರಹಿತ/ಸಹಿತ ಶಾಲೆಗಳ/ಕಾಲೇಜುಗಳಲ್ಲಿ 1 ರಿಂದ 12ರ ತರಗತಿ ತನಕ ಪ್ರತಿಯೊಂದು ಮಗುವಿಗೆ 'ಬಾಲ್ಯವಿವಾಹ' ತಪ್ಪು ಹಾಗೂ ನಾನು ಬಾಲಕಿ 18, ಬಾಲಕ 21 ಆಗುವವರೆಗೆ ಮದುವೆಗೆ ಒಪ್ಪುವುದಿಲ್ಲ ಒಂದು ವೇಳೆ ನನ್ನ ಕುಟುಂಬ, ಗ್ರಾಮ ಮಟ್ಟದಲ್ಲಿ ಬಾಲ್ಯವಿವಾಹ ನಡೆದರೆ ಖಂಡಿತ ಮಕ್ಕಳ ಸಹಾಯವಾಣಿಗೆ/ಶಿಕ್ಷಕರಿಗೆ ದೂರು ನೀಡುತ್ತೇನೆ ಎಂಬ ಅರಿವು ಮತ್ತು ಬದ್ಧತೆಯನ್ನು ಬೆಳೆಸುವುದು.


4. ಗ್ರಾಮ ಪಂಚಾಯತಿ ಮಟ್ಟದ ಮಹಿಳೆಯರ ಮತ್ತು ಮಕ್ಕಳ ಹಕ್ಕುಗಳ ರಕ್ಷಣೆಯ ಕಾವಲು ಸಮಿತಿಯು 'ಬಾಲ್ಯವಿವಾಹ'ವನ್ನು ನಿರ್ಮೂಲನೆ ಮಾಡುವ ಸಮಿತಿ. ಆದ್ದರಿಂದ ಈ ಸಮಿತಿ ಸದಸ್ಯರುಗಳು ಹಾಗೂ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಪಂಚಾಯತಿ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರು ತನ್ನ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬಾಲ್ಯವಿವಾಹ ಆಗದಂತೆ ಹಾಗೂ ಒಂದು ವೇಳೆ ನಡೆದರೆ ಯಾವುದೇ ಗೌಪ್ಯತೆ ಇಲ್ಲದೇ ಪ್ರಕರಣ ದಾಖಲಿಸುವ ಕ್ರಮಕ್ಕೆ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಮುಂದಾಗಬೇಕು. ಇದಕ್ಕೆ ಗ್ರಾಮ ಲೆಕ್ಕಿಗರು, ಮುಖ್ಯ ಶಿಕ್ಷಕರು, ಜನಪ್ರತಿನಿಧಿಗಳು ಕಡ್ಡಾಯ ಸಹಕಾರ ನೀಡಬೇಕು.

5. ಈ ಕಾಯ್ದೆಯ ಪ್ರಕಾರ "ಪ್ರತಿಯೊಬ್ಬ ಪೊಲೀಸ್ ಅಧಿಕಾರಿಯು ತನ್ನ ಅಧಿಕಾರ ವ್ಯಾಪ್ತಿಯಲ್ಲಿ ನಡೆದ ಅಪರಾಧದ ಸಂಜ್ಞೇಯತೆಯನ್ನು ಗಮನಿಸಿ ಸ್ವಯಂ-ಪ್ರೇರೇಪಿತರಾಗಿ ಕ್ರಮ ತೆಗೆದುಕೊಳ್ಳತಕ್ಕದ್ದು."(ಸು-ಮೋಟೋ)

## XV. ಗ್ರಾಮ ಪಂಚಾಯತಿಯು ತನ್ನ ಬಾಲ್ಯವಿವಾಹ ನಿರ್ಮೂಲನೆ ಕ್ರಿಯಾ ಯೋಜನೆಯಲ್ಲಿ ವರ್ಷದ ಪ್ರಾರಂಭದಲ್ಲಿ ತಂಡಗಳನ್ನು ಈ ಕೆಳಗಿನಂತೆ ಸಿದ್ಧಪಡಿಸಿಕೊಂಡಿರಬೇಕು.

| | |
|---|---|
| ಗ್ರಾಮ ಮಟ್ಟದ ತಂಡ | ಗ್ರಾಮ ಲೆಕ್ಕಿಗರು(ಕಡ್ಡಾಯ),ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು (ಕಡ್ಡಾಯ),ಗ್ರಾಮ ಬೀಟ್ ಪೊಲೀಸ್(ಕಡ್ಡಾಯ),ಶಾಲಾ ಶಿಕ್ಷಕರು / ಮುಖ್ಯಶಿಕ್ಷಕರು(ಕಡ್ಡಾಯ) ಅಂಗನವಾಡಿ ಕಾರ್ಯಕರ್ತೆಯರು, ನಾಗರಿಕ ಸಂಘ ಸಂಸ್ಥೆ, ಸ್ವಯಂಸೇವಾ ಸಂಸ್ಥೆಗಳ ಅಥವಾ ಚೈಲ್ಡ್‌ಲೈನ್ / ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಸದಸ್ಯರು, ಒಬ್ಬರು/ಇಬ್ಬರು ಮಹಿಳಾ ಅಧಿಕಾರಿಗಳು (ಕಡ್ಡಾಯ), ಗ್ರಾಮ ಪಂಚಾಯಿತಿ ಸದಸ್ಯರು |
| ಗ್ರಾಮ ಪಂಚಾಯತಿ | ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು(ಕಡ್ಡಾಯ), ಗ್ರಾಮ ಲೆಕ್ಕಿಗರು(ಕಡ್ಡಾಯ), ಆ ಹಳ್ಳಿಯ ಸರ್ಕಾರಿ ಶಾಲಾ ಶಿಕ್ಷಕರು /ಮುಖ್ಯೋಪಾಧ್ಯಾಯರು ಅಂಗನವಾಡಿ ಮೇಲ್ವಿಚಾರಕರು ಪೊಲೀಸ್ ಸಿಬ್ಬಂದಿ(ಕಡ್ಡಾಯ), ಅಗತ್ಯಾನುಸಾರ ಹಿರಿಯ ಅಧಿಕಾರಿ ಚೈಲ್ಡ್‌ಲೈನ್/ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಸದಸ್ಯರು. ದೂರಿನ ಮತ್ತು ಗ್ರಾಮದ ಪರಿಸ್ಥಿತಿಗನುಗುಣವಾಗಿ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗೆ ಮಾಹಿತಿ ನೀಡಿ ಆ ಮಟ್ಟದ ಹಿರಿಯ ಅಧಿಕಾರಿಗಳನ್ನು ಸೇರಿಸಿಕೊಳ್ಳುವುದು. |
| ನಗರ/ಪುರಸಭೆ ಪ್ರದೇಶ (ವಾರ್ಡವಾರು) | ಆರೋಗ್ಯ ನಿರೀಕ್ಷಕರು (ಕಡ್ಡಾಯ)<br>ಶಾಲಾ ಮುಖ್ಯೋಪಾಧ್ಯಾಯರು (ಸರ್ಕಾರಿ ಶಾಲೆ)<br>ಅಂಗನವಾಡಿ ಕಾರ್ಯಕರ್ತೆಯರು<br>ಅಂಗನವಾಡಿ ಮೇಲ್ವಿಚಾರಕಿಯರು<br>ಚೈಲ್ಡ್‌ಲೈನ್/ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಸದಸ್ಯರು |

## XVI. ಬಾಲ್ಯವಿವಾಹಕ್ಕೆ ಸಿದ್ಧತೆ, ನಿಶ್ಚಿತಾರ್ಥ(Engagement)ಮಾಡುತ್ತಿದ್ದಾರೆ ಎಂಬ ಮಾಹಿತಿ ದೂರು ಬಂದಾಗ ಕೈಗೊಳ್ಳಬೇಕಾದ ಕ್ರಮಗಳು




1. ಬಾಲ್ಯವಿವಾಹ ನಿಷೇಧಕ್ಕಾಗಿ ರಚಿಸಿರುವ ತಂಡಗಳು ವಾಟ್ಸಪ್ ಗ್ರೂಪ್ ಮಾಡಿ ಕೊಳ್ಳುವುದರಿಂದ ಮಾಹಿತಿಯನ್ನು ವೇಗವಾಗಿ ಪಡೆಯಲು ಸಹಕಾರಿಯಾಗುತ್ತದೆ.

2. ಬಾಲ್ಯವಿವಾಹ ನಡೆಸುವ ಸಾಧ್ಯತೆಯಿರುವುದು ದಾಖಲೆಗಳು / ಸಾಕ್ಷಿಯ ಮೂಲಕ ಮೊದಲೇ ಸಿಕ್ಕಲ್ಲಿ ಅದನ್ನು ಬಳಸಿಕೊಂಡು ನೇರವಾಗಿ ಜಿಲ್ಲಾ ನ್ಯಾಯಾಧೀಶರನ್ನು ಸಂಪರ್ಕಿಸಿ "ಬಾಲ್ಯವಿವಾಹಕ್ಕೆ ತಡೆಯಾಜ್ಞೆ" ಪಡೆಯುವುದು. (ಸೆಕ್ಷನ್–13)

3. ಆಯಾ ಕ್ಷೇತ್ರ ವ್ಯಾಪ್ತಿಯಲ್ಲಿ ಕ್ರಮ ಸಂಖ್ಯೆ. **XV** ರಲ್ಲಿ ತಿಳಿಸಿದ ತಂಡದ ಸದಸ್ಯರು ತಕ್ಷಣ ಕುಟುಂಬಕ್ಕೆ ಭೇಟಿ ನೀಡಿ ಕುಟುಂಬ ಸದಸ್ಯರು, ಬಾಲಕಿ/ಬಾಲಕರಿಗೆ ಜಾಗೃತಿ ಮೂಡಿಸಿ ಮನವೊಲಿಸುವುದು. ಬಾಲ್ಯವಿವಾಹ ಮಾಡದಂತೆ ಕುಟುಂಬದ ಸದಸ್ಯರಿಂದ ಮುಚ್ಚಳಿಕೆ ಪತ್ರ ಬರೆಸಿಕೊಳ್ಳುವುದು.

4. ಮುಚ್ಚಳಿಕೆ ಪತ್ರವನ್ನು ತಕ್ಷಣವೇ ಜಿಲ್ಲಾ ನ್ಯಾಯಾಧೀಶರಿಗೆ ಸೂಕ್ತ ವಿಧಾನದಲ್ಲಿ ರವಾನಿಸಿ ಬಾಲ್ಯವಿವಾಹಕ್ಕೆ ತಡೆಯಾಜ್ಞೆಯನ್ನು ಪಡೆಯಬೇಕು. ವಯಸ್ಸಿನ ದೃಢೀಕರಣ, ಬಾಲಕ/ ಬಾಲಕಿ ಮತ್ತು ಕುಟುಂಬದವರ ಹೇಳಿಕೆ ಮತ್ತು ಇತರ ಸಾಕ್ಷಿಗಳನ್ನು ಸಂಗ್ರಹಿಸಿ ಲಗತ್ತಿಸಬೇಕು. ತಡೆಯಾಜ್ಞೆಯ ಪ್ರತಿಯನ್ನು ಸಂಬಂಧಿತ ಕುಟುಂಬ, ವ್ಯಕ್ತಿ ಅಥವಾ ಸಂಘಟನೆ (ಸಾಮೂಹಿಕ ವಿವಾಹದ ಸಂದರ್ಭದಲ್ಲಿ ಅಧಿಕೃತವಾಗಿ ತಲುಪಿಸಬೇಕು. (ಸೆಕ್ಷನ್–13)

5. ಮುಚ್ಚಳಿಕೆ ಪತ್ರ ಬರೆಸಿಕೊಂಡು ಬಂದ ನಂತರ ಸ್ಥಳದಲ್ಲಿಯೇ ಮುಚ್ಚಳಿಕೆಯಲ್ಲಿ ಬರೆಸಿಕೊಂಡಂತೆ ವಿವಾಹ ಮಾಡುತ್ತಿಲ್ಲವೆಂಬುದನ್ನು ಖಾತ್ರಿಪಡಿಸಿಕೊಳ್ಳಲು ಸ್ಥಳೀಯ 3 ಅಧಿಕಾರಿಗಳ ತಂಡ ತಯಾರಿಸಿ ಅವರು ಪ್ರಾರಂಭದ 2 ತಿಂಗಳು, ತಿಂಗಳಿಗೆ 2 ಸಲ

ಮನೆ ಭೇಟಿ ಮಾಡಿ ಮದುವೆ ಮಾಡುತ್ತಿಲ್ಲ ಎಂಬುದನ್ನು ಖಾತ್ರಿಪಡಿಸಿಕೊಳ್ಳಬೇಕು. ಮನೆ ಭೇಟಿ ಮಾಡಿ ಅನುಸರಣೆ ಮಾಡಿದ್ದರ ಬಗ್ಗೆ ಪ್ರತ್ಯೇಕ ನಮೂನೆಯಲ್ಲಿ ಅಧಿಕಾರಿಗಳು ದಿನಾಂಕ, ಸಮಯ ನಮೂದಿಸಿ ಸಹಿ ಮಾಡಿಸಿಕೊಳ್ಳುವುದು. ನಂತರ ಮುಂದಿನ 3 ತಿಂಗಳು, ತಿಂಗಳಿಗೆ 1 ಸಲ ಮನೆ ಭೇಟಿ ಮಾಡುವುದು. ನಂತರ 18 ವರ್ಷದ ತನಕ ಮದುವೆ ಮಾಡುವುದಿಲ್ಲವೆಂದು ಕಂಡುಬಂದಲ್ಲಿ ಪ್ರತಿ ತಿಂಗಳು 3 ಸದಸ್ಯರಲ್ಲಿ ಒಬ್ಬರಾದರೂ 2 ತಿಂಗಳಿಗೆ 1 ಸಲ ಭೇಟಿ ಮಾಡಿ ನಮೂನೆಯಲ್ಲಿ ಸಹಿ ಮಾಡಿ ಮಾಸಿಕ ವರದಿಯನ್ನು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಗೆ ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕಕ್ಕೆ ಕಳುಹಿಸಬೇಕು.

6. ಪೋಷಕರು ಮುಚ್ಚಳಿಕೆ ಪತ್ರವನ್ನು ಕೊಟ್ಟಮೇಲೂ ವಿವಾಹವನ್ನು ಜರುಗಿಸಿದ್ದೇ ಆದಲ್ಲಿ, ಕರಾರಿಗೆ ಬದ್ಧರಾಗಿಲ್ಲವೆಂಬುದನ್ನು ಖಾತರಿ ಪಡಿಸಿ ಅವರ ಮೇಲೆ ಮೊಕದ್ದಮೆ ಹೂಡಬಹುದು.

7. ಬಾಲ್ಯವಿವಾಹಕ್ಕೆ ಸಿದ್ಧತೆ /ನಿಶ್ಚತಾರ್ಥ ನಡೆಸಿದಾಗಲೂ **XV** ರಲ್ಲಿ ತಿಳಿಸಿದಂತೆ ಕ್ರಮ ಕೈಗೊಳ್ಳಬೇಕು.

8. ಬಾಲಕಿ/ಬಾಲಕ ಅಪ್ರಾಪ್ತರೆಂಬ ಬಗ್ಗೆ ಸೂಕ್ತ ದಾಖಲೆ ಸಂಗ್ರಹ. ಜನನ ಪ್ರಮಾಣ ಪತ್ರ, ಶಾಲೆ ಧೃಡೀಕರಣ ಪತ್ರ ಸ್ಥಳೀಯ ಶಾಲೆಗೆ ಭೇಟಿ ನೀಡಿ ವಯಸ್ಸಿನ ದಾಖಲೆ ಪಡೆಯುವುದು ಅವಶ್ಯವಿದ್ದಲ್ಲಿ ಮಕ್ಕಳ ಕಲ್ಯಾಣ ಸಮಿತಿ ಮುಖಾಂತರ ಕರ್ನಾಟಕ ಬಾಲ್ಯವಿವಾಹ ನಿಷೇಧ ನಿಯಮಗಳು–2014ರ ನಿಯಮಾನುಸಾರ ವೈದ್ಯಕೀಯ ಪರೀಕ್ಷೆ ಮಾಡಿಸಿ ದೃಢೀಕರಣ ಪಡೆಯುವುದು.

9. ಮನೆ ಭೇಟಿ.

10. ಜಾಗೃತಿ, ಅರಿವು, ಮನವೊಲಿಸುವುದು.

11. ಶಾಲೆಯಲ್ಲಿ ಓದುತ್ತಿರುವ ಮಕ್ಕಳಾಗಿದ್ದರೆ ಶಿಕ್ಷಣ ಮುಂದುವರಿಸಲು ಸಲಹೆ ಹಾಗೂ ಶಿಕ್ಷಣ ತೊಡಕಾಗದಂತೆ ಸೂಕ್ಷ್ಮವಾಗಿ ಘಟನೆಯನ್ನು ನಿರ್ವಹಿಸಿ, ಶಾಲೆ / ಕಾಲೇಜು ಮುಂದುವರಿಸುವಂತೆ ಮಾಡುವುದು.

12. ಕದ್ದುಮುಚ್ಚಿ ಮದುವೆ ಮಾಡಬಹುದೆಂಬ ಸಂಶಯ ಕಂಡಲ್ಲಿ ಬಾಲಕಿಯ / ಬಾಲಕನನ್ನು ಮಕ್ಕಳ ಕಲ್ಯಾಣ ಸಮಿತಿ ಮುಖಾಂತರ ತಾತ್ಕಾಲಿಕವಾಗಿ ಬಾಲಮಂದಿರಕ್ಕೆ ದಾಖಲು ಮಾಡಬೇಕು.

13. ಕರಾರು ಪತ್ರದ ಅನುಸರಣೆಗೆ ಸ್ಥಳೀಯ 3 ಜನ ಸದಸ್ಯರ ನೇಮಕ.

14. ಪ್ರತಿ ತಿಂಗಳಿಗೊಮ್ಮೆ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ತಂಡದಿಂದ ಆಪ್ತ ಸಲಹೆಗಳನ್ನು ನೀಡುವುದು.

15. ಬಾಲಕಿ/ಬಾಲಕನಿಗೆ ಶಿಕ್ಷಣ, ಜೀವನ ಕೌಶಲ್ಯ, ವೃತ್ತಿ ಶಿಕ್ಷಣದ ಮಾಹಿತಿ ನೀಡಿ ಸ್ವ-ಅಭಿವೃದ್ಧಿ ಶಿಕ್ಷಣಕ್ಕೆ ವ್ಯವಸ್ಥೆ ಮಾಡುವುದು.

16. ನಿಗದಿತ ನಮೂನೆಯಲ್ಲಿ ಅನುಸರಣೆ / ಮನೆ ಭೇಟಿಯ ಬಗ್ಗೆ ದಿನಾಂಕ / ಸಮಯ ಭೇಟಿ ಮಾಡಿದ ವಿವರ ದಾಖಲು, ಈ ವರದಿಯನ್ನು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಮುಖಾಂತರ ಜಿಲ್ಲಾ ಮಕ್ಕಳ ರಕ್ಷಣಾ ಘಟಕಕ್ಕೆ ನೀಡುವುದು ಮತ್ತು ಬಾಲಕಿಗೆ 18 ವರ್ಷ ಮತ್ತು ಬಾಲಕನಿಗೆ 21 ವರ್ಷ ವಯಸ್ಸು ಆಗುವವರೆಗೆ ಅನುಸರಣೆ ಮಾಡುವುದು.

17. ಅರ್ಧದಲ್ಲಿ ಶಾಲೆ ಬಿಟ್ಟಿದ್ದರೆ 7ನೇ ಮತ್ತು 10ನೇ ತರಗತಿಯ ನೇರ ಪರೀಕ್ಷೆಗೆ ಹಾಜರಾಗಲು ಬೇಕಾದ ಎಲ್ಲಾ ವ್ಯವಸ್ಥೆ ಒದಗಿಸುವುದು ಹಾಗೂ ಜೀವನ ಕೌಶಲ್ಯ ನೀಡುವುದು.

18. ಶಾಲೆಗೆ ಹೋಗುತ್ತಿರುವ ಮಗುವಾಗಿದ್ದಲ್ಲಿ ಶಿಕ್ಷಣ ಮುಂದುವರಿಸಲು ಸಹಕಾರ ಮತ್ತು ಸೂಕ್ತ ಯೋಜನೆಯನ್ನು ಕಲ್ಪಿಸಿ ಮಗುವಿನ / ಮಕ್ಕಳ ವೈಯುಕ್ತಿಕ ರಕ್ಷಣಾ ಮತ್ತು ಪೋಷಣಾ ಯೋಜನೆ ತಯಾರಿಸಿ (Individual Care Plan) ಅದರಂತೆ ಅನುಷ್ಠಾನಕ್ಕೆ ತರುವುದು.

## XVII. ಬಾಲ್ಯವಿವಾಹದ ಹಿಂದಿನ ದಿನ ಅಥವಾ ಮದುವೆಯ ದಿನ ಶಾಸ್ತ್ರ ಮುಗಿಸುವ ಮುನ್ನ (ತಾಳಿ ಕಟ್ಟುವ) ಮಾಹಿತಿ/ದೂರು ಬಂದಾಗ ತಕ್ಷಣ ಕೈಗೊಳ್ಳಬೇಕಾದ ರಕ್ಷಣಾ ಕ್ರಮಗಳು.

1. ಸ್ಪಷ್ಟ ದೂರು / ಮಾಹಿತಿ ಸ್ವೀಕಾರ.

2. ತಕ್ಷಣ ಸ್ಥಳೀಯ ಸಂಪರ್ಕ ಜಾಲ ಮತ್ತು ಸ್ಥಳೀಯ ಎಲ್ಲಾ ಬಾಲ್ಯವಿವಾಹ ನಿಷೇಧ ಅಧಿಕಾರಿಗಳೊಂದಿಗೆ ತಕ್ಷಣ ಸಂಪರ್ಕ ಬೆಳೆಸಿ (30 ನಿಮಿಷದ ಒಳಗಾಗಿ) ಘಟನೆ ಸತ್ಯಾಸತ್ಯತೆ ಅರಿಯುವುದು.

3. ಕ್ರಮ ಸಂಖ್ಯೆ XV ರಲ್ಲಿ ತಿಳಿಸಿರುವಂತೆ ತಂಡ ಸಿದ್ಧಪಡಿಸಿಕೊಳ್ಳುವುದು.

4. ಒಬ್ಬರು ಬಾಲ್ಯವಿವಾಹ ನಿಷೇಧಾಧಿಕಾರಿ, ಪೊಲೀಸ್ ಸಿಬ್ಬಂದಿ, ಮಹಿಳಾ ಸಿಬ್ಬಂದಿ ಕಡ್ಡಾಯ. ತಂಡದಲ್ಲಿರಬೇಕಾದ ಅಧಿಕಾರಿಗಳು ಜೊತೆಯಲ್ಲಿ ಕರೆದುಕೊಂಡು ಹೋಗಬೇಕು.

5. ಭೇಟಿ ನೀಡುವಾಗ ವಾಹನ ದೂರ ನಿಲ್ಲಿಸಿ ಯಾವುದೇ ದಾಳಿ (Attack) ಮಾಡದೇ ಸೌಜನ್ಯದಿಂದ ನೇರವಾಗಿ ಸ್ಥಳಕ್ಕೆ ಹೋಗಿ ಬಾಲಕ/ಬಾಲಕಿಯ ತಂದೆ-ತಾಯಿ/ ಇಬ್ಬರು ಸಂಬಂಧಿಕರನ್ನು ಕರೆಸಿ ವಧು/ವರರ ವಯಸ್ಸಿನ ದಾಖಲೆ ಕೇಳುವುದು.

6. ಯಾರಾದರೂ ಒಬ್ಬರ ದಾಖಲೆ ಒದಗಿಸದಿದ್ದಲ್ಲಿ ಯಾವುದೇ ಗದ್ದಲ, ಗಲಾಟೆ ಇಲ್ಲದೇ ಸೂಕ್ಷ್ಮವಾಗಿ ಕುಟುಂಬದವರೊಂದಿಗೆ ವಧು-ವರರನ್ನು ನೋಡುವುದು. ಮೇಲ್ನೋಟಕ್ಕೆ ವಯಸ್ಸು ಆಗಿದೆ ಎಂದು ಕಂಡು ಬಂದಲ್ಲಿ ದಾಖಲೆಗೆ ಒತ್ತಾಯ.

7. ವಧು-ವರರನ್ನು ನೋಡಿದಾಗ ವಯಸ್ಸಾಗಿಲ್ಲ ಅಪ್ರಾಪ್ತರು ಎಂಬುದು ಸ್ಪಷ್ಟವಾಗಿ ಮೇಲ್ನೋಟಕ್ಕೆ ಕಂಡುಬಂದರೆ ಕುಟುಂಬದವರನ್ನೆಲ್ಲಾ ಪ್ರತ್ಯೇಕವಾಗಿ ಕರೆದು ಮನವೊಲಿಸಿ, ಆಪ್ತ ಸಮಾಲೋಚನೆ ನಡೆಸಿ ಮದುವೆ ಮಾಡಬೇಡಿ ಎಂದು ಒಪ್ಪಿಸಿ ಮದುವೆಯನ್ನು ನಿಲ್ಲಿಸುವುದು ಹಾಗೂ ಮುಚ್ಚಳಿಕೆ ಪತ್ರ ಬರೆಯಿಸಿಕೊಳ್ಳುವುದು. ಆನಂತರವೂ ಮದುವೆ ಮಾಡಬಹುದು ಎಂಬ ಸಂಶಯವು ತಂಡಕ್ಕೆ ಬಂದಾಗ ಬಾಲಕಿ-ಬಾಲಕನನ್ನು ರಕ್ಷಿಸಿ 'ಮಕ್ಕಳ ಕಲ್ಯಾಣ ಸಮಿತಿ' ಮುಂದೆ ಹಾಜರುಪಡಿಸಿ ಬಾಲಮಂದಿರಗಳಲ್ಲಿ ದಾಖಲಿಸಿ, ಸೂಕ್ತ ಆಪ್ತ ಸಮಾಲೋಚನಾ ಕ್ರಮ ಕೈಗೊಳ್ಳುವುದು. ಕುಟುಂಬದವರು ಬಾಲಕಿ-ಬಾಲಕನಿಗೆ 18-21 ವರ್ಷ ಆಗುವ ತನಕ ಮದುವೆ ಮಾಡುವುದಿಲ್ಲ ಎಂದು ಖಾತ್ರಿ ಆದಮೇಲೆ ಮಕ್ಕಳ ಕಲ್ಯಾಣ ಸಮಿತಿ ಆದೇಶದಂತೆ ಕ್ರಮವಹಿಸುವುದು. ಮನೆಗೆ ಕಳುಹಿಸಿ ಕೊಡುವುದು.

8. ಪರಿಸ್ಥಿತಿ ಕೈ ಮೀರಿದಲ್ಲಿ ಪೊಲೀಸ್ ಅಧಿಕಾರಿಗಳ ಸಹಾಯ ಪಡೆದು ಬಾಲಕಿ/ಬಾಲಕನನ್ನು ರಕ್ಷಿಸಿ ಕರೆತಂದು ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಹಾಜರುಪಡಿಸುವುದು ಅಥವಾ ಗಂಭೀರ ಸಂದರ್ಭಗಳು ಇದ್ದಲ್ಲಿ ಸರ್ಕಾರಿ ವಕೀಲರು/ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ವಕೀಲ ಸಿಬ್ಬಂದಿಯವರ ಸಹಾಯ ಪಡೆದು

ಬಾಲ್ಯವಿವಾಹ ನಿಷೇಧ ಕಾಯ್ದೆ-2006ರ ಸೆಕ್ಷನ್ -13 (1) ಸ್ಥಳೀಯ ಕೋರ್ಟ್‌ನಲ್ಲಿ ತಡೆಯಾಜ್ಞೆಗೆ ಅರ್ಜಿ ಸಲ್ಲಿಸಿ ನ್ಯಾಯಾಧೀಶರಿಂದ ತಡೆಯಾಜ್ಞೆ ಆದೇಶವನ್ನು ಪಡೆದು ಪೊಲೀಸರ ಸಹಾಯ ಪಡೆದು ಮದುವೆಯನ್ನು ನಿಲ್ಲಿಸುವುದು.

9. ಮಕ್ಕಳ ಕಲ್ಯಾಣ ಸಮಿತಿಯು ಸೂಕ್ತ ಸಮಯದಲ್ಲಿ ಬಾಲಕಿಗೆ / ಬಾಲಕನಿಗೆ ಯಾವುದೇ ಮಾನಸಿಕ ತೊಂದರೆಯಾಗದಂತೆ ತಕ್ಷಣ ಧೈರ್ಯ ತುಂಬಿ ಅವರ (ಮಕ್ಕಳ) ತಪ್ಪಿಲ್ಲ ಎಂಬ ಆಪ್ತ ಸಮಾಲೋಚನೆ ನಡೆಸಲು ವ್ಯವಸ್ಥೆ ಮಾಡುವುದು.

10. ಒಂದು ಪಕ್ಷ ಮಗುವನ್ನು ಕುಟುಂಬಕ್ಕೆ ಒಪ್ಪಿಸಿದಲ್ಲಿ ಅನುಸರಣೆಯ ಜವಾಬ್ದಾರಿಯನ್ನು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಮೂಲಕ ಸ್ಥಳೀಯ ಬಾಲ್ಯ ವಿವಾಹ ನಿಷೇಧಾಧಿಕಾರಿಗೆ ಕೊಡಬೇಕು.

## XVIII. ಬಾಲ್ಯ ವಿವಾಹ ನಡೆದ ಪ್ರಕರಣಗಳಲ್ಲಿ ಕೈಗೊಳ್ಳಬೇಕಾದ ಕ್ರಮಗಳು ಹಾಗೂ ರಕ್ಷಿಸಲ್ಪಟ್ಟ ಬಾಲಕಿ/ಬಾಲಕರ ಪುನರ್ವಸತಿಗೆ ಕ್ರಮಗಳು:

1. ಬಾಲ್ಯವಿವಾಹ ನಿಷೇಧ ಕರ್ನಾಟಕ ತಿದ್ದುಪಡಿ ಕಾಯ್ದೆ 2016ರ ಸೆಕ್ಷನ್ 1 (ಎ)ರನ್ವಯ "every child marriage solemnized on or after the date of coming into force of the Prohibition of Child Marriage (Karnataka Amendment Act, 2016 (03.03.2018) shall be void abinitio". ಆದ್ದರಿಂದ ಈ ಕಾಯ್ದೆ ಜಾರಿಗೆ ಬಂದ ದಿನಾಂಕ ಅಂದರೆ 03/03/2018 ರಿಂದ ಒಂದು ವೇಳೆ ಬಾಲ್ಯವಿವಾಹ ಜರುಗಿದ್ದಲ್ಲಿ ನಿಯಮಾನುಸಾರ ಬಾಲ್ಯವಿವಾಹ ಮಾಡಿಕೊಂಡವರ, ನಡೆಸಿದವರು, ಕುಮ್ಮಕ್ಕು ನೀಡಿದವರ ವಿರುದ್ಧ ಎಫ್.ಐ.ಆರ್. ದಾಖಲಿಸಿ ಕಾನೂನು ರೀತಿ ಅಗತ್ಯ ಕ್ರಮ ತೆಗೆದುಕೊಳ್ಳತಕ್ಕದ್ದು. ಅಗತ್ಯವಿದಲ್ಲಿ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದಿಂದ ನೆರವು ಪಡೆಯುವುದು.

2. ಬಾಲ್ಯವಿವಾಹಕ್ಕೆ ಒಳಗಾದ ಬಾಲಕಿ/ಬಾಲಕರ ಪುನರ್ವಸತಿಗಾಗಿ ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳುವುದು.

- ಮೊದಲಿಗೆ ಬಾಲಕಿ/ಬಾಲಕನನ್ನು ಮಕ್ಕಳ ಕಲ್ಯಾಣ ಸಮಿತಿ ಮುಂದೆ ಹಾಜರು ಪಡಿಸಬೇಕು.
- ಮಕ್ಕಳ ಕಲ್ಯಾಣ ಸಮಿತಿಯ ಆದೇಶದಂತೆ ಆಪ್ತ ಸಮಾಲೋಚನೆ ನಡೆಸಿ, ಅಗತ್ಯವಿದ್ದಲ್ಲಿ ಆರೋಗ್ಯ ತಪಸಾಣೆ ನಡೆಸುವುದು. ಸಮಿತಿಯ ಆದೇಶದ ಮೇರೆಗೆ ಬಾಲಕಿ/ಬಾಲಕನ ರಕ್ಷಣೆಗೆ ಅಗತ್ಯ ಕ್ರಮ ತೆಗೆದುಕೊಳ್ಳುವುದು.
- ಸಾಮಾಜಿಕ ತನಿಖಾ ವರದಿ(Social Investigation Report) ಮಾಡಿಸಿ ವೈಯಕ್ತಿಕ ಕೇರ ಪ್ಲಾನ್(Individual Care Plan) ಸಿದ್ಧಪಡಿಸುವುದು.
- ಶಿಕ್ಷಣಕ್ಕೆ ಆದ್ಯತೆ ನೀಡಬೇಕಾಗಿರುವುದರಿಂದ ವೈಯಕ್ತಿಕ ಕೇರ ಪ್ಲಾನ್ ಆಧರಿಸಿ ಮೊದಲು ಶಿಕ್ಷಣ ಮುಂದುವರೆಸಲು ಅಗತ್ಯ ಕ್ರಮ ತೆಗೆದುಕೊಳ್ಳುವುದು (ವಿದ್ಯಾರ್ಥಿ ವೇತನ, ಐ.ಸಿ.ಪಿ.ಎಸ್. ಅಡಿಯಲ್ಲಿ ಪ್ರಾಯೋಜಿಕತ್ವಕ್ಕಾಗಿ ಕ್ರಮ ಅಥವಾ ಬಾಲಮಂದಿರ/ವಿದ್ಯಾರ್ಥಿ ನಿಲಯಕ್ಕೆ ದಾಖಲು ಹಾಗೂ ಇತರೆ).

- ಶಿಕ್ಷಣ ಮುಂದುವರೆಸಲು ಸಾಧ್ಯವಿಲ್ಲದೆ ಇದ್ದಲ್ಲಿ ಜೀವನ ಕೌಶಲ್ಯ/ ವ್ಯಕ್ತಿ ವಿಕಸನ / ವೃತ್ತಿ ತರಬೇತಿ ನೀಡುವುದು.
- ಬಾಲಕಿ/ಬಾಲಕರನ್ನು ಸಮಾಜದ ಮುಖ್ಯವಾಹಿನಿಗೆ ತರಲು ಮತ್ತು ಅವರ ಸರ್ವತೋಮುಖ ಅಭಿವೃದ್ಧಿಗಾಗಿ ಸರಕಾರದ ಇತರೆ ಇಲಾಖೆಗಳ ಸೌಲಭ್ಯಗಳನ್ನು ನೀಡುವ ಬಗ್ಗೆ ಅಗತ್ಯ ಕ್ರಮ ತೆಗೆದುಕೊಳ್ಳುವುದು.

## XIX. ಬಾಲ್ಯ ವಿವಾಹಕ್ಕೊಳಗಾದ ಬಾಲಕಿ/ಬಾಲಕನ ಗೌಪ್ಯತೆ ಕಾಪಾಡುವ ಬಗ್ಗೆ.

1. ಬಾಲ್ಯವಿವಾಹ ಮಕ್ಕಳ ಮೇಲೆ ಆಗುತ್ತಿರುವ ಅಪರಾಧ. ಹೀಗಾಗಿ ಬಾಲ ನ್ಯಾಯ ಕಾಯಿದೆಯ ನಿಯಮಗಳನ್ನು ಪಾಲಿಸಿ, ಮಕ್ಕಳ ಸ್ವಾಭಿಮಾನ,ಘನತೆ,ಗುರುತಿಸುವಿಕೆಗೆ ತೊಂದರೆಯಾಗದಂತೆ ಸಂಬಂಧಿಸಿದವರೆಲ್ಲರೂ ಎಚ್ಚರವಹಿಸಬೇಕು.
2. ಮಾಧ್ಯಮಗಳಿಗೆ ಮಾಹಿತಿ ನೀಡುವುದೇ ಆದಲ್ಲಿ ಅದರಲ್ಲಿ ಮಕ್ಕಳ ಹೆಸರು, ಚಿತ್ರ ಪ್ರಕಟಿಸದಂತೆ ತಿಳಿಸುವುದು.ಅಧಿಕಾರಿಗಳು ಮಾದ್ಯಮಗಳಿಗೆ ಮಾಹಿತಿ ನೀಡುವುದೇ ಆದಲ್ಲಿ ಅದನ್ನು ಬಾಲ್ಯವಿವಾಹದ ವಿರುದ್ಧ ಸಾರ್ವಜನಿಕರಿಗೆ ಅರಿವು ಮತ್ತು ಎಚ್ಚರಿಕೆ ನೀಡುವ ಉದ್ದೇಶವನ್ನು ಹೊಂದಿರಬೇಕು.
3. ಪತ್ರಿಕೆ ಅಥವಾ ದೃಶ್ಯ ಮಾಧ್ಯಮದವರು ಮಕ್ಕಳ ಹೆಸರು, ವಿವರ, ಛಾಯಾಚಿತ್ರ, ವಿಡಿಯೋ ಪ್ರಕಟಿಸುವಂತಿಲ್ಲ/ ಪ್ರಸಾರವನ್ನು ಯಾರೂ ಮಾಡಬಾರದು ಎಂದು ಎಚ್ಚರಿಕೆ ನೀಡಬೇಕು.
4. ಪ್ರಕರಣಕ್ಕೆ ಸಂಬಂಧಿಸಿದಂತೆ ಮಕ್ಕಳ ಛಾಯಚಿತ್ರಗಳನ್ನು ಯಾವುದೇ ಸಾಮಾಜಿಕ ಜಾಲತಾಣದಲ್ಲಿ ಯಾರೂ ಕೂಡಾ ಪೋಸ್ಟ್ ಮಾಡಕೂಡದು.
5. ಸಾರ್ವಜನಿಕರಿಗೆ ಎಚ್ಚರಿಕೆ, ಅರಿವು, ಜಾಗೃತಿಗಾಗಿ ಮಾತ್ರ 'ಬಾಲ್ಯವಿವಾಹಕ್ಕೆ ಸಂಬಂಧಿಸಿದಂತೆ ಇಷ್ಟು ಜನರ ಮೇಲೆ ಪ್ರಕರಣ ದಾಖಲಿಸಿ ಇಷ್ಟು ಜನರನ್ನು ಬಂಧಿಸಲಾಗಿದೆ' ಎಂಬ ಸಾಮಾನ್ಯ ಮಾಹಿತಿ ಅಷ್ಟೇ ನೀಡಬೇಕು ಜಿಲ್ಲೆ/ ತಾಲ್ಲೂಕು ಹೆಸರು ಮಾತ್ರ ಬಳಸಿ ಪ್ರಕಟಿಸಬೇಕು.
6. ಮಕ್ಕಳು ಮತ್ತು ಅವರ ಕುಟುಂಬದ ವಿವರಗಳು ಬಹಿರಂಗವಾಗದಂತೆ ಎಚ್ಚರ ವಹಿಸಬೇಕು.
7. ದೂರು ಕೊಟ್ಟವರ ಗೌಪ್ಯತೆ ಕಾಪಾಡುವುದು.

7. ದೂರು ಕೊಟ್ಟವರ ಗೌಪ್ಯತೆ ಕಾಪಾಡುವುದು.

## ಸಾಮೂಹಿಕ ವಿವಾಹಗಳಲ್ಲಿ ಬಾಲ್ಯ ವಿವಾಹಗಳನ್ನು ತಡೆಯಲು ಕಡ್ಡಾಯ ಪ್ರಕ್ರಿಯೆಗಳು

## XX. ಸಾಮೂಹಿಕ ವಿವಾಹಗಳಲ್ಲಿ ಬಾಲ್ಯವಿವಾಹಗಳನ್ನು ತಡೆಗಟ್ಟುವ ಬಗ್ಗೆ:

☞ ಆಯಾ ಕ್ಷೇತ್ರ ವ್ಯಾಪ್ತಿಯ ಬಾಲ್ಯವಿವಾಹ ನಿಷೇಧಾಧಿಕಾರಿಗಳು ಅವರ ಕ್ಷೇತ್ರ ವ್ಯಾಪ್ತಿಯಲ್ಲಿ ಸಾಮೂಹಿಕ ಮದುವೆ ಮಾಡುವ ಎಲ್ಲಾ ದೇವಸ್ಥಾನಗಳು, ಮಠಗಳು, ಸಂಘ–ಸಂಸ್ಥೆಗಳು, ರಾಜಕೀಯ ಪಕ್ಷಗಳಿಗೆ ಪ್ರತ್ಯೇಕ ತರಬೇತಿ ನೀಡಿ. ಕಾಯ್ದೆ, ನಿಯಮ, ಕ್ರಮಗಳ ಬಗ್ಗೆ ಜಾಗೃತಿ ಮೂಡಿಸಿ ಈ ಕೆಳಗಿನ ಎಲ್ಲ ಸುತ್ತೋಲೆಗಳ ಪ್ರತಿಗಳನ್ನು ಕಡ್ಡಾಯವಾಗಿ ನೀಡತಕ್ಕದ್ದು.

☞ ಬಾಲ್ಯವಿವಾಹ ನಿಷೇಧ ಕಾಯ್ದೆ –2006ರ ಕನ್ನಡ ಪ್ರತಿ

☞ ಬಾಲ್ಯವಿವಾಹ ನಿಷೇಧ (ಕರ್ನಾಟಕ) ನಿಯಮಗಳು 2014ರ ಕನ್ನಡ ಪ್ರತಿ

☞ ಸಾಮೂಹಿಕ ಮದುವೆ ಮಾಡುವ ಆಯೋಜಕರು ಸೂಕ್ತ ನೊಂದಣಿ, ವರ್ಷಕ್ಕೊಮ್ಮೆ ನವೀಕರಣ, ಸಂಸ್ಥೆಯ ಚಟುವಟಿಕೆಗಳ ಪಟ್ಟಿಯಲ್ಲಿ ಸಾಮೂಹಿಕ ಮದುವೆ ಆಯೋಜಕರು ಎಂಬ ಅಂಶ ಸೇರಿಸುವುದನ್ನು ಕಡ್ಡಾಯಗೊಳಿಸುವುದು.

♦ **ಆಯೋಜಕರುಗಳ ನೋಂದಣಿ:–** ಸಾಮೂಹಿಕ ವಿವಾಹಗಳನ್ನು ಆಯೋಜಿಸುವ ಎಲ್ಲಾ ಆಯೋಜಕರು ವ್ಯಕ್ತಿಗಳಾಗಿರಲಿ, ಟ್ರಸ್ಟ್‌ಗಳಾಗಿರಲಿ, ಧರ್ಮದಾಯಿಗಳಾಗಿರಲಿ, ಸಂಸ್ಥೆಗಳಾಗಿರಲಿ, ಮತ್ತು ದೇವಸ್ಥಾನ ಪ್ರಾಧಿಕಾರಿಗಳಾಗಿರಲಿ ಅವುಗಳ ಕಂದಾಯ ಇಲಾಖೆಯ ಅಧೀನದಲ್ಲಿರುವ ಜಿಲ್ಲಾ ಅಧಿಕಾರಿಯವರಲ್ಲಿ ನೋಂದಣಿ ಮಾಡಿಸಿಕೊಳ್ಳತಕ್ಕದ್ದು.

♦ **ಸಾಮೂಹಿಕ ವಿವಾಹಗಳನ್ನು ನಡೆಸಲು ಅನುಮತಿ:–** ಆಯೋಜಕರು, ಸಾಮೂಹಿಕ ವಿವಾಹಗಳನ್ನು ನಡೆಸಲು ಅನುಮತಿಯನ್ನು ಕೋರಿ ತಾಲ್ಲೂಕಿನ ತಹಸೀಲ್ದಾರರಿಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು. ಅರ್ಜಿಯು ಈ ಮುಂದಿನ ದಾಖಲೆಗಳನ್ನು ಒಳಗೊಂಡಿರತಕ್ಕದ್ದು:–

1. ಸಾಮೂಹಿಕ ವಿವಾಹಗಳಲ್ಲಿ ಪಾಲ್ಗೊಳ್ಳುತ್ತಿರುವ ವಧುವಿನ ಮತ್ತು ವರನ ಪ್ರತ್ಯೇಕ ಭಾವಚಿತ್ರ.
2. ಜನನ ಪ್ರಮಾಣಪತ್ರ/ ಶಾಲಾ ಪ್ರಮಾಣ ಪತ್ರ/ ವಯಸ್ಸಿನ ರುಜುವಾತಿಗಾಗಿ ಸಾರ್ವಜನಿಕ ಆಸ್ಪತ್ರೆಯ ಸರ್ಕಾರಿ ವೈದ್ಯಾಧಿಕಾರಿಯಿಂದ ಪಡೆದ ವಯಸ್ಸಿನ ಪ್ರಮಾಣ ಪತ್ರ, (ವಯಸ್ಸಿನ ರುಜುವಾತು ಬಗ್ಗೆ ಹೆಚ್ಚಿನ ವಿವಗಳಿಗಾಗಿ ಅನುಬಂಧವನ್ನು ಅವಲೋಕಿಸುವುದು)

3. ಪಡಿತರ ಚೀಟಿ, ಚುನಾವಣಾ ಗುರುತಿನ ಚೀಟಿ, ಪಾಸ್ ಪೋರ್ಟ್, ವಾಹನ ಚಾಲನಾ ಪರವಾನಗಿ, ಇತ್ಯಾದಿ ರೂಪದಲ್ಲಿರುವ ವಾಸಸ್ಥಳದ ವಿಳಾಸ.

4. ಜೋಡಿಗಳ ಸಮ್ಮತಿಯೊಂದಿಗೆ, ವಧು ಮತ್ತು ವರರು ವಿವಾಹವಾಗುವ ವಯಸ್ಸಿನವರು ಎಂದು ಹೇಳುವ ಅವರ ಪೋಷಕರಿಬ್ಬರಿಂದ ಅಫಿಡಾವಿಟ್.

## XXI. ಬಾಲ್ಯವಿವಾಹ ನಿಷೇಧ ಅಧಿಕಾರಿಗಳು ಮರೆಯಬಾರದ ಕೆಲವು ಪ್ರಮುಖ ಅಂಶಗಳು:

ಯಾವುದೇ ಯೋಜನೆ, ಸೌಲಭ್ಯಗಳನ್ನು ಫಲಾನುಭವಿಗಳಿಗೆ ನೀಡುವಾಗ ಕಡ್ಡಾಯವಾಗಿ ಅರ್ಜಿದಾರರಿಂದ ತಮ್ಮ ಮಕ್ಕಳಿಗೆ ಬಾಲ್ಯವಿವಾಹ ಮಾಡುವುದಿಲ್ಲ ಎಂದು ಘೋಷಣಾ ಪತ್ರ (ಕರಾರು ಪತ್ರ)ಕ್ಕೆ ಸಹಿ ಪಡೆಯುವುದು ಹಾಗೂ ಎಲ್ಲಾ ಯೋಜನೆ, ಸೌಲಭ್ಯಗಳನ್ನು ನೀಡುವ ಅರ್ಜಿಗಳಲ್ಲಿ 'ಬಾಲ್ಯವಿವಾಹ ಶಿಕ್ಷಾರ್ಹ ಅಪರಾಧ' ಎಂದು ಕಡ್ಡಾಯವಾಗಿ ಮುದ್ರಣ ಮಾಡಿಸುವುದು ಮತ್ತು ಆ ಕುರಿತು ಸುತ್ತೋಲೆ ಪ್ರತಿ ನೀಡಬೇಕು. (ಇದನ್ನು ಎಲ್ಲಾ ಇಲಾಖೆಗಳಿಗೆ ಜಿಲ್ಲಾಧಿಕಾರಿಗಳ ಮೂಲಕ ಪ್ರತ್ಯೇಕ ಆದೇಶ ಹೊರಡಿಸಿ ಅನುಷ್ಠಾನಕ್ಕೆ ತರುವುದು) ಸುತ್ತೋಲೆ: ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಪತ್ರ ಸಂಖ್ಯೆ ಮಮಇ 170 ಮಮಲ 2011

## XXII. ಬಾಲ್ಯವಿವಾಹ ಮತ್ತು ಇತರ ಕಾಯಿದೆಗಳು:

- ಬಾಲ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯಿದೆ 2015(J J Act)ರ ಸೆ. 2(14)(xii) ರಂತೆ 18 ವರ್ಷ ಪೂರೈಸುವುದರೊಳಗೆ ಮದುವೆಗೆ ಗುರಿಯಾಗುವ ಆತಂಕವಿದ್ದು, ಆ ಮಗುವಿನ ಪೋಷಕರು, ಕುಟುಂಬದ ಸದಸ್ಯರು ಪಾಲಕರುಮತ್ತು ಯಾವುದೇ ಇತರ ವ್ಯಕ್ತಿಗಳಿಂದ ಅಂತಹ ಮದುವೆ ಆಗಿ ಬಿಡುವ ಸಾಧ್ಯತೆಯಿದೆಯೋ ಅಂತಹ ಮಕ್ಕಳನ್ನು ಪೋಷಣೆ ಮತ್ತು ರಕ್ಷಣೆ ಆವಶ್ಯಕತೆ ಇರುವ ಮಕ್ಕಳು ಎಂದು ಪರಿಗಣಿಸಲಾಗಿದೆ. ಇಂತಹ ಮಕ್ಕಳನ್ನು ರಕ್ಷಿಸಿ ಮಕ್ಕಳ ಕಲ್ಯಾಣ ಸಮಿತಿ ಮುಂದೆ ಹಾಜರುಪಡಿಸಬೇಕು.

- ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯಿದೆ (POCSO)2012ರಂತೆ, 18 ವರ್ಷದೊಳಗಿನ ಯಾವುದೇ ಮಗುವಿನ ಮೇಲೆ ಎಂತಹದೇ ರೀತಿಯ ಲೈಂಗಿಕ ಆಘಾತ, ಅಪರಾಧ ಆಗದಂತೆ ತಡೆಗಟ್ಟಲೇಬೇಕು. ಮಕ್ಕಳ ಒಪ್ಪಿಗೆ ಎನ್ನುವುದು ಇಲ್ಲಿ ಅನ್ವಯಿಸುವುದಿಲ್ಲ. ಬಾಲ್ಯವಿವಾಹಕ್ಕೀಡಾದ ಮಕ್ಕಳು ಲೈಂಗಿಕ ಸಂಪರ್ಕಕ್ಕೆ ಬರುವುದನ್ನು ಲೈಂಗಿಕ ಶೋಷಣೆ ಎಂದೇ ಪರಿಗಣಿಸಲಾಗುತ್ತಿದೆ.

- ಸರ್ವೋಚ್ಚ ನ್ಯಾಯಾಲಯದ ದಿನಾಂಕ: 11–10–2017ರ ತೀರ್ಪಿನಂತೆ 18 ವರ್ಷದೊಳಗಿನ

ಹೆಂಡತಿಯೊಡನೆ (ಒಪ್ಪಿಗೆ ಇದ್ದು ಅಥವಾ ಇಲ್ಲ ಎನ್ನುವ ಪ್ರಮೇಯವೇ ಇಲ್ಲದೆ) ಗಂಡ ಲೈಂಗಿಕ ಸಂಭೋಗ ನಡೆಸಿದ್ದಲ್ಲಿ ಅದನ್ನು 'ಅತ್ಯಾಚಾರ' ಎಂದು ಪರಿಗಣಿಸಿ ಮೊಕದ್ದಮ್ಮೆ ಹೂಡಬೇಕು. ಭಾರತೀಯ ದಂಡ ಸಂಹಿತೆಯಲ್ಲಿನ ಸೆಕ್ಷನ್ 375ರಲ್ಲಿ ನೀಡಿರುವ ಅಪವಾದ 2ನ್ನು (15 ವರ್ಷ ದಾಟಿದ ಹೆಂಡತಿಯೊಡನೆ ನಡೆಸುವ ಲೈಂಗಿಕ ಸಂಭೋಗ ಅತ್ಯಾಚಾರವಲ್ಲ) ಈ ಮೂಲಕ ರದ್ದುಪಡಿಸಲಾಗಿದೆ.

## XXIII. ಕೊನೆ ಮಾತು:

ಈ ಬಾಲ್ಯವಿವಾಹ ತಡೆಯ ಅನುಷ್ಠಾನಕ್ಕೆ, ಕಾರ್ಯವಿಧಾನದ ಈ ಕೈಪಿಡಿ ಬಾಲ್ಯವಿವಾಹ ತಡೆಯುವುದು, ನಿಲ್ಲಿಸುವುದು, ನಿರ್ಮೂಲನೆ ಮಾಡಲು ಒಂದು ಮಾರ್ಗದರ್ಶಿ ಕೈಪಿಡಿ. ಇದನ್ನು ಒಂದು ಸಲಹಾ ಕೈಪಿಡಿಯಾಗಿ ಸ್ವೀಕರಿಸಿ ಪ್ರಮುಖವಾಗಿ ಪಾಲುದಾರ ಇಲಾಖೆಗಳು ಕಾನೂನು, ನಿಯಮ, ಸರಕಾರಿ ಸುತ್ತೋಲೆಯಲ್ಲಿ ಹೇಳಿದಂತೆ ಕ್ರಮ ನಿರ್ವಹಿಸಬೇಕು. ಇದನ್ನು ಅಧಿಕಾರಿಗಳು ಮತ್ತು ಬಾಲ್ಯವಿವಾಹ ನಿಷೇಧಾಧಿಕಾರಿಗಳು ಸೂಕ್ಷ್ಮವಾಗಿ ಓದಿ ಇದರಂತೆ ಕಾರ್ಯನಿರ್ವಹಿಸತಕ್ಕದ್ದು, ಇದನ್ನು ಎಲ್ಲಾ ಇಲಾಖೆಯ ಬಾಲ್ಯವಿವಾಹ ನಿಷೇಧ ಅಧಿಕಾರಿಗಳು ಓದಿ ಅದರಂತೆಯೇ ಕೆಲಸ ನಿರ್ವಹಿಸುವುದು. ಗ್ರಾಮ, ದೇಶ, ಅಭಿವೃದ್ಧಿಯ ಮೂಲಕ ಮಾನವ ಅಭಿವೃದ್ಧಿ ಸಾಧ್ಯ. ಬಾಲ್ಯವಿವಾಹ ನಿರ್ಮೂಲನೆಯಿಂದ ಮಕ್ಕಳ ಅಭಿವೃದ್ಧಿ ಹೆಚ್ಚಲಿದೆ. ತನ್ಮೂಲಕ ಬಾಲಕಿಯರು/ಬಾಲಕರು ಅಭಿವೃದ್ಧಿಯಾಗಿ ಮುಂದೆ ಸಮಾಜದಲ್ಲಿ ಬಾಲಕಿಯರ ಸಬಲೀಕರಣದ ಮೂಲಕ ಮಹಿಳೆಯರು ಸ್ವಾವಲಂಬಿಯಾಗಿ ಮಹಿಳೆಯರು ಘನತೆಯ, ಸ್ವಾಭಿಮಾನದ ಬದುಕು ಸಾಗಿಸಲು ಸಾಧ್ಯ. ಅದಕ್ಕೆ ಈ ಮಾರ್ಗದರ್ಶಿ ಕೈಪಿಡಿ ಒಂದು ಸಾಕ್ಷಿಯಾಗಲಿ.

**"ಬಾಲ್ಯ ವಿವಾಹ ತಡೆಗಟ್ಟಿ: ಮಕ್ಕಳ ಬಾಳು ಬೆಳಗಿಸಿ"**

**ನಮೂನೆ-I**

**ವಿವಾಹದ ಉದ್ದೇಶಕ್ಕಾಗಿ ವಯಸ್ಸಿನ ಪ್ರಮಾಣಪತ್ರದ ಅರ್ಜಿ**

(ವಧು / ವರ/ ವಯಸ್ಕಾರಾಗಿದ್ದರೆ ತಂದೆತಾಯಿ /ಪೋಷಕರು ಮೂಲಕ)

ಮಗು / ವ್ಯಕ್ತಿಯ ಹೆಸರು :

ತಂದೆತಾಯಿ/ ಪೋಷಕರ ಹೆಸರು :

ವಿಳಾಸ :

ಮಾನ್ಯರೇ,

ನಾನು, ನನ್ನ ಮಗನ/ಮಗಳ/ ನನ್ನ ವಿವಾಹದ ಉದ್ದೇಶಕ್ಕಾಗಿ ಅವನ/ಅವಳ/ನನ್ನ ವಯಸ್ಸಿನ ಪ್ರಮಾಣಪತ್ರವನ್ನು ನೀಡಬೇಕಾಗಿ ಮನವಿ ಮಾಡುತ್ತೇನೆ, ನನ್ನ ಮಗ / ಮಗಳು/ ನಾನು ಅಧಿಕೃತವಾದ ಜನನ ಪ್ರಮಾಣಪತ್ರ ಹೊಂದಿರುವುದಿಲ್ಲ ಮತ್ತು ಅವಳು /ಅವನು/ ನಾನು ಶಾಲೆಗೆ ಹೋಗಿರುವುದಿಲ್ಲ, ಅಲ್ಲದೆ, ಯಾವುದೇ ಶಾಲಾ ಪ್ರಮಾಣ ಪತ್ರ ಹೊಂದಿರುವುದಿಲ್ಲ.

ಆದುದರಿಂದ ವಿವರವಾದ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ನನಗೆ ವಯಸ್ಸಿನ ಪ್ರಮಾಣ ಪತ್ರವನ್ನು ನೀಡಬೇಕಾಗಿ ಮನವಿ ಮಾಡುತ್ತೇನೆ.

**ಘೋಷಣೆ**

ಬಾಲ್ಯ ವಿವಾಹಗಳ ನಿಷೇಧ ಅಧಿನಿಯಮ, 2006 ರ ಮೇರೆಗೆ ಬಾಲ್ಯವಿವಾಹವು ದಂಡನೀಯ ಅಪರಾಧವೆಂದು ನಾನು ತಿಳಿದುಕೊಂಡಿದ್ದೇನೆ.

ದಿನಾಂಕ :

ಸ್ಥಳ : ಹೆಸರು ಮತ್ತು ಸಹಿ/ ಎಡಗೈ ಹೆಬ್ಬೆರಳಿನ ಗುರುತು ಅರ್ಜಿದಾರ

ಕಛೇರಿಯ ಉಪಯೋಗಕ್ಕಾಗಿ

ಸ್ವೀಕರಿಸುವ ವೈದ್ಯಕೀಯ ಸಿಬ್ಬಂದಿಯ ಹೆಸರು ಮತ್ತು ಸಹಿ ದಿನಾಂಕ: / /

ಕಛೇರಿ ಮೊಹರು.

**3. ವೈದ್ಯಾಧಿಕಾರಿಯು ನೀಡುವ ವಯಸ್ಸಿನ ಪ್ರಮಾಣ ಪತ್ರವನ್ನು ಈ ಕೆಳಗಿನ ನಮೂನೆ-**2ರಲ್ಲಿರುವಂತೆ ಸಲ್ಲಿಸತಕ್ಕದ್ದು. ಅದರಲ್ಲಿ ಮಗುವಿನ ಭಾವಚಿತ್ರ, ಮಗುವಿನ ಸಹಿ/ಹೆಬ್ಬೆರಳ ಗುರುತು, ತಂದೆತಾಯಿ/ಪೋಷಕರು ಹೆಸರು, ನಿವಾಸದ ವಿಳಾಸ, ವೈದ್ಯಕೀಯ ಪರೀಕ್ಷೆಯ ಕಾರ್ಯವಿಧಾನ, ವೈದ್ಯರ ಹೆಸರು, ಪದನಾಮ, ಸಹಿ ಮತ್ತು ಅವನ/ಅವಳ ನೋಂದಣಿ ಸಂಖ್ಯೆ ಇರತಕ್ಕದು.

## ನಮೂನೆ-2

ಸರ್ಕಾರಿ ಆಸ್ಪತ್ರೆ ಹೆಸರು ______________________

**ವಿವಾಹದ ಉದ್ದೇಶಕ್ಕಾಗಿ ವಯಸ್ಸಿನ ಪ್ರಮಾಣಪತ್ರ**

ಹೆಸರು :______________________ ವಯಸ್ಸು : ____

ಲಿಂಗ :________ ತಂದೆ / ತಾಯಿ/ ಪೋಷಕರ ಹೆಸರು :______________

ವಿಳಾಸ : ______________________________

______________________________

______________________________

ಗುರುತು ಚಿಹ್ನೆಗಳು : 1. ______________________

2. ______________________

ಆಸ್ಪತ್ರೆಯ ಹೊರರೋಗಿ ಸಂಖ್ಯೆ : __________ ದಿನಾಂಕ : ________ ಎಕ್ಸರೇ (ಅವಶ್ಯವಿದ್ದರೆ)

ಮಾಡಿದ ವೈದ್ಯಕೀಯ ಪರೀಕ್ಷೆ : (1) ಎತ್ತರ :-

(2) ತೂಕ :-

(3) ದೈಹಿಕ ಬೆಳವಣಿಗೆ ಸೂಚಿ (ಃಒಖ)

ರೇಡಿಯೋಗ್ರಾಫ್ ಮಾಡಿದ ಭಾಗ

(1)______________________

(2)______________________

(3)______________________

(4)______________________

(5)______________________

**ವರದಿ**

- ಕಾರ್ಪಲ್ ಬೋನ್ಸ್
- ಎಪಿಫೈಸಿಸ್ ಆಫ್ ಬೇಸ್ಡ್ ಆಫ್ ಫರ್ಸ್ ಮೆಟಾ ಕಾರ್ಪಲ್
- ಎಪಿಫೈಸಿಸ್ ಆಫ್ ಹೆಡ್ ಆಫ್ ಸೆಕೆಂಡ್, ಥರ್ಡ್, ಫೋರ್ತ್ ಅಂಡ್ ಫಿಫ್ತ್ ಮೆಟಾ ಕಾರ್ಪಲ್
- ಎಪಿಫೈಸಿಸ್ ಲೋಯರ್ ಅಚಿಡ್ ಆಫ್ ರೆಡಿಯಸ್ ಅಂಡ್ ಅಲ್ನಾ
- ಎಪಿಫೈಸಿಸ್ ಆಫ್ ಹೆಡ್ ಆಫ್ ರೆಡಿಯಸ್ ಅಂಡ್ ಆಲೆಕ್ರೋನಾನ್
- ಎಪಿಫೈಸಿಸ್ ಆಫ್ ಲೋಯರ್ ಅಂಡ್ ಆಫ್ ಹ್ಯಮರ್ಸ್

- ಎಪಿಫೈಸಿಸ್ ಆಫ್ ಲಿಲಾಕ್ ಕ್ರೆಸ್ಟ್
- ಟ್ರೈ ರೇಡಿಯೇಟ್ ಕ್ಫರ್ಟಿಲೇಜ್ (ವೈ-ಶೇಪ್ಡ್)
- ಎಪಿಫೈಸಿಸ್ ಆಫ್ ಪ್ರಾಕ್ಸಿಮಲ್ ಎಂಡ್ ಆರ್ ಫೆಮರ್
- (ದಟ್ ಈಸ್ ಹೆಡ್, ಗ್ರೇಟರ್ ಟ್ರೋಕ್ಯಾಂಟರ್ ಅಂಡ್ ಲೆಸ್ಸರ್ ಟ್ರೋಕ್ಯಾಂಟರ್
- ಎಪಿಫೈಸಿಸ್ ಆಫ್ ಲೋಯಲ್ ಎಂಡ್ ಆಫ್ ಫಿಮರ್
- ಎಪಿಫೈಸಿಸ್ ಆಫ್ ಅಪ್ಪರ್ ಎಚಿಡ್ ಆಫ್ ಟಿಬಿಯಾ ಅಂಡ್ ಫಿಬ್ಯುಲಾ
- ಮೋಲಾರ್ ಟೂತ್ ಆಫ್ ಮ್ಯಾಂಡಿಬಲ್

**ಅಭಿಪ್ರಾಯವನ್ನು ಸಮರ್ಥಿಸುವ ಆಧಾರಗಳು :**

ನನ್ನ ಅಭಿಪ್ರಾಯ ಮತ್ತು ಆಧಾರಗಳನ್ನು ಗಮನಿಸಿ, ನಾನು ಈ ಮೂಲಕ ಅವನ /ಅವಳ ವಯಸ್ಸು ______________________ ಎಂದು ಪ್ರಮಾಣೀಕರಿಸುತೇನೆ.

**ಘೋಷಣೆಗಳು**

ಬಾಲ್ಯವಿವಾಹ ನಿಷೇಧ ಅಧಿನಿಯಮ, 2006 ರ ಮೇರೆಗೆ ಬಾಲ್ಯವಿವಾಹವು ದಂಡನೀಯ ಅಪರಾಧವೆಂದು ನಮಗೆಲ್ಲ ತಿಳಿದಿದೆ.

ಪರೀಕ್ಷೆಗೊಳಪಟ್ಟ ಮಗುವಿನ/ವ್ಯಕ್ತಿಯ ಸಹಿ/ ಎಡಗೈ ಹೆಬ್ಬೆರಳಿನ ಗುರುತು

ಪೋಷಕರು / ಪಾಲಕರ ಸಹಿ/ಎಡಗೈ ಹೆಬ್ಬೆರಳಿನ ಗುರುತು

ನೀಡಿದ ದಿನಾಂಕ : ____________________

______________________________

ದಿನಾಂಕ: ______________________________

ಸ್ಥಳ:

ವೈದ್ಯಾಧಿಕಾರಿಯ ಹೆಸರು ಮತ್ತು ಸಹಿ
ನೊಂದಣಿ ಸಂಖ್ಯೆ
ಸರ್ಕಾರಿ ಜನರಲ್ ಆಸ್ಪತ್ರೆಯ ವಿಳಾಸ
(ಕಚೇರಿ ಮೊಹರಿನೊಂದಿಗೆ)

# ಧನ್ಯವಾದಗಳು

**ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರ್ಕಾರ ಇವರ ಅಧ್ಯಕ್ಷತೆಯ ಬಾಲ್ಯ ವಿವಾಹಗಳನ್ನು ತಡೆಯುವ ರಾಜ್ಯ ಮಟ್ಟದ ಸಮನ್ವಯ ಮತ್ತು ಪರಿಶೀಲನಾ ಸಮಿತಿ**

**ಶ್ರೀ ರಾಕೇಶ್ ಸಿಂಗ್, (ಐ.ಎ.ಎಸ್.),** ಅಪರ ಮುಖ್ಯ ಕಾರ್ಯದರ್ಶಿಗಳು, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ, ಬೆಂಗಳೂರು.

**ಶ್ರೀ ದಯಾನಂದ ಕೆ.ಎ. (ಐ.ಎ.ಎಸ್.),** ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.

**ಕಾರ್ಯನಿರ್ವಹಣಾ ತಂಡ:**

**ಜಂಟಿ ನಿರ್ದೇಶಕರು (ಪಿಡಿಎಂ),** ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.

**ಯೋಜನಾ ನಿರ್ದೇಶಕರು,** ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ಹಕ್ಕುಗಳ ರಕ್ಷಣಾ ಯೋಜನೆ, ಬೆಂಗಳೂರು.

**ಒಳಾಡಳಿತ ಇಲಾಖೆ,** ಕರ್ನಾಟಕ ಸರ್ಕಾರ

**ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ,** ಕರ್ನಾಟಕ ಸರ್ಕಾರ

**ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ**

**ಶ್ರೀ ಸುಖದೇವ್.ಎಂ.ನಾಯಕ್,** ನಿವೃತ್ತ ಜಿಲ್ಲಾ ನ್ಯಾಯಾಧೀಶರು ಹಾಗೂ ಕಾನೂನು ಸಲಹೆಗಾರರು, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.

**ಶ್ರೀ ವಾಸುದೇವ ಶರ್ಮ ಎನ್.ವಿ,** ನಿರ್ದೇಶಕರು, ಚೈಲ್ಡ್ ರೈಟ್ಸ್ ಟ್ರಸ್ಟ್, ಬೆಂಗಳೂರು

**ರಾಘವೇಂದ್ರ ಭಟ್,** ಪ್ರಾದೇಶಿಕ ಸಂಯೋಜಕರು, ಯೂನಿಸೆಫ್, ಕೊಪ್ಪಳ.

**ಶ್ರೀ ವಾಸುದೇವ.ಎಸ್.ತೋಳಬಂದಿ,** ನಿರ್ದೇಶಕರು, ಉಜ್ವಲ ಗ್ರಾಮೀಣಾಭಿವೃದ್ಧಿ ಸೇವಾ ಸಂಸ್ಥೆ, ಬಿಜಾಪುರ

## ಟಿಪ್ಪಣಿ

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಬಾಲ್ಯವಿವಾಹವನ್ನು ತಡೆಯುವಲ್ಲಿ ಸಮರ್ಪಕವಾಗಿ ಕಾರ್ಯನಿರ್ವಹಿಸಲು ರಾಜ್ಯ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಸಮನ್ವಯ ಮತ್ತು ಪರಿಶೀಲನಾ ಸಮಿತಿಗಳನ್ನು ರಚಿಸಲು ಹಾಗೂ ಗ್ರಾಮ ಪಂಚಾಯತ್ ಮಟ್ಟದಲ್ಲಿ ಮಕ್ಕಳ ಹಕ್ಕುಗಳ ರಕ್ಷಣಾ ಸಮಿತಿಯನ್ನು ರಚಿಸುವ ಬಗ್ಗೆ.

**ಓದಲಾಗಿದೆ:**

ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಪತ್ರ ಸಂಖ್ಯೆ:ಮಮಅಇ/ಮಕ/17/2011-12, ದಿನಾಂಕ:24.06.2013.

**ಪ್ರಸ್ತಾವನೆ:-**

ಬಾಲ್ಯ ವಿವಾಹ ನಿಷೇಧ ಕೋರ್ ಕಮಿಟಿಯ ವರದಿಯಲ್ಲಿ ಬಾಲ್ಯ ವಿವಾಹಗಳನ್ನು ತಡೆಯುವಲ್ಲಿ ಸಮರ್ಪಕವಾಗಿ ಕಾರ್ಯನಿರ್ವಹಿಸಲು ರಾಜ್ಯ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಸಮನ್ವಯ ಮತ್ತು ಪರಿಶೀಲನಾ ಸಮಿತಿಗಳನ್ನು ರಚಿಸುವ ಬಗ್ಗೆ ಹಾಗೂ ಗ್ರಾಮ ಪಂಚಾಯತ್ ಮಟ್ಟದಲ್ಲಿ ಮಕ್ಕಳ ಹಕ್ಕುಗಳ ರಕ್ಷಣಾ ಸಮಿತಿಯ ರಚನೆಯ ಬಗ್ಗೆ ತಿಳಿಸಲಾಗಿದೆ. ಇದನ್ನು ಬಾಲ್ಯ ವಿವಾಹ ನಿಷೇಧ ನಿಯಮಗಳಲ್ಲಿ ಅಳವಡಿಸುವಂತೆ ತಿಳಿಸಲಾಗಿದೆ. ಆದರೆ, ಸದರಿ ಸಮಿತಿಗಳನ್ನು ರಚಿಸಲು ಅಧಿನಿಯಮದಲ್ಲಿ ಉಪಬಂಧ ಕಲ್ಪಿಸದಿರುವುದರಿಂದ, ಸಮಿತಿಗಳ ರಚನೆಯ ಅಂಶವನ್ನು ನಿಯಮದಲ್ಲಿ ಸೇರ್ಪಡಿಸುವುದನ್ನು ಕೈಬಿಟ್ಟು ರಾಜ್ಯದಲ್ಲಿ ಬಾಲ್ಯವಿವಾಹವನ್ನು ತಡೆಯಲು ಸಮರ್ಪಕವಾಗಿ ಕಾರ್ಯನಿರ್ವಹಿಸುವ ದೃಷ್ಟಿಯಿಂದ ರಾಜ್ಯ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಸಮನ್ವಯ ಮತ್ತು ಪರಿಶೀಲನಾ ಸಮಿತಿಗಳನ್ನು ಮತ್ತು ಗ್ರಾಮ ಪಂಚಾಯತ್ ಮಟ್ಟದಲ್ಲಿ ಮಕ್ಕಳ ಹಕ್ಕುಗಳ ರಕ್ಷಣಾ ಸಮಿತಿಗಳನ್ನು ರಚಿಸಲು ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರು ಮೇಲೆ ಓದಲಾದ ದಿನಾಂಕ:24.06.2013ರ ಪತ್ರದಲ್ಲಿ ಕೋರಿರುತ್ತಾರೆ.

**ಆದೇಶ ಸಂಖ್ಯೆ: ಮಮಇ 105 ಮಮಅ 2013, ಬೆಂಗಳೂರು, ದಿನಾಂಕ:22.01.2014.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ, ಬಾಲ್ಯ ವಿವಾಹ ನಿಷೇಧ ಕೋರ್ ಕಮಿಟಿಯ ವರದಿಯನ್ವಯ ಬಾಲ್ಯ ವಿವಾಹಗಳನ್ನು ತಡೆಯಲು ಸಮರ್ಪಕವಾಗಿ ಕಾರ್ಯನಿರ್ವಹಿಸುವ ದೃಷ್ಟಿಯಿಂದ ರಾಜ್ಯ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಸಮನ್ವಯ ಮತ್ತು ಪರಿಶೀಲನಾ ಸಮಿತಿಗಳನ್ನು ಹಾಗೂ ಗ್ರಾಮ ಪಂಚಾಯತ್ ಮಟ್ಟದಲ್ಲಿ ಮಕ್ಕಳ ಹಕ್ಕುಗಳ ರಕ್ಷಣಾ ಸಮಿತಿಗಳನ್ನು ಅನುಬಂಧ-1 ರಿಂದ 4 ರಲ್ಲಿರುವಂತೆ ರಚಿಸಲಾಗಿದೆ ಹಾಗೂ ಸದರಿ ಸಮಿತಿಗಳು ನಿರ್ವಹಿಸಬೇಕಾದ ಕರ್ತವ್ಯಗಳನ್ನು ಸಹ ಸೂಚಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ<br>ಮತ್ತು ಅವರ ಹೆಸರಿನಲ್ಲಿ

(ಎಂ.ಕೆ.ಜಿರಲಿ)<br>ಸರ್ಕಾರದ ಅಧೀನ ಕಾರ್ಯದರ್ಶಿ-1<br>ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ<br>ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ

**ಇವರಿಗೆ:**

1) ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನಸೌಧ ಬೆಂಗಳೂರು
2) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಒಳಾಡಳಿತ ಇಲಾಖೆ, ವಿಧಾನಸೌಧ, ಬೆಂಗಳೂರು

3) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
4) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ.
5) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸಸೌಧ.
6) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ, ವಿಕಾಸಸೌಧ.
7) ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
8) ಅಧ್ಯಕ್ಷರು, ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, 4ನೇ ಮಹಡಿ ಕೃಷಿಭವನ, ನೃಪತುಂಗರಸ್ತೆ, ಬೆಂ.
9) ಎಲ್ಲಾ ಜಿಲ್ಲಾಧಿಕಾರಿಗಳು.
10) ಎಲ್ಲಾ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು.
11) ಎಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯಿತಿ.
12) ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಉಪ ನಿರ್ದೇಶಕರು.
13) ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು.
14) ಎಲ್ಲಾ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು.
15) ಎಲ್ಲಾ ಮಹಾನಗರ ಪಾಲಿಕೆ / ನಗರ ಸಭೆಯ ಆಯುಕ್ತರು.
16) ಎಲ್ಲಾ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.
17) ಎಲ್ಲಾ ತಹಶೀಲ್ದಾರರು.
18) ಎಲ್ಲಾ ಕಾರ್ಯನಿರ್ವಹಣಾಧಿಕಾರಿಗಳು, ತಾಲ್ಲೂಕು ಪಂಚಾಯತ್.
19) ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು.
20) ಎಲ್ಲಾ ತಾಲ್ಲೂಕು ವೈದ್ಯಾಧಿಕಾರಿಗಳು.
21) ಎಲ್ಲಾ ಸರ್ಕಲ್ ಪೊಲೀಸ್ ಇನ್‌ಸ್ಪೆಕ್ಟರ್‌ಗಳು.
22) ಎಲ್ಲಾ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳು.
23) ಎಲ್ಲಾ ಪುರಸಭೆ / ಪಟ್ಟಣ ಪಂಚಾಯಿತಿಯ ಮುಖ್ಯ ಅಧಿಕಾರಿಗಳು.
24) ಎಲ್ಲಾ ಉಪ ನೊಂದಣಾಧಿಕಾರಿಗಳು.
25) ಎಲ್ಲಾ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು.
26) ಎಲ್ಲಾ ಗ್ರಾಮ ಪಂಚಾಯಿತಿಯ ಅಧ್ಯಕ್ಷರು.
27) ಎಲ್ಲಾ ಪಂಚಾಯತ್ ಅಭಿವೃದ್ಧಿ ಅಧಿಕಾರಿ/ಗ್ರಾಮ ಪಂಚಾಯಿತಿ ಕಾರ್ಯದರ್ಶಿ
28) ಎಲ್ಲಾ ಕಂದಾಯ ನಿರೀಕ್ಷಕರು.
29) ಎಲ್ಲಾ ಗ್ರಾಮ ಪಂಚಾಯಿತಿ ಕೇಂದ್ರ ಸ್ಥಾನದ ಗ್ರಾಮ ಲೆಕ್ಕಿಗರು.
30) ಎಲ್ಲಾ ಗ್ರಾಮಪಂಚಾಯಿತಿ ವ್ಯಾಪ್ತಿಯ ಎಲ್ಲಾ ಸ್ಥಳೀಯ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರು / ಶಿಕ್ಷಕರು.
31) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.

(ಕ್ರಮ ಸಂಖ್ಯೆ 9 ರಿಂದ 30 ನಿರ್ದೇಶಕರ ಮುಖಾಂತರ)

**ಪ್ರತಿ:**

1. ಮಾನ್ಯ ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ & ಹಿರಿಯ ನಾಗರೀಕರ ಸಬಲೀಕರಣ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
3. ಸರ್ಕಾರದ ಉಪ ಕಾರ್ಯದರ್ಶಿ, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ & ಹಿರಿಯ ನಾಗರೀಕರ ಸಬಲೀಕರಣ ಇಲಾಖೆ ಇವರ ಆಪ್ತ ಸಹಾಯಕರು.

**ಆದೇಶ ಸಂಖ್ಯೆ:ಮಮಇ 105 ಮಮಅ 2013 ದಿನಾಂಕ:22.01.2014**

## ಅನುಬಂಧ-1

## ಬಾಲ್ಯ ವಿವಾಹಗಳನ್ನು ತಡೆಯುವ ರಾಜ್ಯ ಮಟ್ಟದ ಸಮನ್ವಯ ಮತ್ತು ಪರಿಶೀಲನಾ ಸಮಿತಿ

ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು – ಅಧ್ಯಕ್ಷರು

ಸರ್ಕಾರದ ಪ್ರಧಾನ ಕಾರ್ಯದರ್ಶಿ, ಒಳಾಡಳಿತ ಇಲಾಖೆ – ಸದಸ್ಯರು

ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ – ಸದಸ್ಯರು

ಸರ್ಕಾರದ ಪ್ರಧಾನ ಕಾರ್ಯದರ್ಶಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ – ಸದಸ್ಯರು

ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ – ಸದಸ್ಯರು

ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ – ಸದಸ್ಯರು

ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ – ಸದಸ್ಯರು

ಅಧ್ಯಕ್ಷರು, ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ – ಸದಸ್ಯರು

5 ಪ್ರಮುಖ ಸ್ವಯಂ ಸೇವಾ ಸಂಸ್ಥೆಗಳು (ಸರ್ಕಾರದಿಂದ ನಾಮ ನಿರ್ದೇಶನ) – ಸದಸ್ಯರು

ಸರ್ಕಾರದ ಪ್ರಧಾನ ಕಾರ್ಯದರ್ಶಿ, ಮಹಿಳಾ & ಮಕ್ಕಳ ಅಭಿವೃದ್ಧಿ ಇಲಾಖೆ – ಸದಸ್ಯ ಕಾರ್ಯದರ್ಶಿ

### ಕರ್ತವ್ಯಗಳು:-

1) ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಸಮನ್ವಯ ಮತ್ತು ಪರಿಶೀಲನಾ ಸಮಿತಿಗಳಿಗೆ ಬಾಲ್ಯ ವಿವಾಹ ನಿಷೇಧ ಕುರಿತಂತೆ ಸಮರ್ಪಕವಾದ ನಿರ್ದೇಶನ ನೀಡತಕ್ಕದ್ದು.
2) ಬಾಲ್ಯ ವಿವಾಹ ನಿಷೇಧಕ್ಕೆ ಸಂಬಂಧಪಟ್ಟ ಇಲಾಖೆಗಳು ಸಮನ್ವಯತೆಯಿಂದ ಕಾರ್ಯನಿರ್ವಹಿಸಲು ಅಗತ್ಯ ಸರ್ಕಾರಿ/ಆದೇಶಗಳು/ಸುತ್ತೋಲೆಗಳ/ಮಾರ್ಗ ಸೂಚಿಗಳನ್ನು ಹೊರಡಿಸತಕ್ಕದ್ದು.
3) ಸಮಿತಿಯು ಬಾಲ್ಯ ವಿವಾಹ ನಿಷೇಧದ ಪ್ರಕರಣದಲ್ಲಿ ಕೈಗೊಂಡ ಕ್ರಮದ ಮತ್ತು ನೊಂದವರಿಗೆ ಪುನರ್ವಸತಿ ಕಲ್ಪಿಸುವ ಬಗ್ಗೆ ಹಾಗೂ ಬಾಲ್ಯ ವಿವಾಹ ನಿಷೇಧದ ಪ್ರಕ್ರಿಯೆಯಲ್ಲಿ ಪಾಲ್ಗೊಂಡ ಕುಟುಂಬಗಳಿಗೆ/ಆಯೋಜಕರಿಗೆ ಶಿಕ್ಷೆಗೆ ಒಳಪಡಿಸುವಲ್ಲಿ ಮತ್ತು ನಿಷೇಧಾಧಿಕಾರಿಗಳು ಕರ್ತವ್ಯದಲ್ಲಿ ಲೋಪವೆಸಗಿದ್ದಲ್ಲಿ ತೆಗೆದುಕೊಂಡ ಕ್ರಮಗಳ ಬಗ್ಗೆ ಪರಿಶೀಲಿಸುವುದು.
4) ಬಾಲ್ಯ ವಿವಾಹ ನಿಷೇಧ ಕುರಿತಂತೆ ಜಿಲ್ಲಾ ಮಟ್ಟದ ಕಾರ್ಯನಿರ್ವಹಣೆಯ ಬಗ್ಗೆ ಪ್ರತಿ 6 ತಿಂಗಳಿಗೊಮ್ಮೆ ಪರಿಶೀಲಿಸುವುದು.

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:-ಬಾಲ್ಯವಿವಾಹ ನಿಷೇಧ ಕಾಯ್ದೆ-2006 ನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ನಿರ್ದೇಶನಾಲಯದಲ್ಲಿ ಉಸ್ತುವಾರಿ ಕೋಶವನ್ನು ಸ್ಥಾಪಿಸಿ ಹುದ್ದೆಗಳ ಸೃಜನೆ ಹಾಗೂ ಭರ್ತಿ ಮಾಡುವ ಬಗ್ಗೆ -ಆದೇಶ

ಓದಲಾಗಿದೆ:

1. ಸರ್ಕಾರದ ಅಧಿಸೂಚನೆ ಸಂಖ್ಯೆ:ಮಮಇ 170 ಮಮಅ 2006 ದಿ:22-11-2010
2. ಬಾಲ್ಯ ವಿವಾಹ ತಡೆ ಕೋರ್ ಕಮಿಟಿಯ ಅಂತಿಮ ವರದಿ ದಿ:30-06-2011
3. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಏಕಕಡತ ಸಂಖ್ಯೆ: ಮಮಅಇ/ಮಕ/17/2011-12

------

ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ದಿ:22-11-2010 ರ ಆದೇಶದಲ್ಲಿ ಬಾಲ್ಯವಿವಾಹ ಕಾಯ್ದೆ 2006 ನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಸಂಬಂಧ ಕರ್ನಾಟಕ ಉಚ್ಛ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ:11154/2006 ರಲ್ಲಿ ನೀಡಿದ ನಿರ್ದೇಶನದಂತೆ ಕ್ರಿಯಾ ಯೋಜನೆಯನ್ನು ತಯಾರಿಸಲು ಭಾರತದ ಸರ್ವೋಚ್ಛ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿಗಳಾದ ಜಸ್ಟಿಸ್ ಶಿವರಾಜ್ ವಿ.ಪಾಟೀಲ್ ಇವರ ಅಧ್ಯಕ್ಷತೆಯಲ್ಲಿ ಕೋರ್ ಕಮಿಟಿಯನ್ನು ರಚಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ(2) ರಲ್ಲಿ ಓದಲಾದ ದಿ:30-06-2011 ರ ಕೋರ್ ಕಮಿಟಿಯ ವರದಿಯಲ್ಲಿ ಬಾಲ್ಯವಿವಾಹವನ್ನು ತಡೆಗಟ್ಟುವ ನಿಟ್ಟಿನಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಸಂಬಂಧಪಟ್ಟ ಇತರೆ ಇಲಾಖೆಗಳು ತೆಗೆದುಕೊಳ್ಳಬೇಕಾದ ಕ್ರಮಗಳು ಹಾಗೂ ಬಾಲ್ಯವಿವಾಹ ನಿಷೇಧ ಕಾಯ್ದೆಯನ್ನು ರಾಜ್ಯದಲ್ಲಿ ಪರಿಣಾಮಕಾರಿಯಾಗಿ ಜಾರಿಗೊಳಿಸಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ನಿರ್ದೇಶನಾಲಯದಲ್ಲಿ ಒಂದು ಉಸ್ತುವಾರಿ ಕೋಶವನ್ನು ಸ್ಥಾಪಿಸಲು ಶಿಫಾರಸ್ಸು ಮಾಡಿದೆ.

ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ಏಕ ಕಡತದಲ್ಲಿ ನಿರ್ದೇಶನಾಲಯವು ಪ್ರಸ್ತಾವನೆ ಸಲ್ಲಿಸಿ ಪ್ರಸ್ತುತ ಇಲಾಖೆಯಲ್ಲಿರುವ ನಿರ್ದೇಶಕರು ಹಾಗೂ ಜಂಟಿ ನಿರ್ದೇಶಕರು (ಪಿಡಿಐಂ) ಹುದ್ದೆಗಳ ಜೊತೆಗೆ ಈ ಕೆಳಕಂಡ ಹುದ್ದೆಗಳನ್ನು ಉಸ್ತುವಾರಿ ಕೋಶಕ್ಕೆ ಸೃಜಿಸಿ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಸರ್ಕಾರವು ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಮಮಇ 501 ಎಸ್‌ಜಿಡಿ 2011
ಬೆಂಗಳೂರು ದಿನಾಂಕ:16-11-2011

------

ರಾಜ್ಯದಲ್ಲಿ ಬಾಲ್ಯವಿವಾಹ ನಿಷೇಧ ಕಾಯ್ದೆ 2006 ನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಉಸ್ತುವಾರಿ ಕೋಶವನ್ನು ಸ್ಥಾಪಿಸಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ

ಇಲಾಖೆಯಲ್ಲಿ ಈ ಕೆಳಕಂಡ ಹುದ್ದೆಗಳನ್ನು ಸೃಜಿಸಿ ಸರ್ಕಾರದ ಮಂಜೂರಾತಿ ನೀಡಲಾಗಿದೆ.

| ಕ್ರ. ಸಂ | ಪದನಾಮ | ಹುದ್ದೆಗಳ ಸಂಖ್ಯೆ | ನೇಮಕಾತಿ ವಿಧಾನ |
|---|---|---|---|
| 1 | ಉಪನಿರ್ದೇಶಕರು | 1 | ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ |
| 2 | ಸಹಾಯಕ ನಿರ್ದೇಶಕರು | 1 | ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ |
| 3 | ಪ್ರಥಮ ದರ್ಜೆ ಸಹಾಯಕರು | 2 | ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ |
| 4 | ಗಣಕಯಂತ್ರ ನಿರ್ವಾಹಕರು | 2 | ಹೊರಗುತ್ತಿಗೆ (Out source) ಆಧಾರದಿಂದ |
| 5 | ಸೇವಕರು | 1 | ಹೊರಗುತ್ತಿಗೆ (Out source) ಆಧಾರದಿಂದ |

ಮೇಲ್ಕಂಡ ಹುದ್ದೆಗಳ ಸೃಜನೆ ಹಾಗೂ ಭರ್ತಿಗೆ ಪ್ರಸ್ತುತ ಜಾರಿಯಲ್ಲಿರುವ ಮಿತವ್ಯಯ ಆದೇಶ ~~ಸಡಿಲಿಸಿ ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ:ಆಇ 70ರ ವೆಚ್ಚ-3/11 ದಿ:03-11-2011 ರಲ್ಲಿ~~ ಸಹಮತಿ ನೀಡಿರುತ್ತದೆ. ಅದರನ್ವಯ ಆದೇಶವನ್ನು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

[ಬಿ.ಕಮಲಮ್ಮ]
ಸರ್ಕಾರದ ಅಧೀನ ಕಾರ್ಯದರ್ಶಿ-2,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.

ಗೆ:
ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು ಇವರಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು ಕೋರಿದೆ.

ಪ್ರತಿಯನ್ನು:
1. ...ಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ...ರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.
3. ...ಟಿ ನಿರ್ದೇಶಕರು (ಪಿಡಿಎಂ), ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.
4. ಉಪನಿರ್ದೇಶಕರು (ಮಕ್ಕಳ ಕಲ್ಯಾಣ) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಪ್ರಧಾನ ಕಛೇರಿ, ಬೆಂಗಳೂರು.
5. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ(ವೆಚ್ಚ 3&9)
6. ಸರ್ಕಾರದ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳಿಗೆ
7. ಸರ್ಕಾರದ ಉಪ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಆಪ್ತ ಸಹಾಯಕರಿಗೆ.
8. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

## ಕರ್ನಾಟಕ ಸರ್ಕಾರ

ಸಂ.ಮಮಇ 501 ಎಸ್‌ಜಿಡಿ 2011

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:18-01-2012.

### ಸೇರ್ಪಡೆ ಆದೇಶ

ಸರ್ಕಾರದ ಆದೇಶ ಸಂಖ್ಯೆ:ಮಮಇ 501 ಎಸ್‌ಜಿಡಿ 2011 ದಿ:16-11-2011 ರ ಆದೇಶ ಭಾಗದಲ್ಲಿ ನಮೂದಿಸಿರುವ ಹುದ್ದೆಗಳಿಗೆ ಈ ಕೆಳಕಂಡಂತೆ ವೇತನ ಶ್ರೇಣಿಯನ್ನು ಸೇರ್ಪಡೆ ಮಾಡಿ ಆದೇಶಿಸಲಾಗಿದೆ.

| ಕ್ರ. ಸಂ | ಪದನಾಮ | ಹುದ್ದೆಗಳ ಸಂಖ್ಯೆ | ವೇತನ ಶ್ರೇಣಿ ರೂ. |
|---|---|---|---|
| 1 | ಉಪನಿರ್ದೇಶಕರು | 1 | ರೂ.18150-26925 |
| 2 | ಸಹಾಯಕ ನಿರ್ದೇಶಕರು | 1 | ರೂ.16400-26250 |
| 3 | ಪ್ರಥಮ ದರ್ಜೆ ಸಹಾಯಕರು | 2 | ರೂ.7275-13550 |
| 4 | ಗಣಕಯಂತ್ರ ನಿರ್ವಾಹಕರು | 2 | ಬಾಹ್ಯ ಮೂಲದಿಂದ |
| 5 | ಸೇವಕರು | 1 | |

ಮೇಲ್ಕಂಡ ವೇತನ ಶ್ರೇಣಿಯು ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಪರಿಷ್ಕರಿಸುವ ಷರತ್ತಿಗೆ ಒಳಪಟ್ಟಿರುತ್ತದೆ.

ಮೇಲಿನ ಹುದ್ದೆಗಳಿಗೆ ತಗಲುವ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2235-02-001-0-01 ರಡಿ ಒದಗಿಸುವ ಆಯವ್ಯಯ ಅನುದಾನದಲ್ಲಿ ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಬಿ.ಕಮಲಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ-2,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.

ಗೆ:
ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು ಇವರಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು ಕೋರಿದೆ.

ಪ್ರತಿಯನ್ನು:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.
3. ಜಂಟಿ ನಿರ್ದೇಶಕರು (ಪಿಡಿಎಂ), ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.
4. ಉಪನಿರ್ದೇಶಕರು (ಮಕ್ಕಳ ಕಲ್ಯಾಣ) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಪ್ರಧಾನ ಕಛೇರಿ, ಬೆಂಗಳೂರು.
5. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ(ವೆಚ್ಚ 3&9)
6. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳಿಗೆ
7. ಸರ್ಕಾರದ ಜಂಟಿ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಆಪ್ತ ಸಹಾಯಕರಿಗೆ.
8. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.